Mr. spekar : Rule 363 as well as rule 348 ಪ್ರಕಾರ ನಾನು ಆಜ್ಞೆ ಮಾಡಿದ್ದೇನೆ. ದಯವಿಟ್ಟು ಅದನ್ನೇಕೆ ಪುನಃ ಮಾಡುತ್ತೀರಿ?

ಶ್ರೀ ಎಸ್.ಎಸ್. ಪಾಟೀಲ್ : ಚರ್ಚೆ ಬೇಕಾಗಿಲ್ಲ ಆದರೆ, ಅದು ಪ್ರಿಸಿಡೆಂಟ್ ಆಗಬಾರದು.

ಶ್ರೀ ಡಿ.ಬಿ. ಚಂದ್ರೇಗೌಡ : ಸಂಪ್ರದಾಯಗಳು ಆಕಾಶದಿಂದ ಬೀಳುವುದಿಲ್ಲ. ಅನುಭವದಿಂದ ಬರುತ್ತವೆ. Conventions ಇವೆಲ್ಲಾ They don't fall from heaven.

ಅಧ್ಯಕ್ಷರು : ರೂಲ್ 363ರ ಪ್ರಕಾರ ನನಗೇ ಅಧಿಕಾರವಿದೆ. 348ರ ಪ್ರಕಾರ ಅಲ್ಲ, According to rule 363 I have got every power-residuary power.

ಶ್ರೀ ಕೆ. ಜಯಪ್ರಕಾಶ್ ಹೆಗಡೆ : ಮಾನ್ಯ ಅಧ್ಯಕ್ಷರೆ, ನಮಗೆ ಮತ್ತು ಕೃಷ್ಣಮೂರ್ತಿಯವರಿಗೆ...........

ಅಧ್ಯಕ್ಷರು : ತಾವು ದಯಮಾಡಿ ಕುಳಿತುಕೊಳ್ಳಿ ಮಾನ್ಯ ಜಗದೀಶ್‌ಶೆಟ್ಟರ್‌ರವರೆ, ಹೊರಗಡೆ ಏನಾಗಿದೆ ಆ ವಿಷಯವನ್ನು ಪುನಹ ನಾನು ನಿಮಗೆ ಹೇಳಬೇಕಾಗಿಲ್ಲ. ಮಾನ್ಯ ಸಂಸದೀಯ ವ್ಯವಹಾರದ ಸಚಿವರು ಆ ನಿರ್ಣಯವನ್ನು ವಾಪಸ್ ಪಡೆದಿರುವುದರಿಂದ ತಮ್ಮನ್ನೆಲ್ಲಾ ಒಳಗಡೆ ಕರೆಸಿದ್ದೇನೆ. ಎರಡನೆಯದಕ್ಕೆ ಇನ್ನೊಂದು ವಿವರಣೆಯನ್ನು ಕೊಡಬೇಕಾಗುತ್ತದೆ. ಅದೇನೆಂದರೆ, ಮೊದಲು ಅಡ್‌ಜರ್ನ್‌ಮೆಂಟ್ ಮೋಷನ್‌ನ್ನು ಮೂವ್ ಮಾಡಿದ್ದಾರೆಂದು... ನಾನು ಹೇಳಬೇಕಾಗಿದ್ದರೆ ನನ್ನ ಮುಂದೆ ಆ ಕಡತ ಇರಲಿಲ್ಲ. ಆ ಕಡತವನ್ನು ತಂದುಕೊಟ್ಟಾದಮೇಲೆ ಅಡ್‌ಜರ್ನ್‌ಮೆಂಟ್ ಮೋಷನ್‌ಅನ್ನು ಮೂವ್ ಮಾಡಿ, ನಿನ್ನೆ ಡಿಸ್‌ಕಷನ್ ಆಗಿದ್ದರಿಂದ ರಿಜೆಕ್ಟ್ ಮಾಡಿದ್ದಷ್ಟೇ ಹೊರತು there was no bad intention from my side. ಎಂದು ನಾನು ನಿಮಗೆ ಹೇಳಬೇಕಾಗಿತ್ತು ಕಡತವನ್ನು ಆಮೇಲೆ ನಮ್ಮ ಕಾರ್ಯದರ್ಶಿಯವರು ತಂದುಕೊಟ್ಟಿದ್ದರಿಂದ ಅನಂತರ ನಾನು ಅದನ್ನು ನೋಡಿದೆ. ಈ ರೀತಿ ಆಗಬಾರದಿತ್ತು. ಆಗಿಹೋಗಿದೆ, ಇದನ್ನು ಎಲ್ಲರೂ ಈ ಕಡೆಯ, ಆ ಕಡೆಯ ಎಲ್ಲಾ ಪಕ್ಷದ ಸದಸ್ಯರುಗಳು ಇದನ್ನು ಮರೆತು ನಮ್ಮ ಕೆಲಸವನ್ನು ಮುಂದುವರೆಸೋಣ. ನೀವು ಸಬ್ಜೆಕ್ಟ್ ಮ್ಯಾಟರ್‌ನ್ನು ಪಾರಂಭ ಮಾಡಿರಿ.

ಶ್ರೀ ಜಗದೀಶ್‌ಶೆಟ್ಟರ್ : ಮಾನ್ಯ ಅಧ್ಯಕ್ಷರೆ, ತಮ್ಮ ಈ ಪೀಠವೇನಿದೆ ಅದಕ್ಕೆ ನಮ್ಮೆಲ್ಲರ ಗೌರವವಿದೆ. ಇವತ್ತೇನು ಘಟನೆಗಳಾಗಿವೆ ಅದರ ಬಗ್ಗೆ ಹೆಚ್ಚು ಹಿಂದಕ್ಕೆ ಹೋಗಲಾರದೆ ಅದನ್ನು ಮರೆತು ಮುಂದೆ ತಾವು ಏನೇನು ನಡೆಯಿತು ಎಂದು ಹೇಳಿದ್ದೀರಿ.. ಆದ್ದರಿಂದ ಅದನ್ನು ಹೆಚ್ಚು ಬೆಳಸಲಾರದೆ, ಇವತ್ತು ತಾವೇನು ಮಾಡಿದ್ದೀರಿ.

ಅಧ್ಯಕ್ಷರು : ಎಲ್ಲರೂ ಮರೆಯೋಣ. ನಾನೂ ಮರೆಯುತ್ತೇನೆ.

8. ನಿಯಮ 69ರ ಮೇರೆಗೆ ಚರ್ಚೆ

ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲ್ಲೂಕಿನ ಎಂ.ರಾಂಪುರ ಗ್ರಾಮದಲ್ಲಿ ಒಂದೇ ಕುಟುಂಬದ ಆರು ಮಂದಿ ಆತ್ಮಹತ್ಯೆ ಮಾಡಿಕೊಂಡಿರುವ ಬಗ್ಗೆ

ಶ್ರೀ ಜಗದೀಶ್‌ಶೆಟ್ಟರ್ (ವಿರೋಧಪಕ್ಷದ ನಾಯಕರು) : ಮಾನ್ಯ ಅಧ್ಯಕ್ಷರೆ; ಇಲ್ಲಿ ಬಹಳ ಮುಖ್ಯವಾಗಿ ನಾವು ಇವತ್ತು ಬೆಳಿಗ್ಗೆ ನಿಲುವಳಿ ಸೂಚನೆಯನ್ನು ತರಲು ಮುಖ್ಯವಾದ ಕಾರಣವೇನೆಂದರೆ, ಇವತ್ತಿನ ಬೆಳಗಿನ ಪತ್ರಿಕೆಗಳಲ್ಲಿ ಅಂದರೆ ಪ್ರಜಾವಾಣಿ, ಕನ್ನಡಪ್ರಭ, ವಿಜಯಕರ್ನಾಟಕ ಪತ್ರಿಕೆಯಲ್ಲಿ ಇರಬಹುದು, ಉದಯವಾಣಿಯಲ್ಲಿ ನಿನ್ನೆಯ ಘಟನೆಯ ಬಗ್ಗೆ ಸಂಪಾದಕೀಯದಲ್ಲಿ ಲೇಖನ ಬಂದಿದೆ. ಸಂಯುಕ್ತ ಕರ್ನಾಟಕ ಪತ್ರಿಕೆಯಲ್ಲಿರಬಹುದು. ಎಲ್ಲಾ ಪತ್ರಿಕೆಗಳ ಮುಖಪುಟದಲ್ಲಿ

ಒಂದೇ ಕುಟುಂಬದ ಆರು ಜನರ ಆತ್ಮಹತ್ಯೆಯ ಬಗ್ಗೆ ಸುದ್ದಿ ಬಂದಿರುವುದನ್ನು ನಾವು ನೋಡುತ್ತಿದ್ದೇವೆ. ಬಹುಶಃ ನಮ್ಮ ರಾಜ್ಯದ ಇತಿಹಾಸದಲ್ಲಿ ಈ ರೀತಿಯ ಘೋರವಾದ ದುರಂತ ಸಂಭವಿಸಿರಲಿಲ್ಲವೆಂದು ಈ ಸಂದರ್ಭದಲ್ಲಿ ಹೇಳಬಯಸುತ್ತಿದ್ದೇನೆ. ಇದು ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲ್ಲೂಕಿನ ಎಂ.ರಾಂಪುರ ಗ್ರಾಮದಲ್ಲಿ ನಡೆದದ್ದು. ಹೂಜಿ ಕುಟುಂಬಕ್ಕೆ ಸೇರಿದ ಒಂದೇ ಕುಟುಂಬದ ಆರು ಜನ ಸದಸ್ಯರು ಕ್ರಿಮಿನಾಶಕ ವಿಷಯವನ್ನು ತೆಗೆದುಕೊಂಡು ಮೃತಪಟ್ಟಿರುವ ಸುದ್ದಿಯನ್ನು ನಾವು ನೋಡುತ್ತಿದ್ದೇವೆ. ಇವತ್ತು ಬೇರೆ ಬೇರೆ ಕಡೆಗಳಲ್ಲಿ ಆತ್ಮಹತ್ಯೆ ಪ್ರಕರಣಗಳು ನಡೆಯುತ್ತಿವೆ. ಆದರೆ ಆ ಪ್ರಕರಣಗಳ ಹಿನ್ನೆಲೆಯನ್ನು ನಾವು ನೋಡಬೇಕಾಗುತ್ತದೆ. ಕೆಲವೊಂದು ವೈಯಕ್ತಿಕ ದ್ವೇಷಗಳ ಸಲುವಾಗಿ ಇರಬಹುದು. ಕೆಲವೊಂದು ಮಾನಸಿಕ ಸ್ಥಿಮಿತವನ್ನು ಕಳೆದುಕೊಂಡು ಇರಬಹುದು. ಬೇರೆ ಬೇರೆ ಕಾರಣಗಳಿಗೂ ಕೆಲವರು ಆತ್ಮಹತ್ಯೆ ಮಾಡಿಕೊಂಡಿರಬಹುದು. ಕೆಲವು ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಫೇಲಾಗಿದ್ದಕ್ಕೂ ಆತ್ಮಹತ್ಯೆ ಮಾಡಿಕೊಳ್ಳುತ್ತಿರುವುದನ್ನು ನಾವು ಇವತ್ತು ನೋಡುತ್ತಿದ್ದೇವೆ. ಆದರೆ ಇವತ್ತು ಈ ಘಟನೆ ಬಗ್ಗೆ ಪತ್ರಿಕೆಗಳಲ್ಲಿ ಮೇಲ್ನೋಟದ ವರದಿಗಳು ಬಂದಿವೆ. ಈ ಒಂದು ರೈತ ಕುಟುಂಬದ ಆರೂ ಜನ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅವರು ಅಲ್ಲಿ ಇಲ್ಲಿ ಹೊಲದಲ್ಲಿ ಒಂದಿಷ್ಟು ಕೂಲಿ–ನಾಲಿ ಕೆಲಸ ಮಾಡಿಕೊಂಡು ಬದುಕು ಸಾಗಿಸುತ್ತಿದ್ದಂತಹ ಅತ್ಯಂತ ಬಡ ಕುಟುಂಬದ ಜನರಾಗಿದ್ದರು. ಈ ಆರೂ ಜನ ಕುಟುಂಬದ ಸದಸ್ಯರು ಆತ್ಮಹತ್ಯೆ ಮಾಡಿಕೊಳ್ಳುವಂತಹ ಪರಿಸ್ಥಿತಿ ಏಕೆ ನಿರ್ಮಾಣವಾಯಿತು ಎನ್ನುವ ಬಗ್ಗೆ ನಾವು ಇವತ್ತು ಚಿಂತನೆಯನ್ನು ಮಾಡಬೇಕಾಗುತ್ತದೆ. ಇವತ್ತು ಸುಪ್ರೀಂ ಕೋರ್ಟ್ ಸಹಿತ ತನ್ನ ಒಂದು ತೀರ್ಪಿನಲ್ಲಿ ದೇಶದಲ್ಲಿನ ಯಾವುದೇ ರಾಜ್ಯದಲ್ಲಿ ಭಾರತದ ಯಾರೇ ಒಬ್ಬ ನಾಗರೀಕ ಉಪವಾಸ ಅಥವಾ ಹಸಿವಿನಿಂದ ಸಾಯಬಾರದು ಎಂದು ಹೇಳಿದೆ. ಅದರ ಬಗ್ಗೆ ಈಗಾಗಲೇ ಸುಪ್ರೀಂ ಕೋರ್ಟ್ ತನ್ನ ತೀರ್ಪಿನಲ್ಲಿ ಹೇಳಿದೆ. ಎಲ್ಲಾ ಸರ್ಕಾರಗಳಿಗೆ ಸುಪ್ರಿಂ ಕೋರ್ಟ್ ಈ ದಿಸೆಯಲ್ಲಿ ಡೈರೆಕ್ಷನ್ ಅನ್ನೂ ಸಹ ಕೊಟ್ಟಿದ್ದಾರೆ. ಉಪವಾಸದಿಂದ ಸಾಯುವಂತಹ ಪರಿಸ್ಥಿತಿ ನಿರ್ಮಾಣವಾಗಬಾರದು. ಅವರಿಗೆ ಆಹಾರವನ್ನು ಕೊಡುವಂತಾದ್ದು, ಅವರು ದಿನನಿತ್ಯ ಜೀವನ ನಡೆಸುವುದಕ್ಕೆ ವ್ಯವಸ್ಥೆ ಮಾಡುವಂತಾದ್ದು ಸರ್ಕಾರದ ಆದ್ಯ ಕರ್ತವ್ಯಗಳಲ್ಲಿ ಒಂದಾಗಿದೆ ಮತ್ತು ಅದು ನಮ್ಮ ಸಂವಿಧಾನದ ಒಂದು ಹಕ್ಕೂ ಸಹ ಆಗಿದೆ. ಆದರೆ ಇಂತಹ ಪರಿಸ್ಥಿತಿ ಇದ್ದಂತಹ ಸಂದರ್ಭದಲ್ಲೂ ಸಹಿತ ಇವತ್ತು ಹಸಿವಿನಿಂದ ರೈತ ಕುಟುಂಬದ ಆರೂ ಜನರು ಆತ್ಮಹತ್ಯೆ ಮಾಡಿಕೊಳ್ಳುತ್ತಾರೆಂದರೆ, ಬಹುಶಃ ಇದೊಂದು ದೊಡ್ಡದಾದಂತಹ ದುರಂತವೆಂದು ನಾನು ಹೇಳಬೇಕಾಗುತ್ತದೆ. ಇದಕ್ಕೆ ಉದಾಹರಣೆ ಈ ಪತ್ರಿಕಾ ವರದಿಯಲ್ಲಿದೆ. ತೀವ್ರ ಬಡತನ, ಹಸಿವು, ಅನಾರೋಗ್ಯ ಮತ್ತು ಸಾಲದ ಬಾಧೆ ತಾಳಲಾರದೆ ಈ ಆರೂ ಜನ ರೈತ ಕುಟುಂಬದ ಸದಸ್ಯರು ಆತ್ಮಹತ್ಯೆ ಮಾಡಿಕೊಂಡರು ಎನ್ನುವ ಮಾತು ಇದರಲ್ಲಿದೆ. ಘಟನೆ ನಡೆದ ಸ್ಥಳಕ್ಕೆ ಅಲ್ಲಿನ ಪೊಲೀಸ್ ಅಧಿಕಾರಿಗಳು ಹೋಗಿದ್ದಾರೆ. ಅಲ್ಲಿ ಅವರು ವಿಚಾರಣೆ ಮಾಡಿದ್ದಾರೆ. ವಿಚಾರಣೆ ಮಾಡಿದಾಗ ಕಳೆದ ಕೆಲವು ತಿಂಗಳಿನಿಂದ ಗ್ರಾಮದಲ್ಲಿ ಕೂಲಿಯೂ ಸಿಗದೇ ಪರದಾಡುತ್ತಿದ್ದುದು ತಿಳಿದು ಬಂದಿದೆ. ಮಾನ್ಯ ಅಧ್ಯಕ್ಷರೇ, ಬರಗಾಲದ ಪರಿಸ್ಥಿತಿ ಕುರಿತು ಸಾಕಷ್ಟು ವಿಚಾರಗಳ ಬಗ್ಗೆ ನಾವು ಇಲ್ಲಿ ಪ್ರಸ್ತಾಪ ಮಾಡಿದ್ದೇವೆ. ಯಾರು ಕೂಲಿಕಾರರು ಇದ್ದಾರೋ, ಅವರಿಗೆ ಕೆಲಸ ಸಿಗಬೇಕು ಎನ್ನುವ ಉದ್ದೇಶದಿಂದ ಕೂಲಿಗಾಗಿ ಕಾಳು ಯೋಜನೆಯನ್ನು ಜಾರಿಗೊಳಿಸಲಾಗುತ್ತಿದೆ. ಇವತ್ತು ಈ ಕುಟುಂಬಕ್ಕೆ ಅವರು ನಾವು ಕೆಲಸ ಮಾಡುತ್ತೇವೆ ಎಂದರೂ ಕೂಡ ಅವರ ಕೈಗೆ ಕೆಲಸ ಕೊಡುವಂತಹ ಪರಿಸ್ಥಿತಿ ಅಲ್ಲಿ ಇಲ್ಲ. ಕಳೆದ ಹಲವಾರು ದಿನಗಳಿಂದ ಅವರು ನಮಗೆ ಕೆಲಸ ಕೊಡಿ ಎಂದು ಕೇಳಿದ್ದರೂ ಅವರಿಗೆ

ಕೆಲಸ ಕೊಡಲಾರದಂತಹ ಪರಿಸ್ಥಿತ ಅಲ್ಲಿ ಇದ್ದುದ್ದು ನಮಗೆ ತಿಳಿದು ಬಂದಿದೆ. ಆ ಬಗ್ಗೆ ಪತ್ರಿಕೆಯಲ್ಲಿ ಬರೆದಿದ್ದಾರೆ. ಕಳೆದ ಕೆಲವು ತಿಂಗಳುಗಳಿಂದ ಗ್ರಾಮದಲ್ಲಿ ಕೂಲಿಯೂ ಸಿಗದೇ ಅವರು ಪರದಾಡುತ್ತಿದ್ದರು. ಅಂದರೆ ಇದರ ಅರ್ಥ ಏನಾಗುತ್ತದೆ? ಎಲ್ಲಿ ಬರಗಾಲ ಕಾಮಗಾರಿಗಳನ್ನು ಕೈಗೊಳ್ಳಬೇಕಾಗಿತ್ತೋ ಯಾವ ಗ್ರಾಮಗಳಲ್ಲಿ ಅದರ ಅವಶ್ಯಕತೆ ಇತ್ತೋ, ಅಲ್ಲಿ ಅವುಗಳನ್ನು ಕೈಗೊಂಡಿಲ್ಲ ಎಂಬುದು ಇದರಿಂದ ತಿಳಿದು ಬರುತ್ತದೆ. ಅವರಿಗೆ ಒಂದಿಷ್ಟು ಅಕ್ಕಿ ಒಂದಿಷ್ಟು ಕೂಲಿಯ ಹಣ ಅವರ ಕೈಗೆ ಸಿಕ್ಕಿದ್ದರೆ ಬಹುಶಃ ಆ ಕುಟುಂಬ ಈ ರೀತಿ ದುರಂತಕ್ಕೆ ಈಡಾಗುತ್ತಿರಲಿಲ್ಲ. ಎನ್ನುವುದನ್ನು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮುಂದುವರೆದು ಪತ್ರಿಕಾ ವರದಿಯಲ್ಲಿ, ಇಲ್ಲಿ ಅವರು ಎರಡು ತಿಂಗಳಿನಿಂದ ಅರೆ ಹೊಟ್ಟೆಯಲ್ಲಿ ಬದುಕುತ್ತಿದ್ದರು. ಕಳೆದ ಎರಡು ದಿನಗಳಿಂದ ಪೂರ್ತಿ ಉಪವಾಸ ಇದ್ದರು ಎಂದು ಕುಟುಂಬದ ಆಪ್ತರಾಗಿದ್ದ ತಮ್ಮಣ್ಣ ನಡುವಿನಮನಿ ಮತ್ತು ಚನ್ನಬಸಪ್ಪ ಪೂಜಾರ್ ತಿಳಿಸಿದರು. ಅದೇ ರೀತಿಯಲ್ಲಿ ಅಲ್ಲಿದ್ದಂತಹ ಪೊಲೀಸ್ ಅಧಿಕಾರಿ ಸಹಿತ ಹೇಳಿದ್ದು, ಪತ್ರಿಕೆಗಳಲ್ಲಿ ವರದಿಯಾಗಿದೆ. ಬಡತನ, ಸಾಲ ಬಾಧೆಯಿಂದ ಜಿಗುಪ್ಸೆಗೊಂಡು, ಬದುಕಿದ್ದರೂ ತಂದೆಗೆ ಭಾರ, ಸಾಯುವುದೇ ಲೇಸು ಎಂಬ ತೀರ್ಮಾನಕ್ಕೆ ಬಂದು ಎಲ್ಲರೂ ಒಟ್ಟಿಗೇ ವಿಷ ಸೇವಿಸಿದ್ದಾರೆಂದು ಶಂಕಿಸಲಾಗಿದೆ. ಸ್ಥಳದಲ್ಲಿದ್ದ ಡಿಎಸ್‌ಪಿ ಸುಭಾಷ್ ಗುಡಿಮನಿ ಸುದ್ದಿಗಾರರಿಗೆ ತಿಳಿಸಿದರು. ಅಂದರೆ ಪೊಲೀಸ್ ಅಧಿಕಾರಿಗಳು ಸುದ್ಧಿಗಾರರ ಜೊತೆಯಲ್ಲಿ ಮಾತನಾಡುವಂತಹ ಸಂದರ್ಭದಲ್ಲಿ ಈ ಹಿನ್ನೆಲೆಯಲ್ಲಿ ಇವರು ಆತ್ಮಹತ್ಯೆ ಮಾಡಿಕೊಂಡರು ಎಂದು ಹೇಳಿದ್ದಾರೆ. ಇದು ಒಂದು ಪತ್ರಿಕೆಯಲ್ಲಿ ಬಂದಿದೆ. ಹಾಗೆಯೇ ಮತ್ತೊಂದು ಪತ್ರಿಕೆಯಲ್ಲಿ ಬಂದಿರುವಂತಾದ್ದನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ ಇಲ್ಲಿ ಕಳೆದ ಒಂದು ವಾರದಿಂದ ಮನೆಯಲ್ಲಿ ಒಲೆಯನ್ನೇ ಹೊತ್ತಿಸಿರಲಿಲ್ಲ. ಒಲೆಯನ್ನೇ ಹೊತ್ತಿಸಿಲ್ಲದೇ ಅವರು ಯಾವ ರೀತಿಯಾಗಿ ಬದುಕಿರಬಹುದು? ಒಂದೇ ಒಂದು ಸೇರು ಕಾಳೂ ಇಲ್ಲ, ಅದಕ್ಕಾಗಿ ಅವರು ಹಸಿವಿನಿಂದ ಆತ್ಮಹತ್ಯೆ ಮಾಡಿಕೊಂಡರು ಎಂದು ಅಲ್ಲಿದ್ದಂತಹವರು ಬಿಕ್ಕಿಬಿಕ್ಕಿ ಅತ್ತರು. ಅಂದರೆ ಅವರು ಯಾವ ಧಾರುಣ ಪರಿಸ್ಥಿತಿಯಲ್ಲಿ ಅವರು ಇದ್ದರು ಎಂಬುದು ಅರ್ಥವಾಗುತ್ತದೆ. ನಾವು ಬರಗಾಲದ ಪರಿಸ್ಥಿತಿ ಬಗ್ಗೆ ಇಲ್ಲಿ ಚರ್ಚೆ ಮಾಡುವಂತಹ ಸಂದರ್ಭದಲ್ಲಿ ನಾನೊಂದು ವಿಚಾರವನ್ನು ಪ್ರಸ್ತಾಪ ಮಾಡಿದ್ದೆ. ಮಾನ್ಯ ಮಂತ್ರಿಗಳಾದ ಶ್ರೀ ಅಲ್ಲಂ ವೀರಭದ್ರಪ್ಪನವರ ಕ್ಷೇತ್ರದಲ್ಲಿ ಇದೇ ರೀತಿಯಾದಂತಹ ಹಸಿವಿನಿಂದ ಸಾವು ಉಂಟಾಗಿತ್ತು ಆತ್ಮಹತ್ಯೆ ಮಾಡಿಕೊಳ್ಳಲಾಗಿತ್ತು. ಆ ಘಟನೆ ಬಗ್ಗೆ ಹೇಳಿದಂತಹ ಸಂದರ್ಭದಲ್ಲಿ ಅವರು ಆ ರೀತಿಯ ಘಟನೆ ನಮ್ಮಲ್ಲಿ ಸಂಭವಿಸಿಲ್ಲ ಎನ್ನುವಂತಹ ಮಾತನ್ನು ಹೆಳಿದರು. ಬಹುಶಃ ನಾಳೆ ನಮ್ಮ ಮಂತ್ರಿಗಳಾದ ಶ್ರೀ ಮಲ್ಲಿಕಾರ್ಜುನ ನಾಗಪ್ಪನವರು ಉತ್ತರ ಕೊಡುವಾಗ ಹಾಗೆಯೇ ಹೇಳಬಹುದು. ಅವರ ಮನೆಯಲ್ಲಿ ಕೆಲವರಿಗೆ ಏನೋ ಒಂದು ರೀತಿಯ ರೋಗ ಇತ್ತು. ಅದರಿಂದ ಅವರು ಬೇಜಾರುಗೊಂಡು ಆತ್ಮಹತ್ಯೆ ಮಾಡಿಕೊಂಡು ಸತ್ತಿರಬಹುದು ಎನ್ನುವಂತಹ ಉತ್ತರ ಕೂಡ ಸರ್ಕಾರದಿಂದ ಬರಬಹುದು. ಆದರೆ ಇಂತಹ ಘಟನೆ ನಡೆದ ಸ್ಥಳಕ್ಕೆ ಸ್ವತಃ ಮಂತ್ರಿಗಳೇ ಹೋಗಬೇಕಾಗುತ್ತದೆ. ಅಲ್ಲಿ ಹೋಗಿ ನೋಡಬೇಕಾಗುತ್ತದೆ. ಅಲ್ಲಿ ಸ್ಥಳೀಯ ಗ್ರಾಮಸ್ಥರುಗಳು ಇದ್ದಾರೆ ಮೃತ ಕುಟುಂಬದ ತಂದೆಯವರು ಇನ್ನೂ ಅಲ್ಲೇ ಇದ್ದಾರೆ. ಅವರ ತಂದೆಯವರ ಸ್ಟೇಟ್‌ಮೆಂಟ್ ಅನ್ನು ನೀವು ತೆಗೆದುಕೊಳ್ಳಬೇಕಾಗುತ್ತದೆ. ಅವರ ಸ್ಟೇಟ್‌ಮೆಂಟ್ ಅನ್ನು ನೀವು ತೆಗೆದುಕೊಳ್ಳದೇ, ಇಲ್ಲಿ ವೇಗ್ ಆಗಿ ಏನಾದರೊಂದನ್ನು ನೀವು ಹೇಳಿದರೆ ಅದರಿಂದ ತಪ್ಪು ಸೂಚನೆ ಅಥವಾ ತಪ್ಪು ಕಲ್ಪನೆ ಇಡೀ ರಾಜ್ಯಕ್ಕೆ ಹೋಗುತ್ತದೆ. ಆದ್ದರಿಂದ ಅವರು ಆ ರೀತಿ ಮಾಡಬಾರದು ಸರ್ಕಾರ ಕೇವಲ ಅಧಿಕಾರಿಗಳ ರಿಪೋರ್ಟ್ ಮೇಲೆ ಉತ್ತರ

ಹೇಳುವುದಾದರೆ, ಅಧಿಕಾರಿಗಳು ಆ ರೀತಿಯೇ ರಿಪೋರ್ಟ್ ಕೊಡುತ್ತಾರೆ. ಆದ್ದರಿಂದಾಗಿ ನಾನು ಹೇಳುವಂತಾದ್ದು ಏನೆಂದರೆ, ಮಾನ್ಯ ಮಂತ್ರಿಗಳು ತಕ್ಷಣವೇ ಅಲ್ಲಿಗೆ ವಿಸಿಟ್ ಮಾಡಬೇಕು. ಅಧಿಕಾರಿಗಳು ಅಲ್ಲಿ ಡಿ.ಸಿ.ಯವರು ಹೋಗಿ ಏನೊಂದು ರಿಪೋರ್ಟ್ ಕೊಟ್ಟಿದ್ದಾರೋ ಅದನ್ನಾದರೂ ಇವತ್ತು ಹೇಳುವಂತಾದ್ದು ಆಗಬೇಕಾಗುತ್ತದೆ ಅಂದಾಗ ಮಾತ್ರ ಅಲ್ಲಿ ನಿಜವಾದಂತಹ ಪರಿಸ್ಥಿತಿ ಏನಿದೆ? ಅದರ ಹಿನ್ನೆಲೆ ಏನಿದೆ? ಎನ್ನುವಂತಾದ್ದು ಇವತ್ತು ಸರ್ಕಾರಕ್ಕೆ ಗೊತ್ತಾಗಲಿಕ್ಕೆ ಸಾಧ್ಯವಿದೆ ಎನ್ನುವಂತಹ ಮಾತನ್ನು ಹೇಳುತ್ತೇನೆ. ಸರ್ಕಾರ ಇವತ್ತು ರೈತರ ಆತ್ಮಸ್ಥೈರ್ಯವನ್ನು ಹೆಚ್ಚಿಸುವುದಕ್ಕೆ ಏನು ಮಾಡುತ್ತಿದೆ ಎನ್ನುವಂತಾದ್ದನ್ನು ನಾವು ಕೇಳಬೇಕಾಗುತ್ತದೆ. ಈ ರೀತಿಯಾಗಿ ಇಡೀ ರಾಜ್ಯದಲ್ಲಿ ಕಳೆದ ಎರಡು ವರ್ಷಗಳಿಂದ ಸುಮಾರು 300ಕ್ಕೂ ಹೆಚ್ಚು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ನಾವು ಕಳೆದ ಎರಡು ವರ್ಷಗಳಿಂದ ಸದನದಲ್ಲಿ ಒತ್ತಾಯ ಮಾಡುತ್ತಿದ್ದೇವೆ. ಇವತ್ತು ಅವರಿಗೆ ಆತ್ಮಸ್ಥೈರ್ಯ ಕೊಡುವಂತಹ ಹಲವಾರು ಯೋಜನೆಗಳನ್ನು ಮತ್ತು ಕಾರ್ಯಕ್ರಮಗಳನ್ನು ಹಾಕಿಕೊಳ್ಳಿ ಎಂದು ನಾವು ಸರ್ಕಾರಕ್ಕೆ ಒತ್ತಾಯ ಮಾಡುತ್ತಿದ್ದೇವೆ. ಆದರೆ ಸರ್ಕಾರ ಅದರ ಬಗ್ಗೆ ಸಂಪೂರ್ಣವಾದಂತಹ ನಿಷ್ಕಾಳಜಿ ವಹಿಸುತ್ತಿದೆ. ಇವತ್ತು ರೈತರ ವಿರೋದಿಯಾದಂತಹ ಧೋರಣೆಯನ್ನು ಈ ಸರ್ಕಾರ ಅನುಸರಿಸುತ್ತಿದೆ. ಈ ಸರ್ಕಾರ ರೈತರ ಕಲ್ಯಾಣಕ್ಕಾಗಿ ಯಾವುದೇ ಒಂದು ಕೆಲಸವನ್ನೂ ಸಹ ಮಾಡುತ್ತಿಲ್ಲ, ಇದು ರೈತರ ವಿರೋಧಿ ಸರ್ಕಾರ ಎನ್ನುವಂತಹ ಮಾತುಗಳನ್ನು ನಾವು ಇವತ್ತು ಹೇಳಬೇಕಾಗುತ್ತದೆ. ಬಹುಶಃ ನಮ್ಮ ರಾಜ್ಯದ ಇತಿಹಾಸದಲ್ಲಿ ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ನಮ್ಮ ರೈತರ ಬಾಂಧವರು ಜೀವನದಲ್ಲಿ ಜಿಗುಪ್ಸೆಗೊಂಡು, ಸಾಲದ ಬಾಧೆ ತಾಳಲಾರದೇ ಆತ್ಮಹತ್ಯೆ ಮಾಡಿಕೊಂಡಿರುವ 300 ಕ್ಕೂ ಹೆಚ್ಚು ಉದಾಹರಣೆಗಳನ್ನು ನಾವು ಇವತ್ತು ನೋಡಬಹುದಾಗಿದೆ. ನಿನ್ನೆ ಅಥವಾ ಮೊನ್ನೆ ನಮ್ಮ ಶಿಗ್ಗಾಂವ ತಾಲ್ಲೂಕಿನ ತಿಮ್ಮಾಪುರದಲ್ಲಿ ಒಂದು ಘಟನೆ ನಡೆದಿದೆ. ಅಲ್ಲಿ ಒಬ್ಬ ರೈತ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಮಂಡ್ಯ ಜಿಲ್ಲೆಯಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಹಿರೇಕೆರೂರು ತಾಲ್ಲೂಕಿನಲ್ಲಿ ಒಬ್ಬರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಇತ್ತೀಚಿನ ಒಂದು ವಾರದಲ್ಲಿ ನಡೆದಂತಹ ಘಟನೆಗಳನ್ನು ಮಾತ್ರ ನಾನು ಇಲ್ಲಿ ಉಲ್ಲೇಖಿಸುತ್ತಿದ್ದೇನೆ. ಇಡೀ ರಾಜ್ಯದಲ್ಲಿ ಆತ್ಮಹತ್ಯೆ ಮಾಡಿಕೊಂಡವರ ಪಟ್ಟಿ ಇವತ್ತು ಸರ್ಕಾರದ ಬಳಿ ಇಲ್ಲ. ಅವರ ಒಂದು ಲಿಸ್ಟ್ ಇವತ್ತು ನನ್ನ ಕಡೆ ಇದೆ. ಸರ್ಕಾರದ ಕಡೆ ಅಂತಹ ಯಾವುದೊಂದು ಲಿಸ್ಟ್ ಸಹಾ ಇಲ್ಲ. ನನ್ನ ಕಡೆ 38–40 ರೈತರ ಹೆಸರುಗಳಿರುವ ಲಿಸ್ಟ್‌ವೊಂದಿದೆ. ಅದನ್ನು ಇಲ್ಲಿ ಓದಿಕೊಂಡು ಹೋದರೆ ಟೈಮ್ ಆಗುತ್ತದೆ. ಬಹುಶಃ ಆ ಲಿಸ್ಟ್ ಸರ್ಕಾರದ ಕಡೆ ಇದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ಸರ್ಕಾರಕ್ಕೆ ಆ ಬಗ್ಗೆ ವರದಿಯಾಗಿದೆಯೋ ಇಲ್ಲವೋ ನನಗೆ ಗೊತ್ತಿಲ್ಲ. ರೈತರು ಆತ್ಮಹತ್ಯೆ ಮಾಡಿಕೊಂಡಿರುವ ಬಗ್ಗೆ ಈ ಸರ್ಕಾರಕ್ಕೆ ಎಷ್ಟೊಂದು ಜಿಗುಪ್ಸೆ ಮತ್ತು ನಿರ್ಲಕ್ಷ್ಯ ಇದೆ ಎನ್ನುವುದು ಇದರಿಂದ ಅರ್ಥವಾಗುತ್ತದೆ. ನಾನು ಸದನದಲ್ಲಿ ಇದರ ಬಗ್ಗೆ ಸಾಕಷ್ಟು ವಿಚಾರಗಳನ್ನು ಪ್ರಸ್ತಾಪ ಮಾಡಿದ್ದೇನೆ. ನಿಮ್ಮ ಪ್ರಕಾರ ಎಷ್ಟು ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎನ್ನುವುದನ್ನು ಹೇಳಿ ಎಂದು ನಾವು ಕೇಳಿದಾಗ ಸರ್ಕಾರ ಯಾವುದೇ ಒಂದು ಲಿಸ್ಟ್ ಅನ್ನು ಕೊಟ್ಟಿಲ್ಲ. ನನ್ನ ಬಳಿ ಇರುವ ಈ ಲಿಸ್ಟ್ ಅನ್ನು ನಾನು ತಮಗೆ ಕಳುಹಿಸಿಕೊಡುತ್ತಿದ್ದೇನೆ. ಇವತ್ತು ಇಡೀ ರಾಜ್ಯದಲ್ಲಿ ಎಲ್ಲೆಲ್ಲಿ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ? ಯಾವ ಗ್ರಾಮದಲ್ಲಿ ಮಾಡಿಕೊಂಡಿದ್ದಾರೆ ಎನ್ನುವಂತಹ ಮಾಹಿತಿ ನನ್ನ ಕಡೆ ಇದೆ. ಹಾಗಾದರೆ ಸರ್ಕಾರ ಏನು ಮಾಡುತ್ತಿದೆ? ಇವತ್ತು ನಾನು ಸರ್ಕಾರಕ್ಕೆ ಕೇಳುವುದೇನೆಂದರೆ, ನಿಮ್ಮ ರೆಕಾರ್ಡ್ಸ್ ಪ್ರಕಾರ ಇವತ್ತು ಇಡೀ ರಾಜ್ಯದಲ್ಲಿ ಎಷ್ಟು ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ? ಎಂಬುದನ್ನು ಹೇಳಿ. ಅದರ .....

ಶ್ರೀ ಕೆ. ಭಾರತೀ ಶಂಕರ್ : ಈಗ ನೀವು ಬರೀ ಲಿಸ್ಟ್ ಮಾಡಿಕೊಂಡು ಕುಳಿತಿದ್ದೀರಲ್ಲಾ, ನೀವು ಎಲ್ಲಿಗೆ ಹೋಗಿದ್ದೀರಿ ಎನ್ನುವುದನ್ನು ಮೊದಲು ಹೇಳಿ.

ಶ್ರೀ ಜಗದೀಶ್ ಶೆಟ್ಟರ್ : ನೋಡಿ. ನಿಮ್ಮ ಮುಖ್ಯಮಂತ್ರಿಗಳು ಎಲ್ಲಿಯೂ ಕೂಡ ಹೋಗಿರಲಿಕ್ಕಿಲ್ಲ. ಆದರೆ ನಾನು ಸಾಕಷ್ಟು ರೈತ ಕುಟುಂಬದವರ ಮನೆಗಳಿಗೆ ಭೇಟಿ ಕೊಟ್ಟು ಅವರಿಗೆ ಸಾಂತ್ವನ ಹೇಳುವಂತಹ ಕೆಲಸವನ್ನು ಮಾಡಿದ್ದೇನೆ. ನಿಮ್ಮ ಮಂತ್ರಿಗಳು ಯಾರೂ ಅಲ್ಲಿಗೆ ಹೋಗಿಲ್ಲ. ನಿಮ್ಮ ಕಾಂಗ್ರೆಸ್ಸಿನ ಅಧ್ಯಕ್ಷಿಣಿಯವರು ಆಂಧ್ರ ಪ್ರದೇಶದ ರೈತರು ಆತ್ಮಹತ್ಯೆ ಮಾಡಿಕೊಂಡರೆ ಅಲ್ಲಿಗೆ ಹೋಗಿ ಅವರ ಕುಟುಂಬದವರನ್ನು ಭೇಟಿಯಾಗಿ ಸೌಜನ್ಯ ವ್ಯಕ್ತಪಡಿಸಿ ಪರಿಹಾರವನ್ನು ಕೊಟ್ಟು ಬರುತ್ತಾರೆ. ಆದರೆ ನಿಮ್ಮ ಕಾಂಗ್ರೆಸ್ಸಿನ ಅಧ್ಯಕ್ಷಿಣಿಯವರು ನಮ್ಮ ರಾಜ್ಯಕ್ಕೆ ಭೇಟಿ ಕೊಟ್ಟಿಲ್ಲ. ಇಲ್ಲಿ ಯಾವ ಕುಟುಂಬದವರನ್ನೂ ಸಹ ಅವರು ಭೇಟಿ ಮಾಡಲಿಲ್ಲ. ಇಲ್ಲಿನ ಮುಖ್ಯಮಂತ್ರಿಯವರೂ ಸಹ ಹೋಗಿಲ್ಲ. ಇದು ನಿಮ್ಮ ರೈತ ವಿರೋಧಿ ಧೋರಣೆಯಾಗಿದೆ. ಇಲ್ಲಿ ರೈತರಿಗೆ ಏನು ಸ್ಪಂದನೆ....

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೇ, ನಮ್ಮ ಅಧ್ಯಕ್ಷರು ಈ ಸದನದ ಸದಸ್ಯರಲ್ಲವಾದ್ದರಿಂದ ಅವರ ಬಗ್ಗೆ ಇವರು ಮಾತನಾಡಬಾರದು. ನೀವು ಹೋಗಿದ್ರಿ. ಸಂತೋಷ. ನಮ್ಮಲ್ಲೂ, District In-charge Minister ಇರುತ್ತಾರೆ. ಪ್ರತಿಯೊಂದು ಜಿಲ್ಲೆಯಲ್ಲೂ ಸಹಿತ ಏನಾದರೂ ಆದರೆ ಅವರು ತಕ್ಷಣ ಅಲ್ಲಿಗೆ ಹೋಗುತ್ತಿರುತ್ತಾರೆ. ನೀವು ನಿಮಗೆ ಅನುಕೂಲ ಇದ್ದಾಗ ಎಲ್ಲೆಲ್ಲಿ ಬೇಕೋ ಅಲ್ಲಿಗೆಲ್ಲಾ ಹೋಗುತ್ತಿರಬಹುದು. ಆದರೆ ಸರ್ಕಾರದ ಜವಾಬ್ದಾರಿ ಇಡೀ ಕರ್ನಾಟಕ ರಾಜ್ಯದಲ್ಲಿ ಎಲ್ಲೆಲ್ಲಿ ಇಂತಹ ಘಟನೆಗಳು ನಡೆದರೆ, ಅದಕ್ಕೆ ಸ್ಪಂದಿಸತಕ್ಕಂಥದ್ದು ನಮ್ಮ ಕರ್ತವ್ಯವಾಗಿದೆ. ನಮ್ಮ ಜನ ಅದನ್ನು ಮಾಡುತ್ತಿದ್ದಾರೆ. ತಾವು ಏನು ಮಾಡಿದ್ದೀರೋ ಅದನ್ನು ನೀವು ಹೇಳಿಕೊಳ್ಳಿ ಇನ್ನೊಬ್ಬರು ಮಾಡಿಲ್ಲ. ಎನ್ನುವಂತದ್ದನ್ನು ಕೇಳುವುದಕ್ಕೆ ಹೋಗಬೇಡಿ ಅದಕ್ಕೆ ಉತ್ತರ ಕೊಡುತ್ತಾರೆ.

ಶ್ರೀ ಜಗದೀಶ್ ಶೆಟ್ಟರ್ : ನಾನು ಹೇಳುವುದು ಯಾವುದೇ ಹೆಸರು ಪ್ರಸ್ತಾಪ ಮಾಡಿ ಟೀಕೆ ಮಡುವುದು ಅಲ್ಲ, ಒಂದು ರಾಷ್ಟ್ರೀಯ ಪಕ್ಷದ ಅಧ್ಯಕ್ಷರು, ಅವರ ಪಕ್ಷದ ಅಧ್ಯಕ್ಷರು ಅವರ ಬಗ್ಗೆ ಹೇಳುತ್ತಿದ್ದೇನೆ. ಅವರೊಡನೆ ಒಂದು ರಾಜ್ಯಕ್ಕೆ ಹೋಗಿ ನಾವು ಅಲ್ಲಿ ಸಾಂತ್ವನ ಹೇಳಿದಿರಿ. ಅದೇ ರೀತಿ ಇಲ್ಲಿ ಕರೆದುಕೊಂಡು ಬಂದು ಸಾಂತ್ವನ ಹೇಳುವಂತಹ ಕೆಲಸ ಮಾಡಬೇಕೆಂದು ನಾನು ಹೇಳುವುದು. ಸರ್ಕಾರ ನಿಮ್ಮದಿದೆ. ನಿಮ್ಮ ಮುಖ್ಯ ಮಂತ್ರಿಗಳು ಎಷ್ಟು ಕಡೆ ಹೋಗಿದ್ದಾರೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಮಗೆ ಶೆಟ್ಟರ್‌ರವರು ಯಾವಾಗಲೂ ಬುದ್ಧಿವಾದ ಹೇಳುತ್ತಾರೆ. ನಾವು ಅವರ ಅಧ್ಯಕ್ಷರಿಗೆ ಯುನಾನಿಮಸಿ ಓಟು ಕೊಟ್ಟು ರಾಜ್ಯ ಸಭಾ ಮೆಂಬರ್ ಮಾಡಿ ಕಳುಹಿಸಿದ್ದೇವೆ. ರಾಷ್ಟ್ರೀಯ ಅಧ್ಯಕ್ಷರು ಎಷ್ಟು ಹಳ್ಳಿಗಳಿಗೆ ಬಂದಿದ್ದಾರೆ? ಎಷ್ಟು ಹಣ ಕೊಟ್ಟಿದ್ದಾರೆ ಎಲ್ಲೆಲ್ಲಿ ಹೋಗಿದ್ದಾರೆ, ನಮ್ಮಿಂದ ಹೋದವರು, ನಮ್ಮ ರೆಪ್ರೆಸೆಂಟೇಟಿವ್ ಆಗಿ ಹೋದವರೇ ಬರುವುದಿಲ್ಲ. ಆ ಎರಡು ಕೋಟಿ ರೂಪಾಯಿಗಳ ಹಣದಲ್ಲಿ ಹಣವನ್ನೂ ಕೊಡುವುದಿಲ್ಲ.

ಶ್ರೀ ಆರಗ ಜ್ಞಾನೇಂದ್ರ : ಆಂಧ್ರದ ರೈತರ ಬಗ್ಗೆ ಬರುವಂತಹ ಕಣ್ಣೀರು, ಕರ್ನಾಟಕದ ರೈತರ ಬಗ್ಗೆ ಏಕೆ ಬರುವುದಿಲ್ಲ ಎಂದು ಕೇಳಿದೆ ಅಷ್ಟೆ.

ಅಧ್ಯಕ್ಷರು : ಮಾನ್ಯ ಮಂತ್ರಿಗಳು ಮಾತನಾಡುತ್ತಿದ್ದಾರೆ. ಮಧ್ಯೆ ಡಿಸ್ಟರ್ಬ್ ಮಾಡಬೇಡಿ. ನಾಯ್ಡುರವರೇ, ನೀವು ಕುಳಿತುಕೊಳ್ಳಿ ನೀವೇನು ಉತ್ತರ ಹೇಳಬೇಕಾಗಿಲ್ಲ. ನಿಮ್ಮ ನಾಯಕರು ಉತ್ತರ ಹೇಳುತ್ತಾರೆ.

ಗೊಂದಲ

ಶ್ರೀ ಮಲ್ಲಿಕಾರ್ಜುನ ಖರ್ಗೆ : ನೀವು ಕೊಡುವುದನ್ನೂ ಕಲಿಯಬೇಕು, ತೆಗೆದುಕೊಳ್ಳುವುದನ್ನೂ ಕಲಿಯಬೇಕು. ಬರೀ ನಾವು ಹೇಳುತ್ತೇವೆ, ನೀವು ಟಾಲರೇಟ್ ಮಾಡಿ ಎಂದು ಹೇಳಿದರೆ ಹೇಗೆ? ನಾಯ್ಡು ಅವರ ಮೇಲೆ ವಿಶೇಷವಾದ ಪ್ರೀತಿ ಇದೆ. ಆ ಮಾತು ಬೇರೆ, ಆದರೆ ನಮ್ಮ ಮೇಲೆ ಅದೇ ಪ್ರೀತಿ ತೋರಿಸಿ ಎಂದು ಹೇಳುತ್ತಿದ್ದೇವೆ. ನಾವು ಓಟು ಕೊಟ್ಟಿದ್ದೇವೆ.

ಶ್ರೀ ಆರಗಜ್ಞಾನೇಂದ್ರ : ಆಂಧ್ರದ ರೈತರ ಸಾವಿನ ವಿಚಾರದಲ್ಲಿ ನಿಮ್ಮ ಅಧ್ಯಕ್ಷರಿಗೆ ಕಣ್ಣೀರು ಬರುತ್ತದೆ. ಕರ್ನಾಟಕದ ನಿಮ್ಮ ಪಕ್ಷದ ಸರ್ಕಾರ ಇರುವ ಕಡೆ ಜನ ಸತ್ತರೆ ನಿಮ್ಮ ಅಧ್ಯಕ್ಷರಿಗೆ ಕಣ್ಣೀರು ಬರುವುದಿಲ್ಲವೇ? ಈ ಕಣ್ಣೀರು ಕತೆ ಏನೆಂದು ನಮಗೆ ಗೊತ್ತಾಗಬೇಕು.

ಶ್ರೀ ಬಿ. ರಮಾನಾಥ ರೈ : ಆಂಧ್ರಕ್ಕೆ ಎಷ್ಟು ಕಣ್ಣೀರು ಸುರಿಸಿದ್ದಾರೆ, ಕರ್ನಾಟಕಕ್ಕೆ ಎಷ್ಟು ಕಣ್ಣೀರು ಸುರಿಸಿದ್ದಾರೆಂದು ಗೊತ್ತಿದೆ. ಮತ್ತೆ ಏಕೆ ಇಲ್ಲಿ ಮಾತನಾಡುವುದು?

ಶ್ರೀ ಜಗದೀಶ್ ಶೆಟ್ಟರ್ : ಅಲ್ಲಿ ಹೋಗಿ ಬಂದಿದ್ದಾರೆ, ಇಲ್ಲಿಯೂ ಬನ್ನಿ ಎಂದು ಹೇಳಿದೆ. ಇಲ್ಲಿ ಏನಾಗಿದೆ ಎಂದರೆ, ರಾಜ್ಯದ ಮುಖ್ಯ ಮಂತ್ರಿಗಳು ಯಾವುದೇ ಒಬ್ಬ ರೈತ ಕುಟುಂಬದವರು ಆತ್ಮಹತ್ಯೆ ಮಾಡಿಕೊಂಡರೆ ಸ್ಥಳಕ್ಕೆ ಹೋಗಿ ಭೇಟಿ ಆಗಿ ಸಾಂತ್ವನ ಹೇಳುವ ಕೆಲಸ ಮಾಡಲಿಲ್ಲ. ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ಹೇಳಲಿ ಯವ ಕುಟುಂಬಕ್ಕೆ ಭೇಟಿ ಕೊಟ್ಟಿದ್ದಾರೆ ಎಂಬುದನ್ನು ಹೇಳಲಿ ಅವರ ಜೊತೆ ಸೌಜನ್ಯದ ಮಾತನಾಡಿದ್ದೇನೆ ಎಂದು ಹೇಳಲಿ. ನಮ್ಮ ಮುಖ್ಯ ಮಂತ್ರಿಗಳಿಗೆ ಯಾರು ಆತ್ಮಹತ್ಯೆ ಮಾಡಿಕೊಂಡ ರೈತ ಕುಟುಂಬ ಇದೆ, ಅವರ ಬಗ್ಗೆ ಏಕೆ ತಾತ್ಸಾರ ಇದೆ ಎಂದು ನನಗೆ ಅರ್ಥವಾಗುತ್ತಿಲ್ಲ. ಒಂದು ಕಡೆಯಾದರೂ ಹೋಗಬೇಕಾಗಿತ್ತು; ಆದರೆ ಹೋಗಲಿಲ್ಲ. ಇವತ್ತು ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಈ ಸರ್ಕಾರ ರೈತರ ವಿರುದ್ಧ ತಾತ್ಸಾರ ನೀತಿ ಹೊಂದಿದೆ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ಮಾನ್ಯ ಖರ್ಗೆಯವರು ವಿರೋಧ ಪಕ್ಷದ ನಾಯಕರಾಗಿದ್ದರು. ಅವರೆಲ್ಲಾ ಪ್ರತಿಪಕ್ಷದ ಶಾಸಕರು ಆಗಿ ಇಲ್ಲಿದ್ದಾಗ ಹೇಳಿದ್ದರು. ಆ ಸಂದರ್ಭದಲ್ಲಿ ಗುಲ್ಬರ್ಗ ಮತ್ತು ಬೀದರ್‌ನಲ್ಲಿ ಅಲ್ಲಿಯ ರೈತರು ಕೇವಲ ಒಂದೆರಡು ತಿಂಗಳುಗಳ ಅಂತರದಲ್ಲಿ 18 ಜನರು ಆತ್ಮಹತ್ಯೆ ಮಾಡಿಕೊಂಡಿದ್ದರು. ಆ ಸಂದರ್ಭದಲ್ಲಿ ಅವರು ಇಲ್ಲಿ ಏನು ಡಿಮಾಂಡ್ ಮಾಡಿದ್ದರು ಅಂದರೆ ರೈತರ ಕುಟುಂಬಕ್ಕೆ ಪರಿಹಾರ ನೀಡಬೇಕೆಂದು ಡಿಮಾಂಡ್ ಮಾಡಿದ್ದರು. ಸದನದ ಸಮಿತಿ ಆಯಿತು, ನಾವೂ ಸದನದ ಸಮಿತಿಯ ಸದಸ್ಯರಾಗಿ ಹೋಗಿದ್ದೆವು. ಏಳೆಂಟು ಜನ ರೈತ ಕುಟುಂಬದವರಿಗೆ ಈ ಸಡನದ ಸಮಿತಿ ರೆಕಮಂಡ್ ಮಾಡಿತ್ತು. ಏಳೆಂಟು ಜನ ರೈತ ಕುಟಂಬದವರು ಸಾಲದ ಬಾಧೆಯಿಂದ ಅವರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಅವರ ಕುಟುಂಬಕ್ಕೆ ಒಂದು ಲಕ್ಷ ರೂಪಾಯಿಗಳ ಪರಿಹಾರ ಕೊಡಬೇಕೆಂದು ನಮ್ಮ ವರದಿಯಲ್ಲಿ ಹೇಳಿದ್ದೆವು. ಆಗಿನ ಜನತಾದಳದ ಸರ್ಕಾರ ಪರಿಹಾರ ಕೊಟ್ಟಿತ್ತು. ಕಳೆದ ಎರಡು ವರ್ಷಗಳಿಂದ ಮಾನ್ಯ ಖರ್ಗೆಯವರು ಅಲ್ಲಿದ್ದಾರೆ, ಆ ಸದನದ ಮಿತಿಯಲ್ಲಿ ಇದ್ದು ಶ್ರೀ ಕಾಗೋಡು ತಿಮ್ಮಪ್ಪನವರೂ ಅಲ್ಲಿದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್ : ಆತ್ಮಹತ್ಯೆ ಮಾಡಿಕೊಂಡು ಯಾರಾದರೂ ರೈತರು ಸತ್ತರೆ ತಕ್ಷಣ ಒಂದು ಲಕ್ಷ ರೂಪಾಯಿಗಳ ಪರಿಹಾರ ಕೊಡಬೇಕೆಂದು ಜಿಲ್ಲಾ ಉಸ್ತುವಾರಿ ಸಚಿವರಿಗೆ ಡಿಸಿಯವರಿಗೆ ಮಾನ್ಯ ಮುಖ್ಯ ಮಂತ್ರಿಗಳು ಅಧಿಕಾರ ಕೊಟ್ಟಿದ್ದರು.

ಶ್ರೀ ಜಗದೀಶ್ ಶೆಟ್ಟರ್ : ಏಕೆ ನೀವು ಈ ರೀತಿ ತಾರತಮ್ಯ ಮಾಡುತ್ತಿದ್ದೀರಿ? ಎರಡು ವರ್ಷಗಳಿಂದ ಸದನದಲ್ಲಿ ಹೋರಾಟ ಮಾಡುತ್ತಿದ್ದೇವೆ. ತಾವು ಇಲ್ಲಿ ಕೆಲವರು ವೈಯುಕ್ತಿಕ ಕಾರಣಗಳಿಗಾಗಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದು ಹೇಳಿ ಅದನ್ನು ಇನ್‌ವೆಸ್ಟಿಗೇಷನ್ ಮಾಡುತ್ತೇವೆಂದು ಬಜೆಟ್ ಭಾಷಣದಲ್ಲಿ ಹೇಳಿದಿರಿ. ಮಾನ್ಯ ಮುಖ್ಯ ಮಂತ್ರಿಗಳು ಬಜೆಟ್ ಭಾಷಣದಲ್ಲಿ ಏನು ಹೇಳಿದ್ದಾರೆ ಎಂದರೆ ಪ್ಯಾರಾ 31 ರಲ್ಲಿ ರೈತರ ಆತ್ಮಹತ್ಯೆ ವಿಷಯಗಳಿಗೆ ಸಂಬಂಧಿಸಿದಂತೆ ವೀರೇಶ್ ಸಮಿತಿಯು ನೀಡುವ ವರದಿಯನ್ನು ಸರ್ಕಾರವು ಪರಿಶೀಲಿಸಿದೆ ಸಾಲದ ಹೊರೆಯಿಂದಾಗಿ ರೈತರು ಆತ್ಮಹತ್ಯೆ ಮಾಡಿಕೊಂಡ ದುರಾದೃಷ್ಟಕರ ಸಂದರ್ಭದಲ್ಲಿ ಅವರ ಕುಟುಂಬಕ್ಕೆ ಒಂದು ಲಕ್ಷ ರೂಪಾಯಿಗಳ ಪರಿಹಾರವನ್ನು ಒದಗಿಸಿಕೊಡಲಾಗುವುದು ಎಂದು ಫೆಬ್ರವರಿ ತಿಂಗಳ ಬಜೆಟ್ ಭಾಷಣದಲ್ಲಿ ಹೇಳಿದ್ದಾರೆ. ರೈತರ ಆತ್ಮಹತ್ಯೆಗೆ ಸಾಲ ಸಂಸ್ಥೆಯಿಂದ ಪಡೆದ ಸಾಲದ ಹೊರೆಯೇ ಸಂಭವನೀಯ ಕಾರಣ ಎಂಬ ಬಗ್ಗೆ ಅಸಿಸ್ಟೆಂಟ್ ಕಮಿಷನರ್ ಅಧ್ಯಕ್ಷತೆಯ ಸಮಿತಿಯು ದೃಢೀಕರಣ ಪತ್ರ ನೀಡಲಿದೆ ಎನ್ನುವ ಮಾತನ್ನು ಹೇಳಿದಿರಿ ಆ ಸಮಸ್ಯೆಯನ್ನು ಮೂರು ತಿಂಗಳೊಳಗೆ ಇತ್ಯರ್ಥ ಪಡಿಸಲಾಗುವುದು ಎಂದು ಹೇಳಿದಿರಿ. ಇಲ್ಲಿಯವರೆಗೆ ಅಸಿಸ್ಟೆಂಟ್ ಕಮಿಷನರ್ ನೇತೃತ್ವದಲ್ಲಿ ಏನಾದರೂ ಸಮಿತಿ ಆಗಿದೆಯೇ ಹೇಗೆ? ಈ ಬಗ್ಗೆ ಯಾವಾಗ ಸಮಿತಿ ಮಾಡುತ್ತೀರಿ? ಫೆಬ್ರವರಿ ತಿಂಗಳಲ್ಲಿ ನೀವು ಅಶ್ಯೂರೆನ್ಸ್ ಕೊಟ್ಟಿರಿ, ಫೆಬ್ರವರಿ ತಿಂಗಳಲ್ಲಿ ಬಜೆಟ್ ಭಾಷಣ ಮಾಡಿದಿರಿ, ಆದಮೇಲೆ ತಕ್ಷಣ ಮಾಡಬೇಕಾಗಿತ್ತು. ಇದುವರೆಗೆ ಏಕೆ ಮಾಡಲಿಲ್ಲ? ಯಾವಾಗ ಮಾಡುತ್ತೀರಿ?

ಶ್ರೀ ಮಲ್ಲಿಕಾರ್ಜುನ ಖರ್ಗೆ : ಮಾನ್ಯ ಅಧ್ಯಕ್ಷರೆ, ಈಗಾಗಲೇ ಅದರ ಬಗ್ಗೆ ಒಂದು ವಿಶೇಷ ಕಮಿಟಿಯನ್ನು ಜಿಲ್ಲೆಯಲ್ಲಿ ಮಾಡಿ ಆ ಸಬ್ ಡಿವಿಷನ್‌ನಲ್ಲಿ ಅಸಿಸ್ಟೆಂಟ್ ಕಮಿಷನರ್ ಅವರನ್ನು ಅಧ್ಯಕ್ಷರನ್ನಾಗಿ ಮಾಡಿ 18.7.03 ಕ್ಕೆ ಆರ್ಡರ್ ಇಶ್ಯೂ ಮಾಡಿದ್ದೇವೆ. ಆ ಆರ್ಡರ್ ಪ್ರಕಾರ ಎಲ್ಲೆಲ್ಲಿ ಈ ಪರಿಹಾರದ ಕೆಲಸ ಮಾಡಬೇಕು ಅದನ್ನು ಮಾಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್ : ಜುಲೈ 18ನೇ ತಾರೀಖು ನಮ್ಮ ಸದನ ಪ್ರಾರಂಭ ಆದಮೇಲೆ ಇಲ್ಲಿ ಚರ್ಚೆ ಪ್ರಾರಂಭ ಆದಮೇಲೆ ಜುಲೈ 18ಕ್ಕೆ ಆರ್ಡರ್ ಇಶ್ಯೂ ಮಾಡಿದ್ದಾರೆ. ಅಂದರೆ, ಸರ್ಕಾರಕ್ಕೆ ಎಷ್ಟೊಂದು ನಿರ್ಲಕ್ಷ್ಯ ಇದೆ ಎಂದು ಇದರ ಮೇಲೆ ಅರ್ಥವಾಗುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ : ನಾವು ಏನಾದರೂ ಮಾಡಿದರೆ ಹೀಗೆ ಹೇಳುತ್ತೀರಿ ಮಾಡದೆ ಇದ್ದರೆ ಯಾವಾಗ ಮಾಡುತ್ತೀರಿ ಎಂದು ಕೇಳುತ್ತೀರಿ. ಬಜೆಟರಿ ಬಿಲ್ ಪಾಸ್ ಮಾಡಿಕೊಡುತ್ತೇವೆಂದು ಹೇಳಿದಿರಿ, ನಿನ್ನೆ ಪಾಸ್ ಮಾಡಿಕೊಟ್ಟಿರಿ.

ಶ್ರೀ ಜಗದೀಶ್ ಶೆಟ್ಟರ್ : ಫೆಬ್ರವರಿ ತಿಂಗಳಲ್ಲಿ ಬಜೆಟ್‌ಗೆ ವೋಟ್ ಆನ್ ಅಕೌಂಟ್ ಕೊಟ್ಟಿದ್ದೇವೆ. ಅಸಿಸ್ಟೆಂಟ್ ಕಮಿಷನರ್ ನೇತೃತ್ವದಲ್ಲಿ ಕಮಿಟಿ ಮಾಡುವುದಕ್ಕೆ ಅವರಿಗೆ ಯಾವುದೇ ತೊಂದರೆ ಇರಲಿಲ್ಲ ಇಲ್ಲಿಯವರೆಗೆ ಸುಮ್ಮನೆ ಕುಳಿತರು, ವಿಧಾನಸಭೆಯಲ್ಲಿ ಈ ವಿಷಯ ಪ್ರಸ್ತಾಪ ಆದ ಮೇಲೆ ಮೊನ್ನೆ 18ನೇ ತಾರೀಕು ಆರ್ಡರ್ ಇಶ್ಯೂ ಮಾಡುತ್ತಾರೆ. ಸರ್ಕಾರ ಎಷ್ಟೊಂದು ಬೇಜವಾಬ್ದಾರಿಯಿಂದ ನಡೆದುಕೊಳ್ಳುತ್ತಿದೆ ಎಂದು ಇದರಿಂದ ಅರ್ಥವಾಗುತ್ತಿದೆ. ರೈತರ ವಿರುದ್ಧವಾಗಿ ಇಷ್ಟೊಂದು ಬೇಜವಾಬ್ದಾರಿತನದಿಂದ ಸರ್ಕಾರ ನಡೆದುಕೊಳ್ಳುತ್ತಿದೆ. ಎನ್ನುವುದಕ್ಕೆ ಇದು ಒಂದು ಉದಾಹರಣೆ. ಒಂದು ಪರಿಹಾರ ಕೊಡುವುದಕ್ಕೆ ನಿಮಗೆ ಸಾಧ್ಯವಾಗುತ್ತಿಲ್ಲ. ಆ ಕುಟುಂಬ ವರ್ಗದವರಿಗೆ ಪರಿಹಾರ ಕೊಡಲಿಕ್ಕೆ ಆಗುತ್ತಿಲ್ಲ. ಈ ಬಗ್ಗೆ ನಾವು ಕಳೆದ ಅಧಿವೇಶನದಲ್ಲಿ ಕೇಳಿದ್ದೇವೆ, ಆದರೂ

ನಮಗೆ ಸ್ಪಷ್ಟೀಕರಣ ಕೊಡುವುದಕ್ಕಾಗುತ್ತಿಲ್ಲ. ಎಷ್ಟೊಮಂದಿ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬ ಬಗ್ಗೆ ಒಂದು ವರದಿ ಕೊಡಿ ಎಂದು ಕೇಳಿದೆವು ಒಂದು ಸ್ಟೇಟಸ್ ರಿಪೋರ್ಟ್ ಮಾಡಿ ಎಂದು ಕೇಳಿದೆವು ಎಷ್ಟು ಜನರಿಗೆ ನೀವು ಇದುವರೆಗೆ ಪರಿಹಾರ ಕೊಟ್ಟದ್ದೀರಿ ಎಂದು ಕೇಳಿದೆವು ಅದು ಯಾವುದನ್ನೂ ನೀವು ಇವತ್ತಿನವರೆಗೂ ಕೊಡಲಿಲ್ಲ. ಆ ರೀತಿಯ ಮನೋಸ್ಥಿತಿ ಇವತ್ತು ರೈತರಲ್ಲಿ ಬಂದಿದೆ. ಈ ಪರಿಸ್ಥಿತಿ ರೈತರದ್ದು ಆಗುತ್ತಿದೆ ಇದೇ ಕೊಪ್ಪಳ ಜಿಲ್ಲೆಯಲ್ಲಿ ಏನಾಗಿದೆ ಎಂದು ಕಳೆದ ಸಾರಿ ಬರಗಾಲದ ಚರ್ಚೆಯಲ್ಲಿ ಪ್ರಸ್ತಾಪ ಮಾಡಿದ್ದೇವೆ. ಕೊಪ್ಪಳ ಜಿಲ್ಲೆಯಲ್ಲಿ ಈ ಘಟನೆಗಳು ನಡೆಯುತ್ತಿವೆ. ಮತ್ತೊಂದು ಹಿರೇಬಗನಾಳ ಗ್ರಾಮದಲ್ಲಿ ಕಳೆದ ಒಂದೂವರೆ ತಿಂಗಳಲ್ಲಿ ಪೋಲೀಸರ ದೌರ್ಜನ್ಯ ಆಗಿ ಜುಲೈ ಮೊದಲನೇ ವಾರದಲ್ಲಿ ಪೋಲೀಸರ ದೌರ್ಜನ್ಯ ಆಗಿ ಅಲ್ಲಿ ರೈತರು ಬಹಳ ಭಯದ ವಾತಾವರಣದಲ್ಲಿದ್ದಾರೆ. ಪೋಲೀಸ್ ವ್ಯವಸ್ಥೆ ಬಗ್ಗೆ ಎಷ್ಟೊಂದು ಆಕ್ರೋಶ ಆಗಿದೆ ಎಂದರೆ, ಒಬ್ಬ ಪೋಲೀಸ್ ಪೇದೆ ಖಾಕಿ ಡ್ರೆಸ್ ಹಾಕಿಕೊಂಡು ಹಿರೇಬಗನಾಳ್ ಗ್ರಾಮಕ್ಕೆ ಹೋದರೆ, ಅವನಿಗೆ ಛೀಮಾರಿ ಹಾಕುವ, ಒಳಗೆ ಬಿಡಲಾರದ ಪರಿಸ್ಥಿತಿ ಹಿರೇಬಗನಾಳ ಗ್ರಾಮದಲ್ಲಿ ಇದೆ. ಯಾವ ಒಬ್ಬ ಪೋಲೀಸ್ ಪೇದೆ ಅಲ್ಲಿ ಹಿರೇಬಗನಾಳ ಗ್ರಾಮಕ್ಕೆ ಹೋಗಲಾರದ ಪರಿಸ್ಥಿತಿ ನಿರ್ಮಾಣವಾಗಿದೆ. ಹಿರೇಬಗನಾಳ ಗ್ರಾಮದಲ್ಲಿ ರೈತರ ಮೇಲೆ ಬಹಳಷ್ಟು ದೌರ್ಜನ್ಯ ಮಾಡಿ ಲಾಠಿ ಪ್ರಹಾರ ಮಡಿ ಜೀವದ ಭಯ ಹುಟ್ಟಿಸುವ ವಾತಾವರಣವನ್ನು ರಾಜ್ಯ ಸರ್ಕಾರ ನಿರ್ಮಾಣ ಮಾಡಿದೆ. ಆ ಅಧಿಕಾರಿಗಳು ಯಾರು ತಪ್ಪು ಮಾಡಿದ್ದಾರೆ ಅವರ ಮೇಲೆ ಇವತ್ತಿಗೂ ಯಾವುದೇ ಒಂದು ಕ್ರಮವನ್ನು ಅವರು ಕೈಗೊಂಡಿಲ್ಲ ಎನ್ನುವ ಮಾತನ್ನು ಇಲ್ಲಿ ಹೇಳಬಯಸುತ್ತೇನೆ. ಅಲ್ಲಿ ಕೆಂಪಯ್ಯನವರು ಬಂದಿದ್ದರು, ಆಗಲೇ ಗುಲ್ಬರ್ಗ ವಲಯದ ಮಹಾ ನಿರ್ದೇಶಕರಾದ ಕೆಂಪಯ್ಯನವರು ಆ ಹಿರೇಬಗನಾಳ ಗ್ರಾಮಕ್ಕೆ ಭೇಟಿ ಕೊಟ್ಟಿದ್ದರು. ಅಲ್ಲಿ ಅಲ್ಲಿಯ ಅಧಿಕಾರಿಗಳು ತಪ್ಪು ಮಾಡಿದರೂ, ಅಲ್ಲಿಯ ಡಿಸಿ ಎಸ್‌ಪಿ. ಗ್ರಾಮಸ್ಥರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಅವರು ಏನು ಚಳುವಳಿ ಮಾಡುತ್ತಿದ್ದರು ಆ ಚಳುವಳಿಯನ್ನು ಹತ್ತಿಕ್ಕುವ ದೃಷ್ಟಿಯಿಂದ ಸಾವಿರಾರು ಸಂಖ್ಯೆಯ ಪೋಲೀಸರನ್ನು ಕರೆದುಕೊಂಡು ಹೋಗಿ ಪೋಲೀಸ್‌ನವರ ದೌರ್ಜನ್ಯ ಹೆಣ್ಣುಮಕ್ಕಳು, ಮಕ್ಕಳು ಎಂದು ನೋಡಲಾರದೆ ಅವರ ಮೇಲೆ ಎಲ್ಲ ರೀತಿಯ ದೌರ್ಜನ್ಯ ಮಾಡಿದ್ದರು. ನಾನು ಸ್ವತ: ಅಲ್ಲಿ ಹೋಗಿ ನೋಡಿಕೊಂಡು ಬಂದಿದ್ದೇನೆ. ಅದೇ ರೀತಿ ಕೆಂಪಯ್ಯನವರು ಹಿರೇಬಗನಾಳ್ ಘಟನೆ ಬಗ್ಗೆ ಅವರು ಹೇಳುತ್ತಾರೆ. ತಪ್ಪಿತಸ್ಥರ ವಿರುದ್ಧ ಕ್ರಮ ಎನ್ನುವ ಮಾತನ್ನು ಅವರು ಹೇಳುತ್ತಿದ್ದಾರೆ. ಯಾವುದಕ್ಕೂ ಘಟನೆಯನ್ನು ತನಿಖೆಗೆ ಒಳಪಡಿಸಿ ಕ್ರಮ ಕೈಗೊಳ್ಳುವುದು ಎಂದು ಹೇಳುತ್ತಾರೆ. ಯಾರು ತಪ್ಪು ಮಾಡಿದ್ದಾರೆ ಅವರ ವಿರುದ್ಧ ಕ್ರಮ ಕೈಗೊಳ್ಳುವುದಾಗಿ ಕೆಂಪಯ್ಯನವರು ಹೇಳಿದರು ಎನ್ನುವುದು ಪತ್ರಿಕೆಯಲ್ಲಿ ಬಂದಿದೆ. ಹಿರಿಯ ಪೋಲೀಸ್ ಅಧಿಕಾರಿಗಳು ಹೋಗಿ ಅಲ್ಲಿ ತಪ್ಪಾಗಿದೆ ಎಂದು ಹೇಳಿದಾಗ ಇಲ್ಲಿಯವರೆಗೆ ಎಷ್ಟು ಜನರ ಮೇಲೆ ಯಾವ ಅಧಿಕಾರಿಗಳ ಮೇಲೆ ಕ್ರಮ ಕೈಗೊಂಡಿದ್ದೀರಿ ಎಂದು ಹೇಳಬೇಕಾಗುತ್ತದೆ. ಯಾವ ಅಧಿಕಾರಿಗಳ ಮೇಲೆ ಕ್ರಮ ಕೈಗೊಳ್ಳಲಾಗಿದೆ. ರೈತರಿಗೆ ಸಂರಕ್ಷಣೆ ಮಾಡುವುದಕ್ಕೆ ನಿಮ್ಮಿಂದ ಏನಾಗುತ್ತದೆ ಎಂದು ಕೇಳಬಯಸುತ್ತೇನೆ. ಅದಕ್ಕಾಗಿ ಈ ರೀತಿ ಇವತ್ತು ಪೋಲೀಸರ ದೌರ್ಜನ್ಯ ಮತ್ತು ರೈತರ ಆತ್ಮಹತ್ಯೆ ದುರಂತ ನಡೆಯುತ್ತಿರುವುದು ಕೇವಲ ಕೊಪ್ಪಳ ಜಿಲ್ಲೆಗೆ ಮಾತ್ರ ಸೀಮಿತ ಅಲ್ಲ. ಇಡೀ ರಾಜ್ಯದಲ್ಲಿ ಈ ಪರಿಸ್ಥಿತಿ ಇರುವುದರಿಂದ ಸರ್ಕಾರ ಇದರ ಬಗ್ಗೆ ತಕ್ಷಣ ಒಂದು ಸ್ಪಂದನೆ ಮಾಡುವ ಕೆಲಸ ಮಾಡಬೇಕೆಂದು ಹೇಳುತ್ತೇನೆ.

2.20 ಪಿ.ಎಂ

ಕೊನೆಯದಾಗಿ ನಾನು ಹೇಳುವುದೇನೆಂದರೆ, ಎರಡು ದಿವಸದ ಹಿಂದೆ ಮಲ್ಲೇಶಪ್ಪ ಅಕ್ಕಿಮನಿ ಎನ್ನುವ ರೈತ ಶಿಗ್ಗಾಂವ್‌ನಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾನೆ. ಅಲ್ಲಿಗೆ ಉಸ್ತುವಾರಿ ಸಚಿವರೇ ಆಗಲಿ, ಅಧಿಕಾರಿಗಳೇ ಆಗಲಿ ಯಾರೂ ಹೋಗಿಲ್ಲ. ಶಿಗ್ಗಾಂವ್ ತಾಲ್ಲೂಕಿನ ತಿಮ್ಮಾಪುರ ಗ್ರಾಮದಲ್ಲಿ ಮಲ್ಲೇಶಪ್ಪ ಅಕ್ಕಿಮನಿ ಎನ್ನುವ ರೈತ ಆತ್ಮಹತ್ಯೆ ಮಾಡಿಕೊಂಡು ತೀರಿಕೊಂಡಿದ್ದಾನೆ. ಇನ್ನೂ ಅಲ್ಲಿಗೆ ಯರೂ ಭೇಟಿ ಕೊಟ್ಟಿಲ್ಲ, ಈ ರೀತಿಯ ಪರಿಸ್ಥಿತಿ ಅಲ್ಲಿದೆ. ಆದುದರಿಂದ ನಾನು ಸರ್ಕಾರಕ್ಕೆ ಒತ್ತಾಯ ಮಾಡುವುದೇನೆಂದರೆ ಯಾವ ರೈತ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಆತನ ಕುಟುಂಬಕ್ಕೆ ಒಂದು ಲಕ್ಷ ರೂಪಾಯಿಗಳ ಪರಿಹಾರ ಧನವನ್ನು ಕೊಡಬೇಕು ಮತ್ತು ಕೊಪ್ಪಳದಲ್ಲಿ ಒಂದೇ ಕುಟುಂಬದ ಆರು ಜನರು ಏನು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಆ ಪ್ರಕರಣದ ಬಗ್ಗೆ ಸಂಪೂರ್ಣವಾದಂಥ ತನಿಖೆಯಾಗಬೇಕು ಎಂದು ನಾನು ಒತ್ತಾಯ ಮಡುತ್ತೇನೆ. ಏಕೆಂದರೆ ನ್ಯಾಯಾಂಗ ತನಿಖೆಯಾದರೆ ಆತ್ಮಹತ್ಯೆಯ ಹಿನ್ನೆಲೆ ಏನು? ಯಾವ ಉದ್ದೇಶದಿಂದ ತೀರಿಕೊಂಡರು, ಈ ಬಗ್ಗೆ ಎಲ್ಲಾ ಸತ್ಯಾಂಶಗಳು ಹೊರಗೆ ಬರುವುದಕ್ಕೆ ಸಾಧ್ಯತೆ ಇದೆ. ಅದಕ್ಕಾಗಿ ನಾನು ನ್ಯಾಯಾಂಗ ತನಿಖೆಯನ್ನು ಒತ್ತಾಯ ಮಾಡುತ್ತಿರುವುದು. ಇನ್ನೊಂದು ನಾನು ಹೇಳುವುದೇನೆಂದರೆ ಇಂದು ಹಳ್ಳಿಗಳಲ್ಲಿ ಬಲವಂತವಾಗಿ ಸಾಲ ವಸೂಲಾತಿ ಕಾರ್ಯ ನಡೆಯುತ್ತಿದೆ, ಟ್ರ್ಯಾಕ್ಟರ್‌ಗಳು ಸೀಜ್ ಆಗುತ್ತಿವೆ, ಆಸ್ತಿ ಜಪ್ತಿ ಆಗುತ್ತಿದೆ, ರೈತರ ಮನೆ ಮುಂದೆ ಅಸಹ್ಯಕರವಾಗಿ ಸಾಲ ವಸೂಲಾತಿ ನಡೆಯುತ್ತಿದೆ. ಹೀಗಾಗಿ ಆ ಕಾರಣದಿಂದಲೂ ಕೂಡ ರೈತರು ಮಾನಸಿಕವಾಗಿ ಚಿಂತೆಗೀಡಾಗಿ ಆತ್ಮಹತ್ಯೆಯನ್ನು ಮಾಡಿಕೊಳ್ಳುತ್ತಿದ್ದಾರೆ. ಆದಕಾರಣ ಸಾಲ ವಸೂಲಾತಿಯನ್ನು ಸಂಪೂರ್ಣವಾಗಿ ಸರ್ಕಾರ ಕೈಬಿಡಬೇಕೆಂದು ಮತ್ತು ರೈತರ ಬೇಡಿಕೆಗಳನ್ನು ಈಡೇರಿಸಿಕೊಬೇಕೆಂದು ನಾನು ಸರ್ಕಾರಕ್ಕೆ ಒತ್ತಾಯವನ್ನು ಮಾಡಿ ಇವೊತ್ತೇನು ಅಧ್ಯಕ್ಷರಾದ ತಾವು ನನಗೆ ಮಾತನಾಡಲು ಅವಕಾಶ ಮಾಡಿಕೊಟ್ಟಿರಿ ಅದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ **ಶ್ರೀ ಬಿ. ಸೋಮಶೇಖರ್ (ಮಳವಳ್ಳಿ)** : ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ಆ ಭಾಗದಿಂದ ಬಂದಿರುವ ನಮ್ಮ ಪಕ್ಷದ ಶಾಸಕರಾದ ಮಾನ್ಯ ಕರಡಿ ಸಂಗಣ್ಣನವರು ಮಾತನಾಡುತ್ತಾರೆ. ನಾನು ಕೆಲವು ವಿಚಾರಗಳನ್ನು ಸೂಕ್ಷ್ಮವಾಗಿ ಸರ್ಕಾರದ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಈ ಆರು ಜನರ ಸಾಮೂಹಿಕ ಆತ್ಮಹತ್ಯೆ ಏನಾಗಿದೆ ಅಂದರೆ ಇಲ್ಲಿ ಒಟ್ಟಾರೆ ಏಳು ಜನರು ಆಗುತ್ತಾರೆ. ಮೊದಲು ದೊಡ್ಡ ಅಕ್ಕ ಈರಬಸಮ್ಮ ಎನ್ನುವವರು ಹಲವು ವರ್ಷಗಳಿಂದ ಅನಾರೋಗ್ಯದಿಂದ ಬಳಲಿ ಗುರುವಾರ ಮುಂಜಾನೆ ಮೃತಪಟ್ಟಿರುತ್ತಾರೆ. ಅಕ್ಕನ ಸಾವಿನ ದುಃಖವನ್ನು ತಡೆಯಲು ಆಗದೇ ನಾಲ್ವರು ಸಹೋದರರು, ಇಬ್ಬರು ಸಹೋದರಿಯರು ಕ್ರಿಮಿನಾಶಕ ಔಷಧಿಯನ್ನು ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರತಕ್ಕಂಥದ್ದು. ಬಹುಶಃ ಈ ರೀತಿಯ ಆತ್ಮಹತ್ಯೆ ಮಾಡಿಕೊಂಡಿರುವುದು ಕರ್ನಾಟಕ ರಾಜ್ಯದ ಇತಿಹಾಸದಲ್ಲಿಯೇ ಮೊದಲನೆಯದು ಎಂದು ನಾನು ಭಾವಿಸಿಕೊಳ್ಳುತ್ತೇನೆ. ಇತ್ತೀಚಿನ ದಿನಗಳಲ್ಲಿ ಸಾಮೂಹಿಕ ಆತ್ಮಹತ್ಯೆ ಪ್ರಕರಣಗಳು ಜಾಸ್ತಿ ಆಗಿವೆ. ಚನ್ನಪಟ್ಟಣದ ಒಂದೇ ಕುಟುಂಬದ ಐದು ಜನರು ನನ್ನ ಕ್ಷೇತ್ರದ ಮುತ್ತತ್ತಿಯ ಭೀಮೇಶ್ವರ ನದಿಯಲ್ಲಿ ಸಾಮಾಹಿಕವಾಗಿ ನದಿಗೆ ಬಿದ್ದು ಆತ್ಮಹತ್ಯೆ ಮಾಡಿಕೊಂಡಿರತಕ್ಕಂಥ ಪ್ರಕರಣ ನಡೆದು ಇನ್ನೂ ಒಂದು ವಾರವೂ ಕೂಡ ಆಗಿಲ್ಲ. ಅದಕ್ಕೆ ಬೇರೆ ಕಾರಣ ಇರಬಹುದು. ಈಗ ಮೊನ್ನೆ ತಾನೇ ಕೊಪ್ಪಳದಲ್ಲಿ ಆತ್ಮಹತ್ಯೆ ನಡೆದಿದೆ.

ಈ ರೀತಿ ನಿರಂತರವಾಗಿ ನಡೆಯುತ್ತಿದೆ. ಇದಕ್ಕೆ ಕಾರಣ ಏನು? ಸಮಾಜದಲ್ಲಿ ಏನೋ ಒಂದು ರೀತಿಯಲ್ಲಿ ಶಾಂತಿ ಇಲ್ಲದೇ ಇದ್ದಾಗ, ಆರ್ಥಿಕ ಮುಗ್ಗಟ್ಟು ಬಂದಾಗ ಅಥವಾ ಮನಸ್ಸಿನಲ್ಲಿ ದುಗುಡ, ಅನಿಶ್ಚಿತತೆ, ಈ ರೀತಿಯ ಒಂದು ವಾತಾವರಣ ಸೃಷ್ಟಿಯಾದಾಗ ಇಂಥ ಎಕ್ಸ್‌ಟ್ರೀಮ್ ಸ್ಟೆಪ್ಸ್‌ನಲ್ಲಿ ಆತ್ಮಹತ್ಯೆ ಮಾಡಿಕೊಳ್ಳತಕ್ಕಂಥ ಪರಿಸ್ಥಿತಿ ಬರುತ್ತದೆ. ಅದೇ ರೀತಿಯಲ್ಲಿ ಇಲ್ಲಿ ಆತ್ಮಹತ್ಯೆ ಮಾಡಿಕೊಳ್ಳತಕ್ಕಂಥ ಪರಿಸ್ಥಿತಿ ಬಂದಿರಬಹುದು. ಈಗಾಗಲೇ ವಿರೋದ ಪಕ್ಷ ನಾಯಕರು ಹೇಳಿದರು, ಸುಪ್ರೀಂಕೋರ್ಟ್‌ನವರು ನಿರ್ದೇಶನ ಕೊಟ್ಟಿರತಕ್ಕಂಥದ್ದು ಇರಬಹುದು. ಆದರೆ ಸಂವಿಧಾನದಲ್ಲಿ ಏನು ಹೇಳಲಾಗಿದೆಯೆಂದರೆ ಸಮಾಜದಲ್ಲಿರುವ ಪ್ರತಿಯೊಬ್ಬ ವ್ಯಕ್ತಿಯ ಪ್ರಾಣ ರಕ್ಷಣೆ, ಆಸ್ತಿ ರಕ್ಷಣೆ ಮಾಡುವುದು ಸರ್ಕಾರದ ಜವಾಬ್ದಾರಿಯಾಗಿರುತ್ತದೆ ಎಂದು ಹೇಳಲಾಗಿದೆ. ಇದರ ಜೊತೆಗೆ ಒಂದರಿಂದ ಹದಿನಾಲ್ಕನೇ ವರ್ಷದವರೆಗೆ ಮಕ್ಕಳಿಗೆ ವಿದ್ಯೆಯನ್ನು ಕಲಿಸತಕ್ಕಂಥದ್ದು, ಜನರಿಗೆ ಆರೋಗ್ಯ ಸೌಲಭ್ಯಗಳನ್ನು ಒದಗಿಸುವುದು, ಈ ಎಲ್ಲ ಮೂಲಭೂತ ಸೌಕರ್ಯಗಳನ್ನು ಜನರಿಗೆ ಒದಗಿಸಿಕೊಡತಕ್ಕಂಥ ಜವಾಬ್ದಾರಿ ಚುನಾಯಿತ ಸರ್ಕಾರಗಳಿಗೆ ಇರುತ್ತದೆ. ಈ ಸರ್ಕಾರ ತನ್ನ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸದೇ ಇರುವಾಗ ಸಮಾಜದಲ್ಲಿ ಅಶಾಂತಿ ಮತ್ತು ಗೊಂದಲಗಳು ಸೃಷ್ಟಿಯಾಗುತ್ತವೆ. ಇದರಿಂದಾಗಿ ಸಾರ್ವಜನಿಕರು ಈ ಒಂದು ಹಂತಕ್ಕೆ ತಲುಪುತ್ತಾರೆ. ಇಲ್ಲೇನಾಗಿದೆಯೆಂದರೆ ಈ ಆರು ಜನರ ಆತ್ಮಹತ್ಯೆ ಪ್ರಕರಣದ ಬಗ್ಗೆ ಸ್ಪಷ್ಟವಾಗಿ ಹೇಳುತ್ತಾರೆ. ಅವರು ಬಡತನದ ಬೇಗೆಯಿಂದ ನರಳುತ್ತಿದ್ದರು, ಆಹಾರಕ್ಕೆ ಹಣವಿರಲಿಲ್ಲ, ಕೂಲಿಯೂ ಸಹ ಸಿಕ್ಕಿರಲಿಲ್ಲ, ಸಾಲದ ಹೊರೆ ಬೇರೆ ಜಾಸ್ತಿಯಾಗಿತ್ತು. ಈ ಎಲ್ಲ ಕಷ್ಟಗಳನ್ನು ಸಹಿಸಿಕೊಳ್ಳಲಾರದೇ ಈ ಒಂದು ಕೃತ್ಯವನ್ನು ಮಾಡಿಕೊಂಡಿದ್ದಾರೆ ಎಂದು ಹೇಳಿದ್ದಾರೆ. ಇದರಿಂದ ಸ್ಪಷ್ಟವಾಗಿ ನಮಗೆ ಗೊತ್ತಾಗುತ್ತದೆ. ಬರ ಪರಿಹಾರ ಕಾಮಗಾರಿಗಳನ್ನು ಸುಮಾರು ಒಂದು ಲಕ್ಷದ ಹದಿಮೂರು ಸಾವಿರದಷ್ಟು ತೆಗೆದುಕೊಂಡಿದ್ದೇವೆ, ಹತ್ತು ಕೋಟಿ ಮಾನವ ದಿನಗಳ ಉದ್ಯೋಗವನ್ನು ಸೃಷ್ಟಿ ಮಾಡಿದ್ದೇವೆ ಎನ್ನುವ ಉತ್ತರವನ್ನು ಸರ್ಕಾರದವರು ಕೊಟ್ಟು. ಆದರೆ ಈ ಕುಟುಂಬದವರು ಸುಮಾರು ಎಂಟತ್ತು ದಿನಗಳಿಂದ ಈ ಒಂದು ಸಮಸ್ಯೆಯನ್ನು ಎದುರಿಸುತ್ತಾ ಬಂದಿದ್ದಾರೆ. ಸರ್ಕಾರದ ಗಮನಕ್ಕೆ ಈ ವಿಚಾರ ಬರಲಿಲ್ಲವೆ? ಈ ಒಂದು ಕುಟುಂಬದ ಪರಿಸ್ಥಿತಿ ಬಗ್ಗೆ ಸರ್ಕಾರದ ಗಮನಕ್ಕೆ ಬರಲಿಲ್ಲವೇ? ಇದನ್ನು ನಾನು ಕೇಳುವುದಕ್ಕೆ ಇಚ್ಛೆಪಡುತ್ತೇನೆ. ಅಂದರೆ ನೀವು ಹೇಳಬಹುದು, ಪ್ರತಿಯೊಂದು ಕುಟುಂಬದಲ್ಲೂ ಏನೇನು ನಡೆಯುತ್ತದೆ ಎಂದು ತಿಳಿದುಕೊಳ್ಳುವುದಕ್ಕಾಗುತ್ತದೆಯೇ? ಆತ್ಮಹತ್ಯೆ ಮಾಡಿಕೊಳ್ಳುತ್ತಿರುತ್ತಾರೆ, ಅದಕ್ಕೆ ನಾವೇನು ಜವಾಬ್ದಾರರು, ಈ ರೀತಿಯಲ್ಲಿ ನೀವು ಹಾರಿಕೆ ಉತ್ತರವನ್ನು ಕೊಡಬಹುದು. ಆದರೆ ನೈತಿಕ ಜವಾಬ್ದಾರಿ ಒಂದೇ ಅಲ್ಲ, ಸಂವಿಧಾನಾತ್ಮಕವಾಗಿಯೂ ಸರ್ಕಾರಕ್ಕೆ ಜವಾಬ್ದಾರಿ ಇರುತ್ತದೆ. ಈಗ ಗೃಹ ಇಲಾಖೆಯಲ್ಲಿ, ಪೊಲೀಸ್ ಸ್ಟೇಷನ್‌ಗಳಲ್ಲಿ ಪೊಲೀಸರು ಬಹಳ ಜವಾಬ್ದಾರಿಯಿಂದ ಇರಬೇಕಾಗುತ್ತದೆ. ಕೇವಲ ಕೇಸ್‌ಗಳನ್ನು ದಾಖಲೆ ಮಾಡಿಕೊಂಡು ಮತ್ತು ಅವರನ್ನು ಕೋರ್ಟ್‌ಗೆ ಕಳುಹಿಸತಕ್ಕಂಥ ಒಂದೇ ಜವಾಬ್ದಾರಿ ಅವರಿಗೆ ಇರುವುದಿಲ್ಲ. ಅಥವಾ ಗಲಾಟೆ ಆದ ಕಡೆ ಲಾಠಿ ಛಾರ್ಜ್ ಮಾಡತಕ್ಕ ಒಂದೇ ಜವಾಬ್ದಾರಿ ಮಾತ್ರ ಅವರಿಗಿರುವುದಿಲ್ಲ. ಇದನ್ನು ಸೇರಿಕೊಂಡಂತೆ ಆ ಪೊಲೀಸ್ ಸ್ಟೇಷನ್ ವ್ಯಾಪ್ತಿಯಲ್ಲಿ ಸಾಮಾಜಿಕ ಪರಿಸ್ಥಿತಿ ಹೇಗಿದೆ, ಸಾರ್ವಜನಿಕರ ಸಮಸ್ಯೆಗಳು ಏನು, ಕುಟುಂಬಗಳಲ್ಲಿ ಸಮಸ್ಯೆಗಳು ಏನಾದರೂ ಇವೆಯೇ, ಆ ಗ್ರಾಮಗಳಲ್ಲಿ ಸಮಸ್ಯೆಗಳು ಏನಾದರೂ ಇವೆಯೇ ಎಂಬ ಬಗ್ಗೆ ಜನ ಸಂಪರ್ಕ ಸಭೆಗಳಲ್ಲಿ ಚರ್ಚೆ ಮಾಡಿ ತಿಳಿದುಕೊಳ್ಳಬೇಕು. ಈ ಕಾರ್ಯಕ್ರಮ ಈಗ ಸಮರ್ಪಕವಾಗಿ ಆಗುತ್ತಿಲ್ಲವೆಂಬುದು ಈ ಘಟನೆಯಿಂದಾಗಿ ಗೊತ್ತಾಗುತ್ತಿದೆ.

ಯಾವ ಒಂದು ಪೊಲೀಸ್ ಸ್ಟೇಷನ್ ವ್ಯಾಪ್ತಿಯಲ್ಲಿಯೇ ಆಗಲಿ ಆ ಊರಿನ ಮುಖಂಡರುಗಳನ್ನು ಕರೆಸಿ ಅಲ್ಲಿಯ ಪ್ರತಿಯೊಂದು ಕುಟುಂಬದ ಸಮಸ್ಯೆಗಳೇನು ಎಂದು ತಿಳಿದುಕೊಳ್ಳತಕ್ಕಂಥ ಪದ್ಧತಿಯನ್ನು ನಾವು ಹಾಕಿಕೊಂಡು ಬಂದಿದ್ದೆವು. ಆದರೆ ಆ ಕೆಲಸವಾಗಿಲ್ಲವೆಂದು ನಾನಾದರೂ ತಿಳಿದುಕೊಳ್ಳುತ್ತೇನೆ. ಎಲ್ಲಾದರೂ ಒಂದು ಕಡೆ ಆತ್ಮಹತ್ಯೆ ಆಗಿದೆ ಎಂದಾಗ ಈ ಸರ್ಕಾರ ಸ್ಪಂದಿಸಿದ್ದಿದ್ದರೆ ಬಹುಶಃ ಇಷ್ಟೊಂದು ಪ್ರಮಾಣದಲ್ಲಿ ಆತ್ಮಹತೆಗಳು ಆಗುತ್ತಿರಲಿಲ್ಲ. ಆದರೆ ಸರ್ಕಾರ ಈ ಬಗ್ಗೆ ಅಷ್ಟೊಂದು ತೀವ್ರತರವಾಗಿ ಸಮಸ್ಯೆಗಳ ಪರಿಹಾರಕ್ಕೆ ಪರಿಶೀಲನೆ ಮಾಡಿಲ್ಲವೆನ್ನತಕ್ಕಂಥದ್ದು ನಮ್ಮ ಒಂದು ಅನಿಸಿಕೆ. ನಾನು ಹಿಂದೆ ದಿನಾಂಕ 24-4-1998 ರಲ್ಲಿ ಕಂದಾಯ ಮಂತ್ರಿಯಾಗಿ ಅಧಿಕಾರ ವಹಿಸಿಕೊಂಡೆ. ಅದೇ ದಿನ ಬಾಲ್ಕಿಯಲ್ಲಿ ಒಬ್ಬ ರೈತ ಸತ್ತರು ಎಂದು ಸುದ್ದಿ ಬಂದ ತಕ್ಷಣ, ನಾನು ರಾಜ್ಯಪಾಲರಿಂದ ಪ್ರಮಾಣ ವಚನವನ್ನು ಹನ್ನೆರಡು ಗಂಟೆಗೆ ಸ್ವೀಕಾರ ಮಾಡಿ ಅದೇ ದಿನ ನಾಲ್ಕು ಗಂಟೆಗೆ ಫ್ಲೈಟ್‌ನಲ್ಲಿ ನಾನು ಬಾಲ್ಕಿಗೆ ಹೋದೆ. ಅವೊತ್ತು ಭಾನುವಾರವಾಗಿದ್ದರೂ ಕೂಡ ಅಲ್ಲಿಯ ಡಿವಿಶನಲ್ ಕಮಿಶನರ್, ಜಿಲ್ಲಾಧಿಕಾರಿಗಳು, ಎಸ್.ಪಿ.ಎಲ್ಲ ಸೇರಿ ಚೆಕ್‌ಅನ್ನು ತಯಾರು ಮಾಡಿ ನಾನೇ ಖುದ್ದಾಗಿ ಅವರ ಮನೆಗೆ ಹೋದೆ. ಏಕೆಂದರೆ ನಾನು ಪ್ರಮಾಣ ವಚನ ಸ್ವೀಕಾರ ಮಾಡಿದ ದಿನವೇ ನನಗೆ ಜವಾಬ್ದಾರಿ ಬಂತು. ನಾನೇ ಖುದ್ದಾಗಿ ಹೋದಾಗ ಅಲ್ಲಿಯ ವಾತಾವರಣ ಹೇಗಿತ್ತೆಂದರೆ, ಸರ್ಕಾರ ರೈತರ ಕಷ್ಟಕ್ಕೆ ಸ್ಪಂದಿಸುತ್ತಿದೆ ಎನ್ನುವ ಒಂದು ಸಮಾಧಾನ ಅವರಲ್ಲಿತ್ತು. ನಾವೇನು ಸತ್ತವರನ್ನು ಬದುಕಿಸುವುದಕ್ಕೆ ಆಗುವುದಿಲ್ಲ ಆದರೆ ಸರ್ಕಾರ ಯಾವ ರೀತಿ ಸ್ಪಂದಿಸಬೇಕೋ ಆ ರೀತಿಯಲ್ಲಿ ಒಂದೆರಡು ಪ್ರಕರಣಗಳಲ್ಲಾದರೂ ಸ್ಪಂಧಿಸಿದ್ದರೆ ಇಂಥ ಒಂದು ಪ್ರಕರಣ ನಡೆಯುತ್ತಿರಲಿಲ್ಲವೆನ್ನುವುದು ನನ್ನ ಒಂದು ಅನಿಸಿಕೆ. ಈಗಲೂ ಹೀಗೆಯೇ ಬಿಟ್ಟರೆ ಈ ರೀತಿಯ ಪ್ರಕರಣ ನಿರಂತರವಾಗಿ ನಡೆಯಬಹುದು. ಮಾನ್ಯ ಹಿರಿಯ ಸದಸ್ಯರಾದ ಎಸ್.ಎಸ್. ಪಾಟೀಲರು ಸರ್ಕಾರಕ್ಕೆ ಒಂದು ನೋಟೀಸ್ ಕೊಡುವ ಮೂಲಕ ಅವರು ಬಹಳ ನೋವಿನಿಂದ ಒಂದು ಪ್ರಕಣವನ್ನು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಬ್ಯಾಡಗಿಯಲ್ಲಿ 51 ಜನ ರೈತರು ನಾವು ನೇಣು ಹಾಕಿಕೊಳ್ಳುತ್ತೇವೆಂದು ಸಾಲಾಗಿ ನಿಂತಿದ್ದಾರೆ ಎನ್ನುವ ಸುದ್ದಿಯನ್ನು ಕೇಳಿದ್ದೇವೆ. ಅಲ್ಲಿ ನೇಣು ಹಾಕಿಕೊಳ್ಳುವುದಕ್ಕೆ ಹೊರಟ್ಟಿದ್ದಾರೆ. ಏನಾದರೂ ಹೆಚ್ಚು ಕಡಿಮೆಯಾಗಿಬಿಟ್ಟರೆ ಏನು ಮಾಡುತ್ತೀರಿ? ಈಗ ಇದೇ ರೀತಿಯಲ್ಲಿ ನಿರಂತರವಾಗಿ ನಡೆಯುತ್ತಿದ್ದರೆ ನಿಮ್ಮ ಸರ್ಕಾರದ ಕರ್ತವ್ಯವೇನು? ನೀವು ಕಣ್ಣು ಮುಚ್ಚಿಕೊಂಡು ಸುಮ್ಮನೇ ಕುಳಿತುಕೊಳ್ಳುವುದಕ್ಕೆ ಆಗುತ್ತದೆಯೇ? ಇಷ್ಟೊಂದು ಹಗುರವಾಗಿ ನೀವು ತೆಗೆದುಕೊಳ್ಳುತ್ತಿದ್ದೀರಾ? ಆದ್ದರಿಂದ ನಾನು ಈ ಸಂದರ್ಭದಲ್ಲಿ ಇದನ್ನು ಅಷ್ಟೊಂದು ಹಗುರವಾಗಿ ತೆಗೆದುಕೊಳ್ಳಬಾರದು ಎಂದು ಹೇಳುತ್ತೇನೆ. ಕೊಪ್ಪಳದಲ್ಲಿ ಯಾವ ಪರಿಸ್ಥಿತಿ ಇದೆ ಎಂಬ ಬಗ್ಗೆ ನಮ್ಮ ಪಕ್ಷದ ಶಾಸಕರಾದ ಶ್ರೀ ಕರಡಿ ಸಂಗಣ್ಣನವರು ಹೇಳುತ್ತಾರೆ. ಆದ್ದರಿಂದ ನಾನು ಹೇಳುವುದೇನೆಂದರೆ, ಈ ಪ್ರಕಣ ಯಾವ ರೀತಿಯಾಗಿದೆ ಎಂಬ ಬಗ್ಗೆ ತಕ್ಷಣ ಅಧ್ಯಯನ ಮಾಡಿ ಪರಿಹಾರವನ್ನು ಪ್ರತಿಯೊಬ್ಬರಿಗೂ ತಕ್ಷಣ ಕೊಡಬೇಕಲ್ಲದೆ ಈ ಪ್ರಕರಣದ ಬಗ್ಗೆ ನ್ಯಾಯಾಂಗ ತನಿಖೆಗೆ ಅವಕಾಶ ಮಾಡಿಕೊಡಬೇಕೆಂದು ನಾನೂ ಸಹ ಒತ್ತಾಯವನ್ನು ಮಾಡುತ್ತೇನೆ. ಇದಕ್ಕೆ ಕಾರಣಕರ್ತರು ಯಾರು? ಯಾವ ಒಂದು ಕಾರಣದಿಂದ ಈ ಆತ್ಮಹತ್ಯೆ ಆಗಿದೆ ಎಂಬ ಬಗ್ಗೆ ತನಿಖೆ ಮಾಡಬೇಕು. ಇನ್ನು ಮುಂದೆ ಇಂಥ ಒಂದು ಪ್ರಕರಣಗಳು ಮರುಕಳಿಸದಂತೆ ನೋಡಿಕೊಳ್ಳತಕ್ಕಂಥ ಜವಾಬ್ದಾರಿಯೂ ಸರ್ಕಾರದಿಂದ ಆಗಬೇಕು. ಈಗೇನು ಬ್ಯಾಡಗಿಯಲ್ಲಿ 51 ಜನರು ಸಾಲದ ಹೊರೆಯನ್ನು ಹೊರಲಾರದೆ ನೇಣು

ಹಾಕಿಕೊಳ್ಳಲು ಸಾಲಾಗಿ ನಿಂತಿದ್ದಾರೆ ಅದನ್ನೂ ಕೂಡ ತಾವು ತಪ್ಪಿಸಬೇಕು. ಮೊನ್ನೆ ಇದರ ಬಗ್ಗೆ ಸ್ಪಷ್ಟವಾದಂತಹ ಉತ್ತರವನ್ನು ಸರ್ಕಾರ ಕೊಡಲಿಲ್ಲ ಆದರೆ ಅದಕ್ಕೂ ಸಹ ಏನೂ ಅಚಾತುರ್ಯ ಆಗಬಾರದು ಎನ್ನುವ ಕಾರಣದಿಂದ ಅದನ್ನು ನಿಲ್ಲಿಸಬೇಕು ಎನ್ನುವಂತಹ ನಿಲುವನ್ನು ತೆಗೆದುಕೊಳ್ಳಬೇಕೆಂದು ಒತ್ತಾಯವನ್ನು ಮಾಡುತ್ತಾ ಈ ಬಗ್ಗೆ ತಾವು ಈ ಸದನದಲ್ಲಿ ಹೇಳಬೇಕು, ಅವತ್ತು ನಾನು ಏನು ಸರ್ಕಾರದ ಗಮನಕ್ಕೆ ತಂದಿದ್ದೇವೆ, ಅದಕ್ಕೆ ಸರ್ಕಾರ ಏನೂ ಉತ್ತರ ಕೊಟ್ಟಿಲ್ಲ. ಅದನ್ನು ಈ ಸಂದರ್ಭದಲ್ಲಿ ಹೇಳಬೇಕು, ಹಾಗೂ ಈ ಒಂದು ವಿಚಾರಕ್ಕೆ ಸಂಬಂಧಪಟ್ಟ ಹಾಗೆ ನ್ಯಾಯಾಂಗ ತನಿಖೆಗೆ ಆದೇಶ ಮಾಡಬೇಕೆಂದು ಹಾಗೂ ಸತ್ತವರ ಕುಟುಂಬಕ್ಕೆ ಪರಿಹಾರವನ್ನು ಸರಿಯಾದ ರೀತಿಯಲ್ಲಿ ಕೊಡಬೇಕೆಂದು ಒತ್ತಾಯ ಮಾಡುತ್ತಾ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು :– ಈಗ ಸಿಂಧ್ಯರವರು ಮಾತನಾಡಿದ ಮೇಲೆ, ಮುದ್ದಹನುಮೇಗೌಡರು ಹಾಗೂ ಕರಡಿ ಸಂಗಣ್ಣನವರು ಮಾತನಾಡಿ.

+ ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) :– ಮಾನ್ಯ ಅಧ್ಯಕ್ಷರೆ, ನಾನು ಒಂದೆರಡು ವಿಚಾರಗಳನ್ನು ಮಾತ್ರ ಹೇಳುವುದಿದೆ. ಈ ಹೃದಯವನ್ನು ತಲ್ಲಣಗೊಳಿಸತಕ್ಕಂಥ ವರದಿಗಳೇನಿವೆ ಇವುಗಳನ್ನು ನೋಡಿದರೆ ಮನುಷ್ಯತ್ವ ಇರತಕ್ಕಂಥ ಸರ್ಕಾರಗಳು ಇದ್ದರೆ ಆ ಸರ್ಕಾರಗಳೂ ಕೂಡ ತಲ್ಲಣಗೊಳ್ಳಬೇಕು. ಕಳೆದ ಐದು ವರ್ಷಗಳಿಂದ ಸತತವಾಗಿ ರಾಜ್ಯದಲ್ಲಿ ಆತ್ಮಹತ್ಯೆ ನಡೆಯುತ್ತಿವೆ. ಇವತ್ತು ನಾವೆಲ್ಲಾ ರೈತರ ಆತ್ಮಹತ್ಯೆ ಬಗ್ಗೆ ಕೇಳಿದ್ದೇವೆ. ಶ್ರೀಮಾನ್ ಬೈರೇಗೌಡರು ದಿವಂಗತರಾಗಿದ್ದಾರೆ. ಈ ಆತ್ಮಹತ್ಯೆ ಕಾಂಗ್ರೆಸ್ ಸರ್ಕಾರ ಬಂದಮೇಲೆ ಹುಟ್ಟಿಕೊಂಡಿತೆ? ಇಲ್ಲ ಅದನ್ನು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಮಾನ್ಯ ಬೈರೇಗೌಡರು ಕೃಷಿ ಮಂತ್ರಿಗಳಾಗಿ ಇಡೀ ರಾಷ್ಟ್ರಕ್ಕೆ ಮಾದರಿಯಾಗಿರತಕ್ಕಂಥ ಒಂದು ಕೃಷಿ ನೀತಿಯನ್ನು ಕೊಟ್ಟಂತಹ ಒಬ್ಬ ಕೃಷಿ ಪಂಡಿತರು ಅವರು ಕೃಷಿ ಮಂತ್ರಿಗಳಾಗಿದ್ದಾಗ ಸಹ ರೈತರ ಆತ್ಮಹತ್ಯೆ ಪ್ರಾರಂಭವಾಗಿತ್ತು. ಇದು ವಾಸ್ತಾವಂಶ. ಆದರೆ ಈ ರೈತರ ಆತ್ಮಹತ್ಯೆ ಅಂದರೆ ಒಂದು ಕುಟಂಬದಲ್ಲಿ ಒಬ್ಬ ಸಾಯುತ್ತಿದ್ದ ಆದರೆ ನನಗೆ ಅರ್ಥವಾಗುತ್ತಿಲ್ಲ, ಇಡೀ ಕುಟುಂಬವೇ ಸಾಮೂಹಿಕವಾಗಿ ಆತ್ಮಹತ್ಯೆ ಆಗುತ್ತಿರುವಂತಾದ್ದು ಇದೇ ಮೊದಲನೇ ಬಾರಿಗೆ. ಕುಟುಂಬ ಕುಟುಂಬಗಳೇ ಆತ್ಮಹತ್ಯೆ ಮಾಡಿಕೊಳ್ಳುತ್ತಿವೆ. ಇದರ ಜೊತೆಗೆ ಸರ್ಕಾರಿ ಅಧಿಕಾರಿಗಳು ಸಹ ಆತ್ಮಹತ್ಯೆ ಮಾಡಿಕೊಳ್ಳತಕ್ಕಂಥದ್ದು ಪ್ರಾರಂಭವಾಗಿದೆ. ನಾನೇ ಮಾನ್ಯ ಮುಖ್ಯಮಂತ್ರಿಗಳ ಸ್ಥಾನದಲ್ಲಿ ಇದ್ದಿದ್ದರೆ ಇದರ ಬಗ್ಗೆ ತತ್‌ಕ್ಷಣ ಕ್ರಮ ತೆಗೆದುಕೊಳ್ಳುವ ರಾಜಕೀಯ ಎದೆಗಾರಿಕೆಯನ್ನು ತೋರಿಸುತ್ತಿದ್ದೆ. ಅದು ಆಗಲಿಲ್ಲ. ಸರ್ಕಾರಿ ಅಧಿಕಾರಿಗಳು ಸಹ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ, ಗುತ್ತಿಗೆದಾರರು ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಅದು ಈಗಾಗಲೇ ತಮ್ಮ ಗಮನಕ್ಕೆ ಬಂದಿದೆ. ಕೊಪ್ಪಳ ಜಿಲ್ಲೆಯಲ್ಲಿ ನಡೆದಿರತಕ್ಕಂಥ ಘಟನೆ ಇದು ಎಂತಹ ಕಟುಕರ ಹೃದಯವನ್ನೂ ಸಹ ಕರಗಿಸತಕ್ಕಂಥ ವಿಚಾರ. ಇದಕ್ಕೆ ಕಾರಣವೇನು? ಇದರ ಬಗ್ಗೆ ಮಾನ್ಯ ಸೋಮಶೇಖರ್ ಅವರು ಬಹಳ ಚೆನ್ನಾಗಿ ಆಡಳಿತದ ಅನುಭವದಿಂದ ಮಾತನಾಡಿದ್ದಾರೆ. ಅದರ ಜೊತೆಗೆ ನಾವು ಎರಡು ಮೂರು ವಿಚಾರಗಳನ್ನು ಸೇರಿಸುವುದಕ್ಕೆ ಬಯಸುತ್ತೇನೆ. ಇವತ್ತು ಈ ರೀತಿ ರೈತರು ಆತ್ಮಹತ್ಯೆ ಮಾಡಿಕೊಳ್ಳಬೇಕಾದರೆ, ರಾಜ್ಯ ಸರ್ಕಾರದ ಜೊತೆ ಏನು ನಾವು ಸಂವಿಧಾನದ ಒಳಗೆ ಕೆಲಸ ಮಾಡುತ್ತಿದ್ದೇವೆ, ರಾಜ್ಯ ಸರ್ಕಾರಕ್ಕೂ ಸಹ ಹಣಕಾಸಿನ ಇತಿಮಿತಿಗಳು ಇರುತ್ತವೆ. ಕೇಂದ್ರ ಸರ್ಕಾರ ಮಾಡಿರತಕ್ಕಂಥಾದ್ದು ಏನು? ಈಗಾಗಲೇ

ಒಂದು ಕೃಷಿ ಜಾರಿಗೆ ತಂದಿದ್ದರೂ ಸಹ ಪಂಜಾಬಿನಲ್ಲಿ, ಹರಿಯಾಣದಲ್ಲಿ, ರಾಜಸ್ಥಾನದಲ್ಲಿ, ಆಂಧ್ರಪ್ರದೇಶದಲ್ಲಿ ಸುಮಾರು ಹತ್ತು ಸಾವಿರ ಜನ ರೈತರು ಕಳೆದ ಐದು ವರ್ಷಗಳಲ್ಲಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಈಗ ಚುನಾವಣೆ ಬಂತು ಎಂದ್ಹೇಳಿ ಬಡ್ಡಿ ರಿಯಾಯಿತಿಯನ್ನು ಘೋಷಣೆ ಮಾಡುತ್ತಿದ್ದಾರೆ. ಇವತ್ತು ರೈತರು ಸಾಲವನ್ನು ತೆಗೆದುಕೊಳ್ಳತಕ್ಕಂಥ ಸ್ಥಿತಿಯಲ್ಲಿ ಇಲ್ಲ. ಯಾವುದೇ ಎಸ್‌ಎಲ್‌ಡಿ ಬ್ಯಾಂಕ್ ಸಾಲವನ್ನು ಕೊಡತಕ್ಕಂತ ಸ್ಥಿತಿಯಲ್ಲಿ ಇಲ್ಲ. ಪಿಎಲ್‌ಡಿ ಬ್ಯಾಂಕ್‌ಗಳು ಮುಚ್ಚತಕ್ಕಂತ ಸ್ಥಿತಿಗೆ ಹೋಗಿವೆ. ಡಿಸಿಸಿ ಬ್ಯಾಂಕ್‌ಗಳು ಸೊಸೈಟಿಗೆ ಸಾಲವನ್ನು ಕೊಡತಕ್ಕಂಥ ಸ್ಥಿತಿಯಲ್ಲಿ ಇಲ್ಲ. ಸಾಲ ಕೊಡತಕ್ಕಂಥಾದ್ದು ಸಾಲ ವಸೂಲಾತಿ ಮಾಡತಕ್ಕಂಥಾದ್ದು ಕೇವಲ ಪುಸ್ತಕದ ಮೇಲೆ ಇರುವುದು ಎಂದು ನಮಗೆಲ್ಲಾ ಗೊತ್ತಿರತಕ್ಕಂಥ ವಿಚಾರ. ಇವತ್ತು ಕೇಂದ್ರ ಸರ್ಕಾರ ಯಾವುದೇ ಒಂದು ಸ್ಪಷ್ಟ ನೀತಿಯನ್ನು ಮಾಡಬೇಕು. ಕೇಂದ್ರ ಸರ್ಕಾರ ಮನಸ್ಸು ಮಾಡಿದರೆ ರಾಜ್ಯಸರ್ಕಾರದ ಸಹಕಾರವನ್ನು ತೆಗೆದುಕೊಂಡರೆ 15 ದಿವಸದ ಒಳಗಡೆ ಇವತ್ತು ಎಲ್ಲಿ ರೈತರು ಸಾಲ ತೆಗೆದುಕೊಂಡಿರುತ್ತಾರೆ, ಒಂದು ಪಿಎಲ್‌ಡಿ ಬ್ಯಾಂಕ್‌ನಲ್ಲಿ, ಒಂದು ಎಸ್‌ಎಲ್‌ಡಿ ಬ್ಯಾಂಕ್‌ನಲ್ಲಿ, ಸೊಸೈಟಿಗಳಲ್ಲಿ ಅಥವಾ ನಾನ್ ಫಾರ್ಮಿಂಗ್ ಸೆಕ್ಟರ್ ಎಂದು ಡಿಸಿಸಿ ಬ್ಯಾಂಕ್‌ನಿಂದ ನೇರವಾಗಿ ಕೆಲವು ಸಾಲಗಳನ್ನು ಕೊಟ್ಟಿದ್ದಾರೆ. ಈ ಬ್ಯಾಂಕಿಂಗ್ ಇನ್ಸಿಟ್ಯೂಷನ್‌ಗಳು ಏನಿವೆ ಅದರಲ್ಲಿ ಎಷ್ಟು ಜನ ರೈತರು ಸಾಲ ತೆಗೆದುಕೊಂಡಿದ್ದಾರೆ ಎಂದು ಒಂದು ಸಮೀಕ್ಷೆಯನ್ನು ಸರ್ಕಾರ ಮಾಡುವುದಕ್ಕೆ ಆಗಿಲ್ಲವೆ? ಅದಕ್ಕೆ ಪರಿಹಾರವನ್ನು ಕೊಡತಕ್ಕಂಥ ಕೆಲಸವನ್ನು ಇವತ್ತು ಕೇಂದ್ರ ಸರ್ಕಾರ ಮಾಡಬೇಕಾಗಿತ್ತು ಒಂದು ಮಾತನ್ನು ಬಹಳ ದುಃಖದಿಂದ ಹೇಳಬೇಕಾಗುತ್ತದೆ, ನಮ್ಮ ಹಣಕಾಸಿನ ಮಂತ್ರಿಗಳು ಮತ್ತು ಕೇಂದ್ರ ಸರ್ಕಾರದವರು ಒಂದು ನಿರ್ದಿಷ್ಟವಾದ ಯೋಜನೆಯನ್ನು ಇದುವರೆಗೂ ಸಹ ಘೋಷಣೆ ಮಾಡಿಲ್ಲ. ಇದನ್ನು ನಾವು ಖಂಡಿಸಬೇಕಾಗುತ್ತದೆ. ಇವತ್ತು ಇವರು ರೈತರ ಆತ್ಮಹತ್ಯೆ ಬಗ್ಗೆ ಕಾಳಜಿಯನ್ನು ಇಟ್ಟುಕೊಂಡಿರುವುದು ನಿಜವಾಗಿದ್ದರೆ, ನಿಜವಾಗಿ ಆ ರೈತರಿಗೆ ಏನಾದರೂ ಸಹಾಯ ಮಾಡಬೇಕೆಂದು ಕೇಂದ್ರ ಸರ್ಕಾರಕ್ಕೆ ಆಸಕ್ತಿ ಇದ್ದಿದ್ದರೆ ಈಗಾಗಲೇ ಇದರ ಘೋಷಣೆಯನ್ನು ಮಾಡಬೇಕಾಗಿತ್ತು. ಈಗಾಗಲೇ ರಿಯಾಯಿತಿ ಕೊಡಬೇಕಾಗಿತ್ತು. ಆತ್ಮಹತ್ಯೆ ಮಾಡಿಕೊಳ್ಳತಕ್ಕಂಥ ಕುಟುಂಬಗಳಿಗೆ ಪ್ರಧಾನ ಮಂತ್ರಿಗಳ ಪರಿಹಾರ ನಿಧಿಯಿಂದ 50 ಸಾವಿರದಿಂದ ಒಂದು ಲಕ್ಷ ರೂಪಾಯಿಗಳವರೆಗೆ ಕೊಡತಕ್ಕಂಥ ಯೋಜನೆಯನ್ನು ಈಗಾಗಲೇ ಘೋಷಣೆ ಮಾಡಬೇಕಾಗಿತ್ತು. ಆದರೆ ದುರ್ದೈವದ ವಿಚಾರ. ಕೇಂದ್ರ ಸರ್ಕಾರ ಇದನ್ನು ಮಾಡಿಲ್ಲ. ರಾಜ್ಯ ಸರ್ಕಾರ ಏನಾದರೂ ಪ್ರಧಾನ ಮಂತ್ರಿಗಳಿಗೆ ಭೇಟಿ ಮಾಡಿದಂತಹ ಸಂದರ್ಭದಲ್ಲಿ ಇದಕ್ಕೆ ಒಂದು ನೀಲಿ ನಕ್ಷೆಯನ್ನು ತಯಾರು ಮಡತಕ್ಕಂಥ ಅವಶ್ಯಕತೆ ಇದೆ. ಇಲ್ಲಿ ಅನೇಕ ಮಂದಿ ಸಹಕಾರಿಗಳು ಇದ್ದಾರೆ. ಇದು ಸಹಕಾರಿಗಳೆಲ್ಲರಿಗೂ ಸಹ ಗೊತ್ತಿರತಕ್ಕಂಥ ವಿಚಾರ. ನಮ್ಮ ಜಿಲ್ಲೆಯಲ್ಲಿ ಬಿಜಾಪುರ ಜಿಲ್ಲಾ ಬ್ಯಾಂಕ್ ಬಹಳ ಚೆನ್ನಾಗಿ ಕೆಲಸ ಮಾಡುತ್ತಿತ್ತು. ಅದನ್ನು ಸೂಪರಸೀಡ್ ಮಾಡಿ ಅದರಲ್ಲಿ ಏನೇನೋ ಕಿತಾಪತಿ ಮಾಡಿದರು. ಬೀದರ್‌ನಲ್ಲಿ ಇರತಕ್ಕಂಥ ಜಿಲ್ಲಾ ಬ್ಯಾಂಕ್ ಸಹ ಚೆನ್ನಾಗಿ ಕೆಲಸವನ್ನು ಮಾಡುತ್ತಿದೆ. ಅಂತಹ ಬ್ಯಾಂಕುಗಳ ಮೂಲಕ ಒಂದು ದಿವಸದ ಒಳಗಡೆ ಯಾರು ಡಿಸ್ಟ್ರೆಸ್ ಆಗಿರತಕ್ಕಂಥ ರೈತರು ಇದ್ದಾರೆ ಇದನ್ನು ತಿಳಿದುಕೊಳ್ಳುವುದಕ್ಕೆ ನಿಮ್ಮ ಕೈಯಲ್ಲಿ ಆಗುವುದಿಲ್ಲವೆ? ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ಶಿವಣ್ಣನವರನ್ನು ದೋಷಣೆ ಮಾಡುವುದಕ್ಕೆ ಹೋಗುವುದಿಲ್ಲ. ಈ ಚೆಸ್ ಗೇಮ್‌ನಲ್ಲಿ ಅವರು ಸ್ಮಾಲ್ ಪ್ಲೇಯರ್. ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಹೇಳುತ್ತಿದ್ದೇನೆ, ಮೂರು ವರ್ಷದಿಂದ ನೀವು ಬರಗಾಲ ಎಂದು ಹೇಳಿ ಭಾಷಣ

ಮಾಡಿಕೊಂಡು ಗಜಗಾಂಭೀರ್ಯದಿಂದ ಬೀಗುತ್ತಿದ್ದೀರಿ. 12.50 ಸಾವಿರ ಕೋಟಿ ರೂಪಾಯಿಗಳು ರೈತರಿಗೆ ತೋಟಗಾರಿಕೆಯಲ್ಲಿ ಲುಕ್ಸಾನಾಗಿದೆ. ನಮ್ಮ ರೈತರು ಮುಂದೆ ಬರಬೇಕಾದರೆ ಎಂಟತ್ತು ವರ್ಷ ಬೇಕಾಗುತ್ತದೆ. ಇದರ ಬಗ್ಗೆ ಏನಾದರೂ ನಿಮ್ಮ ಸರ್ಕಾರ ಕರುಣೆ ತೋರಿಸಿದ್ದೀರಾ? ನೀವು ಕೇಂದ್ರ ಸರ್ಕಾರಕ್ಕೆ ಏನು ಮೆಮೋರ್‍ಯಾಂಡಂ ಸಬ್‌ಮಿಟ್ ಮಾಡಿದ್ದೀರಿ ಅದರಲ್ಲಿ ಎಲ್ಲಾದರೂ ನೀವು ಹೇಳಿದ್ದೀರಾ? ಈ ತೋಟಗಾರಿಕೆ ಬೆಳೆಯಲ್ಲಿ ಇಷ್ಟೊಂದು ಫಸಲು ಹೋಗಿದೆ, ಇಷ್ಟೊಂದು ದ್ರಾಕ್ಷಿ ಬೆಳೆ ಸಂಪೂರ್ಣವಾಗಿ ಒಣಗಿದೆ, ಅಡಿಕೆ ಬೆಳೆ ಸಂಪೂರ್ಣವಾಗಿ ಸರ್ವನಾಶವಾಗಿದೆ, ತೆಂಗಿನ ಬೆಳೆ ಸರ್ವನಾಶವಾಗಿದೆ, ಸಪೋಟ ಬೆಳೆ ಸರ್ವನಾಶವಾಗಿದೆ. ಈ ರೀತಿಯಾಗಿ ಎಲ್ಲಾದರೂ ಒಂದು ಕಡೆ ಸೀರಿಯಸ್ ಆಗಿ ನೀವು ಮೆಮೋರ್‍ಯಾಂಡಂನಲ್ಲಿ ಸಬ್‌ಮಿಟ್ ಮಾಡಿದ್ದೀರಾ ಅಥವಾ ಕೇಂದ್ರ ಸರ್ಕಾರದಿಂದ ಆಫೀಸರ್ಸ್ ಬರಬೇಕೆಂದು ಏನಾದರೂ ನೀವು ಹೇಳಿದ್ದೀರಾ? ಅದೇ ಬೇರೆ ರಾಜ್ಯಗಳು ಆಗದ್ದಿದ್ದರೆ ಎಷ್ಟೊಂದು ಗಲಾಟೆ ಮಾಡುತ್ತಿದ್ದರು. ಆದರೆ ನೀವು ಇದುವರೆಗೂ ಏನೂ ಸಹ ಮಾಡಿಲ್ಲ. ಅತ್ತು ಕರೆದ ಮೇಲೆ ಮೂರು ವರ್ಷವಾದ ಮೇಲೆ ಆತ್ಮಹತ್ಯೆ ಮಾಡಿಕೊಂಡಂತಹವರಿಗೆ ಒಂದು ಲಕ್ಷ ರೂಪಾಯಿ ಕೊಡುತ್ತೇವೆನ್ನುವ ವಿಚಾರವನ್ನು ಹೇಳಿದ್ದೀರಿ. ಮಾನ್ಯ ವಿರೋಧ ಪಕ್ಷದ ನಾಯಕರು ಈ ಪ್ರಶ್ನೆಯನ್ನು ಕೇಳಿದರು. ನಮ್ಮ ಹತ್ತಿರ ಅಂಕಿಅಂಶಗಳನ್ನು ಇವೆ, ಎಷ್ಟು ಜನ ಆತ್ಮಹತ್ಯೆ ಮಾಡಿಕೊಂಡಂತಹ ರೈತರಿಗೆ ನೀವು ಇದುವರೆಗೆ ದುಡ್ಡು ಕೊಟ್ಟಿದ್ದೀರಿ? ಇದುವರೆಗೂ ಕೊಟ್ಟಿಲ್ಲ. ಬರೀ ಘೋಷಣೆ ಮಾಡಿದ್ದಾರೆ. ಅದರಿಂದಾಗಿ ನಮ್ಮ ಹೋಮ್ ಡಿಪಾರ್ಟ್‌ಮೆಂಟ್, ನಾನು ತಿಳಿದುಕೊಂಡಿರುವ ಹಾಗೆ ನನ್ನ ಅನುಭವದಿಂದ ಹೇಳತಕ್ಕಂಥ ಮಾತು ಇದು ಎಫಿಷಿಯಂಟ್ ಡಿಪಾರ್ಟ್‌ಮೆಂಟ್. ನಮ್ಮ ಕರ್ನಾಟಕದ ಪೊಲೀಸರು ಯಾರಿಗೂ ಏನು ಕಡಿಮೆಯಿಲ್ಲ. ನಮ್ಮ ವಿಲೇಜ್ ಕೇಸ್ ಹಿಸ್ಟರಿ ಏನಿದೆ ಅದನ್ನು ಪೊಲೀಸ್ ಸ್ಟೇಷನ್‌ನಲ್ಲಿ ಮೇಂಟೇನ್ ಮಾಡಿರುತ್ತಾರೆ. ಯಾವ ಊರಿನಲ್ಲಿ ಗ್ರೀನ್ ಕಾರ್ಡ್ ಕೆಳಗಡೆ ಬಡತನದಲ್ಲಿ ಇರತಕ್ಕಂಥ ಫ್ಯಾಮಿಲಿಗಳು ಎಷ್ಟಿವೆ ಎಂದು ಒಂದು ಹಳ್ಳಿಯಲ್ಲಿ ತಿಳಿದುಕೊಳ್ಳುವುದು ಬಹಳ ಕಷ್ಟದ ಕೆಲಸವೇ? ಇವತ್ತು ಇದೆ ಅದು. ಆ ವಿಲೇಜ್ ಕೇಸ್ ಹಿಸ್ಟರಿ ನೀವು ತೆಗೆದು ನೋಡಿದರೆ, ಆ ಊರಿನಲ್ಲಿ ಎಷ್ಟು ಬಡ ಕುಟುಂಬಗಳು ಇವೆ ಎನ್ನುವುದನ್ನು ನೋಡಬಹುದು. ಮಾನ್ಯ ಮುಖ್ಯಮಂತ್ರಿಗಳ ಸ್ವಂತ ಕ್ಷೇತ್ರವಾದ ಮದ್ದೂರಿನಿಂದ ಮುತ್ತತ್ತಿಗೆ ಹೋಗಿ ಆತ್ಮಹತ್ಯೆ ಮಾಡಿಕೊಂಡರು. ಮಾನ್ಯ ಸೋಮಶೇಖರ್ ಅವರ ಕ್ಷೇತ್ರದಿಂದ, ಮಾನ್ಯ ಮುಖ್ಯಮಂತ್ರಿಗಳ ತವರು ಜಿಲ್ಲೆ, ಆ ಜಿಲ್ಲೆಯಿಂದ ಹೋಗಿ ಕಾವೇರಿಯಲ್ಲಿ ಬಿದ್ದು ಸತ್ತು ಹೋದರು. ಅದಕ್ಕೆ ಎಷ್ಟು ಪರಿಹಾರ ಕೊಟ್ಟಿದ್ದೀರಿ? ಕೊನೇಪಕ್ಷ ಯಾರಾದರೂ ನಿಮ್ಮ ಜಿಲ್ಲಾಮಂತ್ರಿಗಳು ಅಲ್ಲಿ ಹೋಗಿ ನೋಡಿದಿರಾ? ಮಾನ್ಯ ಖರ್ಗೆಯವರು ಹೊರಟು ಹೋದರು. ಅವರಿಗೆ ಏನಾದರೂ ಪರಿಹಾರ ಕೊಡತಕ್ಕಂಥಾದ್ದು ಇದೆಯೇ? ನೀವು ಕೇಂದ್ರ ಸರ್ಕಾರದಿಂದ ಹಳದಿ ಕಾರ್ಡ್ ಯೋಜನೆ ಮಾಡಿದ್ದೀರಿ ಅದು ಕೇಂದ್ರ ಸರ್ಕಾರದಿಂದ ಮುಕ್ಕಟೆಯಾಗಿ ಅಕ್ಕಿ ಕೊಡುವುದು. ಮಾನ್ಯ ಪ್ರಧಾನಮಂತ್ರಿಗಳು ಹೇಳಿದ್ದಾರೆ, ಓರಿಸ್ಸಾದಲ್ಲಿ ಜನರು ಹಸಿವಿನಿಂದ ಯಾರೂ ಸತ್ತಿಲ್ಲ. ಅವರು ಸತ್ತಿದ್ದು ಬೇರೆ ಕಾರಣದಿಂದ. ಹಸಿವಿನಿಂದ ಒಂದು ದಿನದಲ್ಲಿ ಯಾರೂ ಸಾಯುವುದಿಲ್ಲ. ಒಂದು ಹೊತ್ತು, ಎರಡು ಹೊತ್ತು ಮೂರು ಹೊತ್ತು ಊಟ ಇಲ್ಲದೆ ಯಾರೂ ಸಾಯುವುದಿಲ್ಲ.

(ಶ್ರೀ ಬಿ.ಆರ್. ಯಾವಗಲ್ ಅವರು ಅಧ್ಯಕ್ಷ ಪೀಠವನ್ನಲಂಕರಿಸಿದರು)

ಹೇಗೋ ಬದುಕುತ್ತಾರೆ. ಪಕ್ಕದ ಮನೆಯಿಂದಲಾದರೂ ಸಾಲ ತೆಗೆದುಕೊಂಡು ಬರುತ್ತಾರೆ. ನಮ್ಮ ಸಂಸ್ಕೃತಿಯಲ್ಲಿ ಪಕ್ಕದ ಮನೆಯವರು ಸ್ವಲ್ಪ ಸಾಲ ಕೊಡತಕ್ಕಂಥ ಪದ್ಧತಿ ಇದೆ. ಆದರೆ ವಸ್ತುಸ್ಥಿತಿಯಲ್ಲಿ

ಸರ್ಕಾರ ಈ ಹಳದಿ ಕಾರ್ಡನ್ನು ಕೊಡತಕ್ಕಂಥ ವ್ಯವಸ್ಥೆ ಮಾಡಿದ್ದರೂ ಸಹ ಈ ಪರಿಸ್ಥಿತಿ ಬರುತ್ತಿರಲಿಲ್ಲ. ನೀವು ರಾಜ್ಯ ಸರ್ಕಾರದವರು, ಕೇಂದ್ರ ಸರ್ಕಾರಕ್ಕೆ ಕೊನೇಪಕ್ಷ ನಮಗೆ ಇಷ್ಟು ಅಕ್ಕಿ ಬೇಕು, ನಮಗೆ ಪುಕ್ಕಟೆ ಕೊಡತಕ್ಕಂಥಾದ್ದು ಇದೆ, ಕೂಲಿ ಕೊಡುವುದಕ್ಕೆ ಆಗಿಲ್ಲ ಎಂದು ಒಂದು ಸಮೀಕ್ಷೆಯನ್ನು ರಾಜ್ಯ ಸರ್ಕಾರ ಮಾಡದೆ ಇದ್ದಾಗ ನೀವು ಎಷ್ಟು ಸೀರಿಯಸ್ ಆಗಿ ಇದ್ದೀರಿ ಈ ಆತ್ಮಹತ್ಯೆ ಪ್ರಕರಣದ ಬಗ್ಗೆ ಎಂದು ನಾನು ಈ ಸಂದರ್ಭದಲ್ಲಿ ಕೇಳುವುದಕ್ಕೆ ಬಯಸುತ್ತೇನೆ. ಇವತ್ತು ಬಹಳ ಪ್ರಮುಖವಾಗಿ ರಾಜ್ಯಸರ್ಕಾರ ರೈತರ ಆತ್ಮಹತ್ಯೆ ವಿಚಾರದಲ್ಲಿ ಒಂದು ರೀತಿಯ ಉದಾಸೀನ, ಅಸಡ್ಡೆ, ಅಸಹನೀಯವಾಗಿರತಕ್ಕಂಥಾದ್ದು ಇದೆ. ಆ ಒಂದು ಕಾರಣದಿಂದ ಇವತ್ತು ಆತ್ಮಹತ್ಯೆ ಪ್ರಕರಣಗಳು ಸಾಮೂಹಿಕವಾಗಿ ಹೆಚ್ಚಾಗುತ್ತಿವೆ. ಇದು ಬಹಳ ಡೇಂಜರಸ್‌ಟ್ರೆಂಡ್. ಒಬ್ಬ ಸತ್ತರೆ ಪರವಾಗಿಲ್ಲ, ಈಗ ಯಾವ ಸ್ಥಿತಿಗೆ ಬಂದಿದ್ದಾರೆಂದರೆ, ನಾನು, ನನ್ನ ಮಗ, ನನ್ನ ಹೆಂಡತಿ ನನ್ನ ಮಕ್ಕಳು, ಇವರೆಲ್ಲರೂ ದುಃಖ ಪಡುತ್ತಾರಲ್ಲವೇ, ಎಲ್ಲರೂ ಆ ಕಡೆ ಹೋಗಿ ವಿಷ ಸೇವಿಸಿ ಸತ್ತು ಹೋಗೋಣವೆನ್ನುವ ಸ್ಥಿತಿಗೆ ಬರುತ್ತಿದ್ದಾರೆ. ನಾನು ಪ್ರೊ ನಂಜುಂಡಸ್ವಾಮಿವರನ್ನು ಅಪ್ರೀಶಿಯೇಟ್ ಮಾಡುತ್ತೇನೆ, ಅವರು ಈಗ ಈ ಸದನದಲ್ಲಿ ಇಲ್ಲ. ಮಾನ್ಯ ಎಸ್.ಬಂಗಾರಪ್ಪನವರನ್ನು ಅಪ್ರೀಶಿಯೇಟ್ ಮಾಡುತ್ತೇನೆ. Atleast they have gone and they have told. ಧೈರ್ಯವಾಗಿ ಹೇಳಿದ್ದಾರೆ, ನೀವು ಸಾಯಬೇಡಿ, ಫೈಟ್ ಮಾಡೋಣ, ಬ್ಯಾಂಕ್ ಸಾಲಕ್ಕೋಸ್ಕರ ಏಕೆ ಹೆದರುತ್ತೀರಿ ಎಂದು ಧೈರ್ಯದಿಂದ ಹೇಳಿದ್ದಾರೆ. ಈ ಎದೆಗಾರಿಕೆಯನ್ನು ತೋರಿಸದೇ ಇರುವಂತಹ ಮಾನ್ಯ ಮುಖ್ಯಮಂತ್ರಿಯವರನ್ನು ಇಟ್ಟುಕೊಂಡು, ನೀವು ಈ ಸಮಸ್ಯೆಯನ್ನು ಎದುರಿಸುತ್ತೇವೆಂದು ಹೇಳಿದರೆ, ಹೇಗೆ ಆಗುತ್ತದೆ? ನಿಜ, ಪ್ರಕೃತಿ ವಿಕೋಪವಿದೆ, ಮಳೆ ಬಂದಿಲ್ಲ, ಬರಗಾಲವಿದೆ, ಹಣವಿಲ್ಲ, ಇವೆಲ್ಲವನ್ನೂ ಒಪ್ಪಿಕೊಳ್ಳೋಣ, ಆದರೆ ನಿಮಗೆ ಎದೆಗಾರಿಕೆ ಬೇಡವೇ? ಇಲ್ಲ ನೀವು ಸಾಯಬೇಡಿ, ಆತ್ಮಹತ್ಯೆಯನ್ನು ಮಾಡಿಕೊಳ್ಳಬೇಡಿ, ಸರ್ಕಾರ ತಾಯಿ ಇದ್ದ ಹಾಗೆ, ನಾನು ಎಲ್ಲೋ ಒಂದು ಕಡೆ ರಕ್ಷಣೆ ಮಾಡುತ್ತೇನೆ, ನೀವು ಬದುಕಿರಿ, ಎಂದು ಧೈರ್ಯವನ್ನು ತೋರಿಸದೇ ಇರುವಂತಹ ಈ ಸರ್ಕಾರಕ್ಕೆ, ನಾವು ಏನು ಹೇಳಬೇಕೆಂಬುದನ್ನು ಮಾನ್ಯ ಎಸ್.ಪಿ. ಮುದ್ದಹನುಮೇಗೌಡರೇ, ಹೇಳಿಬಿಟ್ಟರೆ ಆಯಿತು, ಏಕೆಂದರೆ ಅದನ್ನು ನಾನು ಇಲ್ಲಿ ಹೇಳಿಬಿಟ್ಟರೆ ಅವರು ಗಲಾಟೆ ಮಾಡುವುದಕ್ಕೆ ಶುರುಮಾಡಿಬಿಡುತ್ತಾರೆ. "ಓ ಸಿಂಧ್ಯರವರು ಹೀಗೆ ಮಾತನಾಡಿಬಿಟ್ಟರು" ಎಂದು ಹೇಳುತ್ತಾರೆ, ನಿಮ್ಮ ಸರ್ಕಾರಕ್ಕೆ ನಾವು ಏನೆಂದು ಹೇಳಬೇಕು? ಬಹಳ ಷಂಡತ್ವವಿರುವಂತಹ ಸರ್ಕಾರವಿದು, ಎಂದು ಹೇಳೋಣವೇ? ಅಥವಾ ಇನ್ನು ಏನು ಹೇಳಬೇಕೆನ್ನುವ ಭಾಷೆಯನ್ನು ನೀವೇ ಹೇಳಿಬಿಡಿ. ಅದನ್ನು ನಾವು ಒಪ್ಪಿಕೊಂಡು ಬಿಡುತ್ತೇವೆ ಈಗ ಕೊಪ್ಪಳದಲ್ಲಿ ನಡೆದಿರುವಂತಹ ಘಟನೆ ಏನು ಇದೆ, ಇದು ಇಡೀ ರಾಜ್ಯದಲ್ಲಿ ಪುನರಾವರ್ತನೆಯಾಗುತ್ತದೆ, I am very sorry Mr. Sageer Ahmed. ರಾಜ್ಯದಲ್ಲಿ 155 ತಾಲ್ಲೂಕುಗಳಲ್ಲಿ ಬರಗಾಲ ಇದ್ದರೂ ಸಹ 121 ತಾಲ್ಲೂಕುಗಳಲ್ಲಿ ಮಾತ್ರ ಬರಗಾಲವಿದೆಯೆಂದು ಕೇಂದ್ರ ಸರ್ಕಾರಕ್ಕೆ ಬರೆದುಕೊಟ್ಟಿದ್ದೀರಿ. ಇದನ್ನು ಯಾವ ಅಂಕಿಅಂಶಗಳ ಆಧಾರದ ಮೇಲೆ ಬರೆದುಕೊಟ್ಟಿದ್ದೀರಿ ಎಂಬುದನ್ನು ನಾನು ಕೇಳಬಯಸುತ್ತೇನೆ. ಈ ರೀತಿ ಬರೆದುಕೊಡಬೇಕದರೆ, ನಿಮ್ಮ ರೆವಿನ್ಯೂ ಸೆಕ್ರೆಟರಿಗಳು ಏನು ಮಾಡುತ್ತಿದ್ದಾರೆ. ತೋಟಗಾರಿಕೆಯ ಇಲಾಖಾ ಸೆಕ್ರೆಟರಿಗಳು ಏನು ಮಾಡುತ್ತಿದ್ದಾರೆ? ಇದು ಮೂಲಭೂತವಾದ ಸಮಸ್ಯೆ ಇರುವಂಥಾದ್ದು ಈ ರೀತಿ ಇರುವಾಗ ಆತ್ಮಹತ್ಯೆ ಮಾಡಿಕೊಳ್ಳದೇ ಏನು ಮಾಡುತ್ತಾರೆ? ನನಗೆ ಸಂಬಳ ಬರುತ್ತದೆ, ನಾನು ಎಂಎಲ್‌ಎ

(+ ಈ ಚಿಹ್ನೆ ಮಾನ್ಯ ಸದಸ್ಯರ ಭಾಷಣ ಅಥವಾ ಟಿಪ್ಪಣಿಯನ್ನು ಪರಿಷ್ಕರಿಸಿಲ್ಲವೆಂದು ಸೂಚಿಸುತ್ತದೆ.)

ಆಗದೇ ಹೋದರೆ ಪೆನ್‌ಷನ್ ಬರುತ್ತದೆ, ನಾನು ಸತ್ತರೆ ನನ್ನ ಹೆಂಡತಿಗೆ ಪೆನ್‌ಷನ್ ಕೊಡುತ್ತಾರೆ. ಇದು ನಮ್ಮಲ್ಲಿ ವ್ಯವಸ್ಥೆ ಇರುವಂಥಾದ್ದು, ಆದರೆ ಅವರಿಗೆ ಯಾರು ಕೊಡುತ್ತಾರೆ? ಆದುದರಿಂದ ಅವರು ಆತ್ಮಹತ್ಯೆಯನ್ನು ಮಾಡಿಕೊಂಡಿದ್ದಾರೆ, ಇವತ್ತು ಚನ್ನಗಿರಿ ತಾಲ್ಲೂಕಿನಲ್ಲಿ ಅಡಿಕೆ ಬೆಳೆ ಸಂಪೂರ್ಣವಾಗಿ ನಾಶವಾಗಿದೆ, ಅಲ್ಲಿ ರೈತರು ಏನು ಮಾಡಬೇಕು? ಅವರು ಮರ್ಯಾದೆಯಿಂದ ಬದುಕಬೇಕಲ್ಲವೇ? ಕಾರ್ಮಿಕರಾದರೆ, ಅವರು ಎಲ್ಲೋ ಹೋಟೆಲ್‌ಗೆ ಹೋಗಿ ಕೆಲಸವನ್ನು ಮಾಡಬಹುದೆಂದು ಹೇಳಬಹುದು, ಅಂತಹ ಸ್ಥಿತಿ ಬರಬೇಕಾದರೆ, ನಿಮ್ಮ ರಾಜ್ಯ ಸರ್ಕಾರದ ಅಮಾನೀಯವಾದಂತಹ ದೃಷ್ಟಿಕೋನವೇ ಇದಕ್ಕೆ ಕಾರಣ. ನಿಮ್ಮಲ್ಲಿ ಮಾನವೀಯತೆ ಎಂಬುದು ಇಲ್ಲ, ಕರುಣೆ ಎಂಬುದು ಇಲ್ಲ.

(ಛೇರ್ಮನ್‌ರವರು ಬೆಲ್ ಮಾಡಿದರು)

ಶ್ರೀ ಪಿ.ಜಿ. ಆರ್. ಸಿಂಧ್ಯ :– ಛೇರ್ಮನ್‌ರವರೇ, ತಾವು ಬೆಲ್ ಹೊಡೆಯಬೇಡಿ, ಬೇಕಾದರೆ ನಾನು ಕುಳಿತುಕೊಂಡು ಬಿಡುತ್ತೇನೆ, ಬೆಲ್ ಹೊಡೆದ ಮೇಲೆ ನಾನು ಮಾತನಾಡುವುದಕ್ಕೆ ಸಿದ್ಧನಿಲ್ಲ. ಈ ಸರ್ಕಾರದ ಧೋರಣೆಯನ್ನು ಪ್ರತಿಭಟನೆ ಮಾಡಿ, ನಾನು ನನ್ನ ಮಾತನ್ನು ಮುಗಿಸುತ್ತಿದ್ದೇನೆ.

+ ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) :– ಮಾನ್ಯ ಛೇರ್ಮನ್‌ರವರೇ, ಸಾವು ಎನ್ನುವ ವಿಚಾರ ಅತ್ಯಂತ ಸೂಕ್ಷ್ಮವಾದಂತಹದ್ದು, ಬಹಳ ಕಷ್ಟ, ಯಾವುದೇ ಒಂದು ಅಭಿಪ್ರಾಯವನ್ನು ನೇರವಾಗಿ, ವ್ಯಕ್ತಪಡಿಸುವಂಥಾದ್ದು, ಅದರಲ್ಲೂ ಇಂತಹ ಜವಾಬ್ದಾರಿಯುತವಾದಂತಹ ಸದನದ ಮೂಲಕ ವ್ಯಕ್ತಪಡಿಸುವಂಥಾದ್ದು, ಬಹಳ ಕಷ್ಟ.

ಶ್ರೀ ಶಿವಾನಂದ ಎಸ್. ಪಾಟೀಲ್ :– ಮಾನ್ಯ ಛೇರ್ಮನ್‌ರವರೇ, ಇದು ಏನು ನಿಲುವಳಿ ಸೂಚನೆನಾ?......

ಶ್ರೀ ಎಸ್. ಸುರೇಶ್ ಕುಮಾರ್ :– ಮಾನ್ಯ ಛೇರ್ಮನ್‌ರವರೇ, ಮಾನ್ಯ ಎಸ್.ಪಿ. ಮುದ್ದ ಹನುಮೇಗೌಡರು, ಮಾನ್ಯ ಮಲ್ಲಿಕಾರ್ಜುನ ನಾಗಪ್ಪನವರ ಪರವಾಗಿ ಉತ್ತರವನ್ನು ಕೊಡುತ್ತಿದ್ದಾರಾ ಏನು ಎಂದು ಗೊತ್ತಿಲ್ಲ.

ಛೇರ್ಮನ್ : ಅವರು ಇನ್ನೂ ಪ್ರಾರಂಭ ಮಾಡಿಲ್ಲ.

ಶ್ರೀ ಶಿವಾನಂದ ಎಸ್. ಪಾಟೀಲ್ :– ಮಾನ್ಯ ಛೇರ್ಮನ್‌ರವರೇ, ನಮಗೂ ಏನೆಂಬುದು ತಿಳಿಯಬೇಕಲ್ಲಾ?

ಗೊಂದಲ

Sri Sp. Muddahanumegowda :- I want to participate in the dabate

ಶ್ರೀ ಜಗದೀಶ್ ಶೆಟ್ಟರ್ :– ಮಾನ್ಯ ಛೇರ್ಮನ್‌ರವರೇ, ಇದು ಒಂದು ಹೊಸ ಪದ್ಧತಿಯಾಗಿದೆ. ಮಾನ್ಯ ಮಂತ್ರಿಗಳು ಸರ್ಕಾರದ ಪರವಾಗಿ ಏನು ಬೇಕಾದರೂ ಡಿಫೆಂಡ್ ಮಾಡಲಿ ಆದರೆ ಶಾಸಕರ ಮುಖಾಂತರ ಆಗುವಂಥಾದ್ದು ಏನಿದೆ ಇದು ಸರಿಯಿಲ್ಲ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ :– ಮಾನ್ಯ ಛೇರ್ಮನ್‌ರವರೇ, ನಾನು ಸರ್ಕಾರವನ್ನು ಡಿಫೆಂಡ್ ಮಾಡುವುದಕ್ಕೆ ನಿಂತಿಲ್ಲ, I want to express my views with regard to the subject. Are you not prepared to hear me? why are you not prepared to hear me? I want to express my views here. I am not.....

Mr. Chairman :- Adjournment motion ಅನ್ನು allow ಮಾಡಿ exculsive ಆಗಿ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಾರೆಯೇ? ಇಲ್ಲ ಅವಕಾಶ ಕೊಟ್ಟಿಲ್ಲ, ಅಂದರೆ ಇದನ್ನು ನಿಯಮ 69ರಡಿಯಲ್ಲಿ ಅಲೋ ಮಾಡಿದ್ದಾರೋ, ಅಥವಾ ಹಾಗೇ ಅಲೋ ಮಾಡಿದ್ದಾರೋ, ಇಲ್ಲ ಶೂನ್ಯವೇಳೆಯಲ್ಲಿ ಅಲೋ ಮಾಡಿದ್ದಾರೋ ಏನೋ ಒಟ್ಟಿನಲ್ಲಿ ಮಾಡಿದ್ದಾರೆ. ವಿಷಯದ ಗಾಂಭೀರ್ಯತೆಯ ಮೇಲೆ ಮಾನ್ಯ ವಿಧಾನಸಭಾಧ್ಯಕ್ಷರು ಮಾನ್ಯ ಸದಸ್ಯರ ಹೆಸರನ್ನು ನಮೂದು ಮಾಡಿ ಸಭೆಯಲ್ಲಿ ಮಾತನಾಡಲು ಅವಕಾಶ ಕೊಡುವಂತೆ ಹೇಳಿದ್ದಾರೆ, ಅವರು ಇನ್ನೂ ವಿಷಯವನ್ನು ಮಾತನಾಡಲು ಪ್ರಾರಂಭ ಮಾಡಿಲ್ಲ. ಅವರು ಸರ್ಕಾರದ ಪರವಾಗಿ ಏನಾದರೂ ಮಾತನಾಡಿದರೆ, ನೀವು ತಕರಾರು ಮಾಡಿ. ನೀವು ಹೇಳಿದ್ದಕ್ಕೆ ಅವರು ಸಮರ್ಥನೆ ಮಾಡಿದರು.

Sri. S. Suresh kumar :- In What capacity a Member from the Ruling party......

Sri. SP. Muddahanumagowda :- I am Member here, I have got very right. I am sorry.

ಮಾನ್ಯ ಎಸ್. ಸುರೇಸ್‌ಕುಮಾರ್‌ರವರ ಅಭಿಪ್ರಾಯಕ್ಕೆ ನಾನು ವಿರೋಧ ಮಾಡುತ್ತೇನೆ.

Mr. Chairman :- Dont' assume. He may not be answering, why you assume that fact? I think, he may not be answering, why you assume I think, he has some point of view. Let him till

ಮಾನ್ಯ ಸದಸ್ಯರು ಏನು ಹೇಳುತ್ತಾರೆಂಬುದನ್ನು ನೋಡೋಣ.

ಶ್ರೀ ಎಸ್. ಸುರೇಶ್ ಕುಮಾರ್ :– ಮಾನ್ಯ ಛೇರ್ಮನ್‌ರವರೇ, ಡಿಮಾಂಡ್ಸ್ ಮೇಲೆ ಚರ್ಚೆಯಾದರೆ ಅವರಿಗೆ ಮಾತನಾಡುವುದಕ್ಕೆ ಅವಕಾಶವನ್ನು ಕೊಡಬಹುದು. ಆದರೆ ಇದು new precedent ಆಗುತ್ತದೆ.

ಛೇರ್ಮನ್ :– ಈಗ ಮಾನ್ಯ ಸದಸ್ಯರು ಏನು ಮಾತನಾಡುತ್ತಾರೆಂಬುದನ್ನು ಕೇಳೋಣ. ಮಾನ್ಯ ಸಭಾಧ್ಯಕ್ಷರು, ಅವರಿಗೆ ಮಾತನಾಡುವುದಕ್ಕೆ ಅಲೋ ಮಾಡಿದ್ದಾರೆ.

ಶಿವಾನಂದ ಎಸ್. ಪಾಟೀಲ್ :– ಮಾನ್ಯ ಛೇರ್ಮನ್‌ರವರೇ, ನಾನು ನಿಮ್ಮಲ್ಲಿ ಒಂದು ಸಬ್‌ಮಿಷನ್ ಮಾಡಿಕೊಳ್ಳುತ್ತೇನೆ, ತಾವು ಅಧ್ಯಕ್ಷಪೀಠದಲ್ಲಿ ಉಪಾಧ್ಯಕ್ಷರಾಗಿ ಕುಳಿತ್ತಿದ್ದೀರಿ, I want to bring it to yout notice.

ಛೇರ್ಮನ್ :– ಇಲ್ಲ, ತಾವು Misinterpret ಮಾಡುತ್ತಿದ್ದೀರಿ, ಅಧ್ಯಕ್ಷರು, ಅವರಿಗೆ ಅಲೋ ಮಾಡಿದ್ದಾರೆ, ಆದಾಗೆ ನಿಲುವಳಿ ಸೂಚನೆಯಡಿಯಲ್ಲಿ ಅಲ್ಲ. ತಾವು ಹೇಳಿದ್ದೀರಿ, ಅವರೂ ಪಾರ್ಟಿಸಿಪೇಟ್ ಮಾಡುತ್ತೇವೆಂದು ಹೇಳಿದ್ದಾರೆ, ತಾವು ಏಕೆ Prevent ಕೊಡುತ್ತೀರಿ? ಅವರು ರಿಪ್ಲೈ ಮಾಡುತ್ತಿಲ್ಲ.

Sri S. Sureshkumar :- My humble submission is, when the Minister is here he should answer it...

ಅಲ್ಲಿಗೆ ವಿಷಯ ಮುಕ್ತಾಯವಾಗುತ್ತದೆ,

Mr Chairman :- He will not reply......

ನಿಯಮ 69ರ ಅಡಿಯಲ್ಲಿ ಅವರಿಗೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದಾರೆ, As a Hon'ble Member of the House, he has every right to tell his point of view, let metell ಅವರು ರಿಪ್ಲೈ ಮಾಡಿದರೆ, ನೀವು ಅಬ್ಜೆಕ್ಟ್ ಮಾಡಿ, that is the duty of the government, why you should object it? ನೀವು ಮಾತನಾಡಬಹುದು.

ಶ್ರೀ ಎಸ್. ಸುರೇಶ್ ಕುಮಾರ್ :– ಮಾನ್ಯ ಛೇರ್ಮನ್‌ರವರೇ, ನಾವು ಮಾತನಾಡಿದ್ದಕ್ಕೆ ಗೌವರ್ನಮೆಂಟ್ ಉತ್ತರ ಕೊಡಬೇಕು.

ಛೇರ್ಮನ್ :– ಈ ವಿಷಯವನ್ನು ನಿಯಮ 69ರ ಅಡಿಯಲ್ಲಿ ಮಾತನಾಡಲು ಅಲೋ. ಮಾಡಿದ್ದಾರೆ, ಅವರು ರಿಪ್ಲೈ ಮಾಡುತ್ತಿಲ್ಲ, ತಮ್ಮ ಅಭಿಪ್ರಾಯವನ್ನು ಹೇಳುತ್ತಿದ್ದಾರೆ.

ಶ್ರೀ ಎಸ್. ಸುರೇಶ್‌ಕುಮಾರ್ :– ಮಾನ್ಯ ಛೇರ್ಮನ್‌ರವರೇ, ಸರ್ಕಾರದ ಮಿನಿಸ್ಟ್ರಿಗೆ ಉತ್ತರವನ್ನು ಕೊಡುವುದಕ್ಕೆ Standing codnsel ಇದ್ದರೆ, ಅದನ್ನು ವೆಲ್‌ಕಂ ಮಾಡುತ್ತೇನೆ.

ಶ್ರೀ ಶಿವಾನಂದ ಎಸ್. ಪಾಟೀಲ್ :– ಮಾನ್ಯ ಛೇರ್ಮನ್‌ರವರೇ, ತಮಗೆ ನಾನು ಒಂದು ಸಬ್‌ಮಿಷನ್ ಮಾಡುವುದೇನೆಂದರೆ, ಇವತ್ತು ಬೆಳಿಗ್ಗೆ ಸಾಕಷ್ಟು ರಾದ್ಧಾಂತವಾಯಿತು, ನಮ್ಮಲ್ಲಿ ಎಲ್ಲರೂ ಸದನದಿಂದ expel ಆಗಿ ಹೊರಗೆ ಹೋದವರಲ್ಲಿ, ನಾನೊಬ್ಬನೇ ಒಳಗೆ ಇದ್ದೆನು, ನಿಮಗೂ ಗೊತ್ತಿದೆ, ಮಾನ್ಯ ಸಭಾಧ್ಯಕ್ಷರು ನಿಲುವಳಿ ಸೂಚನೆಗೆ ಅಲೋ ಮಾಡಿಲ್ಲವೆಂದು Proceedings stop ಮಾಡಿದ್ದರು, ಅಂದಮೇಲೆ ನಿಲುವಳಿ ಸೂಚನೆಯನ್ನು ಮೂವ್ ಮಾಡಿಧವರು ಯಾರು? Principle question ಇಲ್ಲಿ arise ಆಗುತ್ತದೆ, ಈ ಕಡೆಯವರಾ ಅಥವಾ ಆ ಕಡೆಯಿರುವವರಾ?

ಛೇರ್ಮನ್ :– ಇದನ್ನು ಯಾವುದೇ ರೂಪದಲ್ಲಿ ಚರ್ಚೆ ಮಾಡುವುದಕ್ಕೆ ಹಲವಾರು ದಾರಿಗಳು ಇವೆ. ಈಗ ಈ ವಿಷಯವನ್ನು 69ರ ನಿಯಮದಡಿಯಲ್ಲಿ ಅಲೋ ಮಾಡಿದ್ದಾರೆ, ತಾವು ಹೇಳಿದ್ದೀರಿ, ಮಾತನಾಡಬಹುದು, ಈಗ ಮಾನ್ಯ ಸದಸ್ಯರು ಏನು ಹೇಳಬೇಕೆಂದು ಇದ್ದಾರೋ, ಅದನ್ನು ಹೇಳಲಿ, ನಂತರ ನಾವು ಮಾತನಾಡಿ.

ಶ್ರೀ ಶಿವಾನಂದ ಎಸ್. ಪಾಟೀಲ್ :– ಮಾನ್ಯ ಛೇರ್ಮನ್‌ರವರೇ, Is he a party for a preliminary submission?

ಛೇರ್ಮನ್ :– ನಿಯಮ 69 ರ ಅಡಿಯಲ್ಲಿ ರೂಲಿಂಗ್ ಪಾರ್ಟಿಯವರು ಕೊಟ್ಟಂತಹ ಅನೇಕ ಉದಾಹರಣೆಗಳನ್ನು ನಾನು ಕೇಳಿದ್ದೇನೆ, ಅದರಲ್ಲಿ ನಾನೂ ಭಾಗವಹಿಸಿದ್ದೇನೆ.

Sri. Shivanada S. Patil :- Since you being a ruling party Member, how can you prevent Adjournment Motion?

ಶ್ರೀ ಜಗದೀಶ್ ಶೆಟ್ಟರ್ :– ಮಾನ್ಯ ಛೇರ್ಮನ್‌ರವರೇ, ತಾವು ಹೊಸ ಸಂಪ್ರದಾಯಗಳನ್ನು ಹಾಕುತ್ತಿದ್ದೀರಿ, ಇವತ್ತು ಮಾನ್ಯ ಮುಖ್ಯಮಂತ್ರಿಯವರ ಪರವಾಗಿ, ಮಾನ್ಯ ಮಂತ್ರಿಯವರ ಪರವಾಗಿ ಮತ್ತೆ ರೂಲಿಂಗ್ ಪಾರ್ಟಿ ಸದಸ್ಯರುಗಳ ಪರವಾಗಿ ಉತ್ತರವನ್ನು ಕೊಡುವಂಥಾದ್ದು ನಡೆಯುತ್ತಿದೆ, ಮಾನ್ಯ ಮಂತ್ರಿಗಳಿಗೆ, ಉತ್ತರವನ್ನು ಹೇಳುವ ಕೆಪ್ಯಾಸಿಟಿ ಇಲ್ಲವೋ? ಇಲ್ಲಿ ಇದು ಸರಿಯಾಗುವುದಿಲ್ಲ.

ಗೊಂದಲ

ಶ್ರೀ ಹೆಚ್.ಎಂ. ರೇವಣ್ಣ :– ಮಾನ್ಯ ಛೇರ್ಮನ್‌ರವರೇ, ರೂಲಿಂಗ್ ಪಾರ್ಟಿ ಸದಸ್ಯರು ಮಾತನಾಡಬಾರದು ಎಂದು ಎಲ್ಲಿದೆ?

ಶ್ರೀ ಆರಗಜ್ಞಾನೇಂದ್ರ :- ಮಾನ್ಯ ಛೇರ್ಮನ್‌ವರೇ, ಈ ಸಭೆಯೇ ಒಂದು ರೀತಿಯ ಗೊಂದಲವಾಗಿದೆ, ಈಗ ಮತ್ತೆ ಮತ್ತೆ ಗೊಂದಲವಾಗುವುದಕ್ಕೆ ಅವಕಾಶವನ್ನು ಮಾಡಿಕೊಡುತ್ತಿದ್ದೀರಿ, ಈ ರೀತಿ ಮಾತನಾಡುವುದಕ್ಕೆ ನಿಯಮಾವಳಿಯಲ್ಲಿ ಅವಕಾಶ ಇದೆಯೇ? ಈಗ ನಾವು ನಿಯಮಾವಳಿಯ ಅಡಿಯಲ್ಲಿ ಏನು ನೋಟಿಸ್ ಕೊಟ್ಟಿದ್ದೇವೆ ಅದರಲ್ಲಿ ಅವಕಾಶವಿದೆಯೆ? ಅದನ್ನು ನೋಡಿ, ತಾವು ಅವಕಾಶವನ್ನು ಕೊಡಿ, ರೂಲಿಂಗ್ ಕೊಡಿ, ಆಗಲಿ, ನಾಳೆ ದಿವಸ ಏನಾದರೂ ಇಂತಹ ಸಂದರ್ಭ ಬಂದರೆ ನಾವು ಕೇಳುವುದಕ್ಕೆ ಆಗುತ್ತದೆ.

ಶ್ರೀ ಸಿ.ಆರ್. ಸಗೀರ್ ಅಹಮದ್ :- ಮಾನ್ಯ ಛೇರ್ಮನ್‌ರವರೇ, ಈಗ ನಿಯಮ 69ರ ಅಡಿಯಲ್ಲಿ ಇಲ್ಲಿಯವರೆಗೆ ಚರ್ಚೆ ನಡೆದಿರುವಂಥಾದ್ದು ಬರ ಪರಿಹಾರದ ಬಗ್ಗೆಯೂ ಇಲ್ಲಿ ಚರ್ಚೆ ನಡೆದಿರುವಂತಹ ಸಂದರ್ಭಗಳಲ್ಲೂ, ನಮ್ಮ ಕ್ಷೇತ್ರಗಳಲ್ಲೂ ಬರದ ಬಗ್ಗೆ ಮಾತನಾಡುವುದಕ್ಕೆ, ತಾವು ಅವಕಾಶವನ್ನು ಒದಗಿಸಿಕೊಟ್ಟಿದ್ದೀರಿ, ಈಗ ಈ ವಿಷಯವೂ ನಿಯಮ 69ರ ಅಡಿಯಲ್ಲಿ ಪ್ರಿಲಿಮಿನರಿ ಸಬ್‌ಮಿಷನ್ ಎಂದು ತಾವೇ ಹೇಳಿದ್ದೀರಿ, ಅದಕ್ಕೆ ಅನುಮತಿಯನ್ನು ಪ್ರಿಲಿಮಿನರಿ ಸಬ್‌ಮಿಷನ್ ಎಂದು ಹೇಳಿದ್ದೀರಿ, ಇನ್ನು ಯಾವ ನಿಯಮದಡಿಯಲ್ಲಿ ಚರ್ಚೆ ಮಾಡಬೇಕೆಂಬ ಬಗ್ಗೆ ತಾವು ಅನುಮತಿಯನ್ನು ಕೊಡಬೇಕು, ಅದಕ್ಕೆ ಆ ಸದಸ್ಯರಿಗೆ ಹಕ್ಕು ಇಲ್ಲವೆಂದು ಇದ್ದರೆ ತಾವು ಹೇಳಿ; ಅವರೇ ಹೀಗೆ ಆಗಬೇಕೆಂದು ಹೆಳಿದರೆ ಹೇಗೆ ಆಗುತ್ತದೆ?

ಛೇರ್ಮನ್ :- ಈಗ ನಾನು ಅಧ್ಯಕ್ಷರ ಆದೇಶದ ಮೇರೆಗೆ ವಿಷಯ ಏನಿದೆ, ಎಂಬುದನ್ನು ಓದುತ್ತೇನೆ, ನಿಯಮ 69ರ ಅಡಿಯಲ್ಲಿ ಚರ್ಚೆಗೆ ಅನುಮತಿಯನ್ನು ನೀಡಿದೆ, ಅವರು ಹೇಳಿದ್ದನ್ನು ತಾವು ಕೇಳಿದಿರೋ ಇಲ್ಲವೋ ಗೊತ್ತಿಲ್ಲ ಈ ರೀತಿ ಅನುಮತಿಯನ್ನು ನೀಡಿರುವಂತಹ ಸಂದರ್ಭಗಳಲ್ಲಿ ಸದನದ ಎಲ್ಲಾ ಸದಸ್ಯರುಗಳು ಚರ್ಚೆಯಲ್ಲಿ ಭಾಗವಹಿಸಿರುವಂತಹ ನಿದರ್ಶನಗಳು ಇವೆ.

2.50 ಪಿ.ಎಂ.

ಶ್ರೀ ಶಿವಾನಂದ ಎಸ್. ಪಾಟೀಲ್ :- ಅದಕ್ಕೆ ನಾವು ಹೇಳುತ್ತಿದ್ದೇವೆ, ಚೇರ್‌ನಲ್ಲಿದ್ದವರು ತಾವೂ ಕೂಡ ಅನೌನ್ಸ್ ಮಾಡಲಿಲ್ಲ.

ಮಾನ್ಯ ಸದಸ್ಯರು :- ಮಾನ್ಯ ಸಭಾಧ್ಯಕ್ಷರು ಆಗಲೇ ಹೇಳಿದ್ದಾರೆ.

ಶ್ರೀ ಎಸ್. ಪಿ. ಮುದ್ದಹನುಮೇಗೌಡ :- ನಾನು ವಿಷಯದ ಗಾಂಭೀರ್ಯತೆಯನ್ನು ಅರ್ಥಮಾಡಿಕೊಂಡು ಮಾನ್ಯ ಸಭಾಧ್ಯಕ್ಷರಿಗೆ ಈ ಚರ್ಚೆಯಲ್ಲಿ ಭಾಗವಹಿಸಲು ನನಗೂ ಅವಕಾಶ ಮಾಡಿಕೊಡಿ ಎಂದು ಒಂದು ಮನವಿಯನ್ನು ಕಳುಹಿಸಿಕೊಟ್ಟೆ; ನಾನು ಸ್ಪಷ್ಟವಾಗಿ ಹೇಳುವುದಕ್ಕೆ ಹೊರಟೆ, ಅಷ್ಟು ಹೊತ್ತಿಗೆ ನನಗೆ ಅವಕಾಶ ಮಾಡಿಕೊಡುವುದನ್ನು ಮಾನ್ಯ ಸದಸ್ಯರು ವಿರೋಧ ಮಾಡಿದರು.

ಛೇರ್ಮನ್ :- ಅವರ ಇಚ್ಛೆ ಇಷ್ಟೆ, ತಾವು ಏನೆ ಹೇಳಿದರೂ ಮಂತ್ರಿಗಳು ಹೇಳುವ ಉತ್ತರವನ್ನು ನಿರೀಕ್ಷೆ ಮಾಡುವುದಿಲ್ಲ, ಅದನ್ನು ಬಿಟ್ಟು ಸಮರ್ಥನೆ ಮಾಡುವಂತಹ ವಿಚಾರವನ್ನು ಹೇಳಬಹುದು.

ಶ್ರೀ ಎಸ್.ಪಿ. ಮುದ್ದಹನುಮೇಗೌಡ :- ನಾವೆಲ್ಲಾ ಕಾಮನ್‌ಸೆನ್ಸ್ ಇಟ್ಟುಕೊಂಡು ಇಲ್ಲಿ ಸದಸ್ಯರಾಗಿ ಬಂದಿದ್ದೇವೆ ನಮಗೆ ನಮ್ಮ ಮಿತಿ ಗೊತ್ತಿದೆ, ನಮ್ಮ ಜವಾಬ್ದಾರಿ ಗೊತ್ತಿದೆ, ನಾವು ಅಷ್ಟೊಂದು ಬೇಜವಾಬ್ದಾರಿಯಿಂದ ಕುಳಿತುಕೊಂಡು, ನಮ್ಮ ಶಾಸಕರ, ಸದಸ್ಯತ್ವವನ್ನು ನಡೆಸುವುದಕ್ಕೆ ನಾವು ಇಲ್ಲಿ ಬಂದಿಲ್ಲ. ಅತ್ಯಂತ ಜವಾಬ್ದಾರಿಯಿಂದ ನಡೆದುಕೊಳ್ಳುತ್ತಿದ್ದೇವೆ, ಈಗಲೂ ನಡೆದುಕೊಳ್ಳುತ್ತೇವೆ, ಮುಂದೆಯೂ ನಡೆದುಕೊಳ್ಳುತ್ತೇವೆ, I am not here to defend the

Government. As a Member, I have got every right to speak. I cannot understand, why my friends are trying to interfere. ನಾನು ಈ ಸದನದ ಒಬ್ಬ ಗೌರವಾನ್ವಿತ ಸದಸ್ಯನಾಗಿ ನನಗೆ ತಿಳಿದಿರುವ ಅಭಿಪ್ರಾಯವನ್ನು ನಿಯಮ 69ರ ಅಡಿಯಲ್ಲಿ ಯಾವುದೇ ಗಂಭೀರವಾದ ವಿಷಯ ಬಂದಂತಹ ಸಂದರ್ಭದಲ್ಲಿ ಅದನ್ನು ವ್ಯಕ್ತಪಡಿಸುವುದಕ್ಕೆ ನನಗೆ ಅಧಿಕಾರವಿದೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ :– ಮಾನ್ಯ ಅಧ್ಯಕ್ಷರೆ, ಈ ಸಮಸ್ಯೆ ಉದ್ಭವವಾದದ್ದು ಇಲ್ಲಿಯೂ ಅಲ್ಲ ಅಲ್ಲಿಯೂ ಅಲ್ಲ ನಿಯಮ 69 ರ ಅಡಿಯಲ್ಲಿ ಅಲೋ ಮಾಡಿದ್ದೀರಾ ಇಲ್ಲವೋ ಎಂಬುದನ್ನು ಅನೌನ್ಸ್ ಮಾಡಲಿಲ್ಲ, ಅಡ್ಜರ್ನ್‌ಮೆಂಟ್ ಮೋಷನ್ ಹೌದೋ ಅಲ್ಲವೋ ಅಥವಾ ನಿಯಮ 69 ಕನ್ವರ್ಟ್ ಮಾಡಿದ್ದರ ಬಗ್ಗೆ ಹೇಳಲಿಲ್ಲ. ಶ್ರೀ ಮುದ್ದಹನುಮೇಗೌಡರಿಗೆ ಅವಕಾಶ ಕೊಡಲಿಕ್ಕೆ ನನ್ನ ಅಭ್ಯಂತರವಿಲ್ಲ. ಅದನ್ನು ಪ್ರಕಟಣೆ ಮಾಡಿದ್ದರೆ ಇಲ್ಲಿ ಚರ್ಚೆ ನಡೆಯುತ್ತಿರಲಿಲ್ಲ. ಇಲ್ಲಿ ವಿರೋಧ ಮಾಡುವ ಪರಿಸ್ಥಿತಿ ಉದ್ಭವವಾಗುತ್ತಿರಲಿಲ್ಲ.

ಛೇರ್ಮನ್ :– ಮಾನ್ಯ ಅಧ್ಯಕ್ಷರ ಆದೇಶ ಈ ರೀತಿ ಇದೆಯೆಂದು ನಾನು ಆಗಲೇ ಹೇಳಿದ್ದೇನೆ. ನಾವು ಈಗಾಗಲೇ ಬಹಳಷ್ಟು ಮುಂದೆ ಬಂದಿದ್ದೇವೆ. ಮೂರ್‍ನಾಲ್ಕು ಜನರು ಚರ್ಚೆಯಲ್ಲಿ ಭಾಗವಹಿಸಿದ್ದೀರಿ ಇವರು ಮಾನ್ಯ ಅಧ್ಯಕ್ಷರ ಆದೇಶದ ಪ್ರಕಾರ ನಿಯಮ 69ರ ಅಡಿಯಲ್ಲಿ ಚರ್ಚೆ ಮಾಡುತ್ತಿದ್ದಾರೆಂಬ ಪ್ರಿಸಂಪ್ಷನ್ ಇದ್ದೇ ಇದೆ. ದಯವಿಟ್ಟು ಮತ್ತೆ ಹಿಂದಕ್ಕೆ ಹೋಗುವುದರ ಬದಲಾಗಿ, ಇದನ್ನೇ ಮುಂದುವರೆಸಿ, ಕಂಕ್ಲೂಡ್ ಮಾಡುವುದಕ್ಕೆ ಪ್ರಯತ್ನ ಮಾಡೋಣ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ :– ಪ್ರಾರಂಭಿಕ ಹಂತದಲ್ಲಿಯೇ ನಾನು ಬಹಳ ಸ್ಪಷ್ಟವಾಗಿ ಹೇಳುವುದಕ್ಕೆ ಹೊರಟೆ, ಸರ್ಕಾರದ ಪರವಾಗಿ ಉತ್ತರ ಕೊಡುವುದು ನನ್ನ ಕೆಲಸವಲ್ಲ, ಹಾಗೆಯೇ ಮಾನ್ಯ ವಿರೋಧ ಪಕ್ಷದ ಮಾನ್ಯ ಗೌರವಾನ್ವಿತ ಸದಸ್ಯರು ಮಾತನಾಡಿದ್ದಾರೆ ಅವರ ಭಾಷಣವನ್ನು ಟೀಕೆ ಮಾಡುವ ಕೆಲಸಕ್ಕೆ ನಾನು ಹೋಗುವುದಿಲ್ಲ, ಸಾವು ನೋವು ಅತ್ಯಂತ ಸೂಕ್ಷ್ಮವಾದ ವಿಷಯ. ಒಬ್ಬ ಹಾರ್ಡ್‌ಕೋರ್ ಕ್ರಿಮಿನಲ್ ಸತ್ತರೂ ಕೂಡ ಆಯ್ಯೋ ಪಾಪ ಎನ್ನುವ ಸಂಸ್ಕೃತಿಯನ್ನು ಇಟ್ಟುಕೊಂಡಿರುವ ಜನ ನಾವು. ವಿರೋಧ ಪಕ್ಷವನ್ನು ಟೀಕೆ ಮಾಡಬೇಕೆಂದು ದೃಷ್ಟಿಯನ್ನಿಟ್ಟುಕೊಂಡು ಇಲ್ಲಿ ಮಾತನಾಡಲು ನಾನು ನಿಂತಿಲ್ಲ. ಆದರೆ ಅತ್ಯಂತ ಗೌರವಾನ್ವಿತ ಈ ಸದನದ ಸದಸ್ಯರುಗಳಾಗಿ ನಮ್ಮ ಜವಾಬ್ದಾರಿಗಳೇನು ಎನ್ನುವುದರ ಬಗ್ಗೆ ಕೆಲವು ವಿಷಯಗಳನ್ನು ಸದನದ ವಿವೇಚನೆಗೆ ಬಿಡಬೇಕೆನ್ನುವ ದೃಷ್ಟಿಯಿಂದ ಅಷ್ಟೇ ನಾನು ಮಾತನಾಡಲು ನಿಂತಿದ್ದೇನೆ. ನಾವು ಇಲ್ಲಿ ಕೆಲವು ಕಾನೂನುಗಳನ್ನು ಮಾಡಿದ್ದೇವೆ, ಕೆಲವು ಗೌರವಾನ್ವಿತ ಸದಸ್ಯರು ವಕೀಲರು ಇದ್ದಾರೆ, ಆದುದರಿಂದ ನಾವು ಆ ವಿಷಯವನ್ನು ಪುನರ್‌ಪರಿಶೀಲನೆ ಮಾಡುವ ಅವಶ್ಯಕತೆ ಇರಬಹುದು ಎನ್ನುವ ಹಿನ್ನಲೆಯಲ್ಲಿ ಒಂದೆರಡು ವಿಚಾರಗಳನ್ನು ಈ ವಿಷಯಕ್ಕೆ ಸಂಬಂಧಿಸಿದಂತೆ ಹೇಳಲು ಹೊರಟೆ. section 309 of IPC; I will just have a plain reading of section 309 'whoever attempts to commit suicide and does any act towards the commission of such affair, shall be punished with simple imprisonment for a term, which may extend to one year or with fine or both. ಈ ದೇಶದಲ್ಲಿ ಎಂತಹ ಕಾನೂನು ಮಾಡಿದ್ದೇವೆಂದರೆ, ಯರಾದರೂ ಒಬ್ಬ ವ್ಯಕ್ತಿ ತಾನು ಸಾಯಬೇಕೆನ್ನುವ ಪ್ರಯತ್ನವನ್ನು ಮಾಡಿದಾಗ ಆ ಪ್ರಯತ್ನದಲ್ಲಿ ಆತ ವಿಫಲನಾದರೆ, ತಪ್ಪು ಆತನಿಗೆ ಶಿಕ್ಷೆ ಆದರೆ ಸಫಲನಾದರೆ ಅದು ಇಲ್ಲ; This provision will not apply, if he succeeds in committing suicide.

If he fails to commit suicide, that becomes an offence U/S 309. We are going to prosecute him and he is liable for punishment upto one year. ಇದು ನಮ್ಮ ದೇಶದ ಕಾನೂನು, ಇದರಲ್ಲಿ ಯಾವ ಕಾನೂನು ಅಡಿಯಲ್ಲಿ ಆತ ಆತ್ಮಹತ್ಯೆ ಮಾಡಿಕೊಳ್ಳಲು ಅಧಿಕಾರವಿದೆ ಎನ್ನುವುದನ್ನು ಹೇಳಲಿಲ್ಲ, Right to die was once a subject matter before the supreme court, the validity of Section 309 was also questioned before the Supreme Court. Ultimately, the supreme Court came to the conclusion that, the provision of Section 309 is valid. A person who tries to commit an offence is liable to be punished. He is liable for prosecution. ಆದುದರಿಂದ ನಮ್ಮ ದೇಶದಲ್ಲಿ ಮನುಷ್ಯನಿಗೆ ಸಾಯುವುದಕ್ಕೆ ಅಧಿಕಾರವಿಲ್ಲ, ಇದು ನಾವೇ ಮಾಡಿರುವ ಕಾನೂನು, ಇದೊಂದು ಕಡೆ. ನಾನು ಪತ್ರಿಕೆ ಓದಿ ಅಷ್ಟೇ ಮಾಹಿತಿ ತಿಳಿದುಕೊಂಡಿರುವುದು ಎಲ್ಲಿ ಏನು ಎನ್ನುವುದು ಗೊತ್ತಿಲ್ಲ ಕೊಪ್ಪಳ ತಾಲ್ಲೂಕಿನಲ್ಲಿ 6 ಜನರು ಸತ್ತಿದ್ದಾರೆ, I will not go to the details of this incident ಆದರೆ ನಾನು ಒಂದು ವಿಷಯವನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ, ಸತ್ತವರು ಯಾರು? ಏತಕ್ಕೆ ಸತ್ತರು, ಏನು ಕಾರಣದಿಂದ ಸತ್ತರು, That is once again a subject matter for discussion. We have to take all those points into consideration. ಒಂದೇ ಸಲ ಒಂದು ಕುಟುಂಬದ 6 ಜನ ಸತ್ತರೆಂದ ತಕ್ಷಣ ಅದರಲ್ಲಿ ಸರ್ಕಾರದ ವೈಫಲ್ಯವನ್ನು, ಅಥವಾ ಇನ್ನೊಬ್ಬರ ವೈಫಲ್ಯವನ್ನು ಅಥವಾ ಸ್ಥಳೀಯ ಅಧಿಕಾರಿಗಳ ವೈಫಲ್ಯವನ್ನು ಕಂಡುಹಿಡಿಯುವುದಕ್ಕೆ ಪ್ರಯತ್ನ ಮಾಡುವುದಕ್ಕಿಂತ ಮುಂಚೆ It is our bounded duty. It is also our responsibility to find out exactly the reasons for committing such suicide. We have to study the human psychology. ಈ ಸೂಸೈಡ್‌ಗೆ ಕಾರಣಗಳೇನೇನು ಇವೆ; ವಿಚಿತ್ರವಾದ ಸೂಸೈಡ್‌ಗಳು ನಡೆಯುತ್ತಿವೆ, ಇವತ್ತು ಇವರು ರೈತರೇ ಅಲ್ಲವೇ ಎನ್ನುವ ಪ್ರಶ್ನೆಗೆ ನಾನು ಹೋಗುವುದಿಲ್ಲ ಇನ್‌ಸಿಡೆಂಟ್ ಅದನ್ನು ಓದತಕ್ಕಂತಹ ಸಂದರ್ಭದಲ್ಲಿ The head of family. who committed a suicide. he was running a Hotel. I think, his aim was not committing sucicide. The person, who is heading the family, six members of his family have committee suicide, that man, the head of the family is running a Hotel. But, still we are arguing here, that the family of farmer's committed suicide and Government has utterly failed to come to the rescue of those family. ಇದು ಬೇರೆ ವಿಷಯ, ನಾನು ಆ ಪದವನ್ನು ಉಪಯೋಗಿಸಲು ತಯಾರಾಗಿಲ್ಲ. ನಾನು ಮೊದಲೇ ಹೇಳಿದಂತೆ ಸಾವು ಅತ್ಯಂತ ಸೂಕ್ಷ್ಮವಾದಂಥ ವಿಷಯ, ಯಾವುದೇ ಕುಟುಂಬದ ವ್ಯಕ್ತಿ ಸತ್ತಂತಹ ಸಂದರ್ಭದಲ್ಲಿ ಆ ಕುಟುಂಬದ ಪರವಾಗಿ ನಮ್ಮ ಭಾವನೆಗಳನ್ನು ವ್ಯಕ್ತಪಡಿಸತಕ್ಕಂತಹದ್ದು ನಮ್ಮ ಧರ್ಮ ಅದರ ಪ್ರಕಾರ ನಾವು ಮಾಡುತ್ತೇವೆ. ಆದರೆ ನಾನು ಏನು ಹೇಳುತ್ತೇನೆಂದರೆ, ಒಂದು ಹೋಟೆಲ್ ನಡೆಸುವ ಕುಟುಂಬದ ಸದಸ್ಯರು 6 ಜನರಲ್ಲಿ ನಾಲ್ಕೈದು ಜನರು ಕೂಡ 25-26 ವರ್ಷ ವಯಸ್ಸಿನವರು Youths at ageg 25-26, they also committeed suicide. only one lady aged about 55 years, she has joined those team.. 25--26

ವರ್ಷಗಳ ಯುವಕರು ಒಂದು ಕುಟುಂಬದವರು ಸಾಮೂಹಿಕವಾಗಿ ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ಏನು ಕಾರಣ? ಇಂತಹ ಘಟನೆಯ ಹಿಂದೆ ಇರತಕ್ಕಂತಹ ಸಾಮಾಜಿಕ ದೃಷ್ಟಿ ಹಾಗೂ ಕಾರಣಗಳೇನಿವೆ ಅದರ ಬಗ್ಗೆ ಅಧ್ಯಯನ ಮಾಡಿ ಮುಂದೆ ಅಂತಹ ಘಟನೆಗಳನ್ನು ತಡೆಹಿಡಿಯುವುದಕ್ಕೆ ಸರ್ಕಾರ ತೆಗೆದುಕೊಳ್ಳಬೇಕಾದ ಕ್ರಮಗಳೇನು? ಆ ಬಗ್ಗೆ ಸಲಹೆ ಕೊಡತಕ್ಕಂಥ ಜವಾಬ್ದಾರಿ ಇವತ್ತು ಈ ಸದನಕ್ಕೆ ಇದೆ. ಈ ಪ್ರಾಣ ಹಾಗೂ ಆಸ್ತಿಯ ರಕ್ಷಣೆಯ ಜವಾಬ್ದಾರಿ ಸರ್ಕಾರದ ಮುಂದ್ದೆನ್ನುವುದನ್ನು ನಾನು ಒಪ್ಪಿಕೊಳ್ಳುತ್ತೇನೆ; ಪ್ರತಿಯೊಬ್ಬರಿಗೂ ಕೂಡ ಈ ಪ್ರಪಂಚದಲ್ಲಿ ಬದುಕುವ ಹಕ್ಕಿದೆ, ಅದರ ರಕ್ಷಣೆಯು ಸರ್ಕಾರದ ಜವಾಬ್ದಾರಿ ಆದರೆ ಯಾವ ಸಂದರ್ಭದಲ್ಲಿ ಸರ್ಕಾರ ಆ ಜವಾಬ್ದಾರಿಯನ್ನು ಹೊರಬೇಕಾಗುತ್ತದೆ, ಆ ಜವಾಬ್ದಾರಿಯನ್ನು ಹೆಚ್ಚು ಪರಿಣಾಮಕಾರಿಯಾಗಿ ಜಾವಾಬ್ದಾರಿಯುತವಾಗಿ ನಿರ್ವಹಿಸಬೇಕಾದರೆ ಸಾರ್ವಜನಿಕರ ಸಹಕಾರ ಎಷ್ಟರ ಮಟ್ಟಿಗೆ ಬೇಕಾಗುತ್ತದೆ ಎನ್ನುವ ದೃಷ್ಟಿಯಿಂದ ನಾವು ನೋಡಬೇಕಾಗುತ್ತದೆ. ರೈತರು ದೇಶದ ಎಲ್ಲಾ ಕಡೆ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆನ್ನುವುದನ್ನು ನಾವು ಪತ್ರಿಕೆಗಳಲ್ಲಿ ಓದುತ್ತಿದ್ದೇವೆ, ಆದರೆ, ಯಾವ ಕಾರಣದಿಂದ ಆತ್ಮಹತ್ಯೆಯಾಯಿತೆನ್ನುವುದರ ಬಗ್ಗೆ ವಿವರಣೆ ಪಡೆಯುವುದು, ತಿಳಿದುಕೊಳ್ಳುವ ಅಧಿಕಾರವೂ ಕೂಡ ನಮಗಿದೆ ಅದನ್ನು ತಿಳಿದುಕೊಳ್ಳತಕ್ಕಂಥ ಕೆಲಸವನ್ನು ನಾವು ಮಾಡಲೇ ಇಲ್ಲ ಒಂದು ಕುಟುಂಬದವರು ಸತ್ತರೆಂದರೆ ಹೋಗಿ ಒಂದು ಲಕ್ಷ ರೂಪಾಯಿಗಳನ್ನು ಕೊಡುವುದು, ಫೋಟೊ ಹಾಕಿಸಿಕೊಳ್ಳುವುದು, ನಾವು ಕುಟುಂಬಕ್ಕೆ ಪರಿಹಾರ ಕೊಟ್ಟಿದ್ದೇವೆ ಎಂದು ಹೇಳಿಕೊಳ್ಳುವ ಕೆಲಸದಲ್ಲೇ ನಾವು ತಲ್ಲಿನರಾಗಿದ್ದೇವೆ. ಆದರೆ ನಿಜವಾದಂಥ ಕಾರಣವೇನು? ಯಾವ ಕಾರಣಕ್ಕೋಸ್ಕರ ಆ ಕುಟುಂಬ ಆತ್ಮಹತ್ಯೆಯ ಹಾದಿ ಹಿಡಿದಿದೆ, ಈ ಕುಟುಂಬವನ್ನು ನಾವು ಯಾವ ರೀತಿ ರಕ್ಷಣೆ ಮಾಡಬಹುದಾಗಿತ್ತು ಎನ್ನುವ ದಿಸೆಯಲ್ಲಿ ಚಿಂತನೆಯನ್ನು ಮಾಡತಕ್ಕಂಥ ಕೆಲಸವನ್ನು ನಾವು ಮಾಡಬೇಕಾಗಿದೆ ಎನ್ನುವ ಮಾತನ್ನು ನಾನು ಹೇಳಲು ತಯಾರಿದ್ದೇನೆ. ನಾನು ಒಂದು ಪ್ರಶ್ನೆಯನ್ನು ಈ ಸದನದ ವಿವೇಚನೆಗೆ ಬಿಡುತ್ತೇನೆ. ಒಂದು ಬಡ ಕುಟುಂಬದವರು ಚೀಟಿ ವ್ಯವಹಾರ ಮಾಡುತ್ತಿರುತ್ತಾರೆ ಎಂದು ಇಟ್ಟುಕೊಳ್ಳೋಣ. Unfortunately. they are depending upon that business to eke-up their livelihood. ತಮ್ಮ ಜೀವನದ ನಿರ್ವಹಣೆಗೆ ಅವರು ಆ ವ್ಯವಹಾರವನ್ನೇ ನಂಬಿಕೊಂಡಿರುತ್ತಾರೆ. ಆದರೆ ಆ ವ್ಯವಹಾರದಲ್ಲಿ ಅವರು ವಿಫಲರಾಗುತ್ತಾರೆ. They commit sucide. what is what the Government is doing for that? ಸರ್ಕಾರ ಅವರನ್ನು ಯಾವ ರೀತಿ ರಕ್ಷಣೆ ಮಾಡಲು ಆಗುತ್ತದೆ? ಒಬ್ಬ ಸರ್ಕಾರಿ ನೌಕರ ತಾನು ಮಾಡಿಕೊಂಡಿರತಕ್ಕಂಥ ಸಾಲಕ್ಕೆ ಆತ್ಮಹತ್ಯೆ ಮಾಡಿಕೊಂಡು ಬಿಡುತ್ತಾನೆ. ಅವನನ್ನು ನಾವು ಯಾವ ರೀತಿ ರಕ್ಷಣೆ ಮಾಡುತ್ತಿದ್ದೇವೆ? ಒಬ್ಬ ಬಡ ಕೂಲಿ ಕಾರ್ಮಿಕ, He is not agriculturant, a poor labourer, he commites a suicide ಯಾವುದೋ ದೃಷ್ಟಿಯಿಂದ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. what is that we are doing for that? ಆದ್ದರಿಂದ, ಇವತ್ತು ನಾವು ಎಂದ ತಕ್ಷಣ ನಾವು ನೇರವಾಗಿ ಯಾವುದೋ ಒಂದು ಕಾರಣವನ್ನು ಅದಕ್ಕೆ ಸೇರಿಸಿ, ಯಾವುದಾದರೊಂದು ದೃಷ್ಟಿಯಲ್ಲಿ ಯಾರನ್ನಾದರೂ ಇಕ್ಕಟ್ಟಿಗೆ ಸಿಕ್ಕಿಸತಕ್ಕಂಥ ಪ್ರಯತ್ನವನ್ನು ಮಾಡುವ ಮುಂಚೆ, ಅದು ಯಾವ ಕಾರಣಕ್ಕಾಗಿ ಆಗಿದೆ ಎಂದು ದಯಮಾಡಿ ಯೋಚನೆ ಮಾಡಬೇಕು ಎಂದು ನಾನು ಈ ಸದನವನ್ನು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇದು ನಿರಂತರವಾಗಿ ದೇಶದಾದ್ಯಂತ ನಡೆಯುತ್ತಿರತಕ್ಕಂಥಾದ್ದು, ನಾವು ಯಾರೂ ಕೂಡ ನಿರೀಕ್ಷೆ

ಮಾಡಲಾರದಂಥಾದ್ದು. We will not invite such incidents. We will not accept such incidents, but still such incidents do happening in all over the country.. ಆದ್ದರಿಂದ, ನಾನು ಇಲ್ಲಿ ಏನು ಹೇಳಲಿಕ್ಕೆ ಹೊರಟಿದ್ದೇನೆ ಎಂದರೆ, ಇಂಥ ಪ್ರಕರಣಗಳು ನಡೆದಾಗ ನಾವು ತಕ್ಷಣ ಹೋಗಿ ಪರಿಹಾರ ಕೊಡತಕ್ಕಂಥ ಒಂದು ಸೂತ್ರದಿಂದ ನಾವು ಪ್ರಾಣ ರಕ್ಷಣೆಯ ಕೆಲಸವನ್ನು ಪ್ರಾಮಾಣಿಕವಾಗಿ ಮಾಡುತ್ತಿದ್ದೇವೆ ಎಂದು ಹೇಳಿ ಕೊಳ್ಳುವುದಕ್ಕೆ ಮುಂಚೆ ನಾವೆಲ್ಲರೂ, ಇಂಥ ಪ್ರಕರಣಗಳ ಹಿನ್ನೆಲೆಯೇನು, ಏಕೆ ಇಂಥ ಪ್ರಕರಣಗಳು ನಡೆಯುತ್ತಿವೆ ಎನ್ನುವುದರ ಬಗ್ಗೆ ಕೂಲಂಕುಷವಾಗಿ ಸ್ಟಡಿ ಮಾಡತಕ್ಕಂಥಾದ್ದು ಬಹಳ ಅತ್ಯಾವಶ್ಯಕವಾಗಿದೆ. ಆತ್ಮಹತ್ಯೆಯನ್ನು ಬೈಫರ್ಕೇಷನ್ ಮಾಡತಕ್ಕಂಥಾದು ಆಗುತ್ತಿದೆ. Classification of sucide. Once again we are doing that. We are only coming to the aid of sucide of a farmer. But whereas, equally other persons are also placed in the same position, but still we are not thinking those people. ಇವತ್ತು ಈ ದೇಶದಲ್ಲಿ ಅನೇಕರು ಜೀವನ ಮಾಡಲಾಗದಂಥ ಪರಿಸ್ಥಿತಿಯಲ್ಲಿ ಇರತಕ್ಕಂಥ ಸಂದರ್ಭದಲ್ಲಿ ಅವರು ಆತ್ಮಹತ್ಯೆ ಮಾಡಿಕೊಂಡರೆ, ಅವರ ರಕ್ಷಣೆಗೆ ನಾವು ಚಿಂತನೆ ಮಾಡುತ್ತಿಲ್ಲ, ಅವರ ಬಗ್ಗೆ ನಾವು ಮಾತನಾಡುತ್ತಿಲ್ಲ. ಇನ್ನೊಂದು ವಿಷಯ ಇಲ್ಲಿ ಪ್ರಸ್ತಾಪವಾಯಿತು, ಸುಮಾರು 50–60 ಜನರು ಒಟ್ಟಿಗೇ ಸಾಮೂಹಿಕ ಆತ್ಮಹತ್ಯೆಯ ಬೆದರಿಕೆ ಹಾಕುತ್ತಿದ್ದಾರೆ ಎಂದು ಮಾನ್ಯ ಗೌರವಾನ್ವಿತ ಸದಸ್ಯರೊಬ್ಬರು ಹೇಳಿದರು. ಇದಕ್ಕೆ ಸರ್ಕಾರ ಏನು ಮಾಡಬಹುದು? I should call that it is a sort of blackmai with all responsiblitiy I will use that word ಏಕೆಂದರೆ, ನಾನು ಆಗಲೇ ಹೇಳಿದ ಹಾಗೆ, ಮನುಷ್ಯನಿಗೆ ಸಾಯುವುದಕ್ಕೆ ಅಧಿಕಾರವಿಲ್ಲ, ಸಾಯುವುದಕ್ಕೆ ಹಕ್ಕಿಲ್ಲ. It is an offence u/s 309. But still ಆದರೂ ಯಾವುದೋ ಒಂದು ಕಾರಣಕ್ಕೆ ಸರ್ಕಾರವನ್ನು ಇಕ್ಕಟ್ಟಿಗೆ ಸಿಕ್ಕಿಸಬೇಕು ಎಂದೋ ಅಥವಾ ಒಂದು ಸಮಾಜವನ್ನು ದೃಷ್ಟಿಯಲ್ಲಿಟ್ಟುಕೊಂಡು ಆತ್ಮಹತ್ಯೆಯ ಬೆದರಿಕೆ ಹಾಕತಕ್ಕಂಥ ಪ್ರಕರಣಗಳಿಗೆ ಇತಿಶ್ರೀ ಹಾಡತಕ್ಕಂಥ ಜವಾಬ್ದಾರಿ ಈ ಸದನದ ಮೇಲಿದೆ. ಅದು ಈ ಸದನದ ಕರ್ತವ್ಯವಾಗಿದೆ. ಇದಕ್ಕೆ ಯಾವುದಾದರೊಂದು ಅಂತಿಮವಾದಂಥ ರೂಪವನ್ನು, ತೀರ್ಮಾನವನ್ನು ಈ ಸದನವು ತೆಗೆದುಕೊಳ್ಳಬೇಕು ಎಂದು ಪ್ರಾರ್ಥನೆ ಮಾಡಿ, ಮಾತನಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

+ ಶ್ರೀ ಕರಡಿ ಸಂಗಣ್ಣ ಅಮರಪ್ಪ (ಕೊಪ್ಪಳ) : ಸನ್ಮಾನ್ಯ ಅಧ್ಯಕ್ಷರೇ, ನಮ್ಮ ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲ್ಲೂಕಿನಲ್ಲಿ ನಡೆದಿರತಕ್ಕಂಥ ಒಂದೇ ಕುಟುಂಬದ ಆರು ಜನರ, ಸಾಮೂಹಿಕ ಆತ್ಮಹತ್ಯೆಯ ಪ್ರಕರಣ ನಮ್ಮೆಲ್ಲರ ಹೃದಯವನ್ನು ಕಲಕತಕ್ಕಂಥ ಪ್ರಕರಣ ಎಂದು ನಾನು ಭಾವಿಸಿದ್ದೇನೆ. ಅದನ್ನು ನಾನು ನಿನ್ನೆ ಕೂಡ ಶೂನ್ಯವೇಳೆಯಲ್ಲಿ ಅಧ್ಯಕ್ಷರ ಅನುಮತಿಯನ್ನು ಪಡೆದು ಸಂಕ್ಷಿಪ್ತವಾಗಿ ಸದನದ ಗಮನವನ್ನು ಸೆಳೆಯತಕ್ಕಂಥ ಕೆಲಸವನ್ನು ಮಾಡಿದ್ದೇನೆ. ಯಾವ ಸಂದರ್ಭದಲ್ಲಿ ರೈತ ಆತ್ಮಹತ್ಯೆಯನ್ನು ಮಾಡಿಕೊಳ್ಳುತ್ತಾನೆ, ಯಾವ ರೀತಿಯ ಸಂಕಷ್ಟದಲ್ಲಿದ್ದಾನೆ ಎನ್ನುವುದಕ್ಕೆ ಪೂರಕವಾಗಿ, ಹಿರಿಯರಾದಂಥ ಮಾನ್ಯ ಎಸ್.ಎಸ್. ಪಾಟೀಲರು, ಮಾನ್ಯ ವಿರೋಧ ಪಕ್ಷದ ನಾಯಕರಾದಂಥ ಶ್ರೀಮಾನ್ ಜಗದೀಶ್ ಶೆಟ್ಟರ್‌ರವರು ಹಿರಿಯರಾದಂಥ ಶ್ರೀ ಸಿಂಧ್ಯಾರವರು, ಶ್ರೀ ಶಿವಾನಂದ ಪಾಟೀಲರು ಮತ್ತು ಶ್ರೀ ಮುದ್ದಹನುಮೇಗೌಡರು ಬಹಳ ಸವಿಸ್ತಾರವಾಗಿ ಹೇಳಿ, ಆತ್ಮಹತ್ಯೆಯ ಬಗ್ಗೆ

ವಿವರಣೆಯನ್ನು ಸದನದ ಗಮನಕ್ಕೆ ತರತಕ್ಕಂಥ ಕೆಲಸವನ್ನು ಮಾಡಿದ್ದಾರೆ. ಈ ಪ್ರಕರಣದಲ್ಲಿ ಆ ಕುಟುಂಬದ ಸಮಸ್ಯೆಯಾದ ಈರಬಸಮ್ಮ ಎನ್ನುವವರು ತೀರಿಕೊಂಡ ನಂತರ, ಆ ಕುಟುಂಬದ ಸದಸ್ಯರು ಪ್ರಪ್ರಥಮವಾಗಿ ಮಾನಸಿಕವಾಗಿ ಆಘಾತವನ್ನು ಹೊಂದಿದರು ಎನ್ನುವುದು ಮೊದಲನೇ ಅಂಶ. ಎರಡನೆಯ ಅಂಶವೆಂದರೆ ಮಾನ್ಯ ಮುದ್ದಹನುಮೇಗೌಡರು ಹೇಳಿದ ಹಾಗೆ, ಈ ಆತ್ಮಹತ್ಯೆಯಲ್ಲಿ ಭಾಗಿಯಾದಂಥವರ ವಯಸ್ಸು ಬಹಳ ಕಡಿಮೆ ಇದೆ. ಅವರ ವಯಸ್ಸು 20,25,30,35 ವರ್ಷಗಳಾಗಿದೆ. ಈ ವಯಸ್ಸಿನಲ್ಲಿರತಕ್ಕಂಥವರು ಮಾನಸಿಕವಾಗಿ ಆತ್ಮಹತ್ಯೆಗೆ ತಯಾರಾಗತಕ್ಕಂಥ ಕೆಲಸಕ್ಕೆ ಹೋಗುವುದು ಬಹಳ ದುಸ್ತರವಾದುದು ಎನ್ನುವುದನ್ನು ಕೂಡ ನಾವು ನೋಡಬೇಕಾಗುತ್ತದೆ. ಈ ಹಿನ್ನೆಲೆಯನ್ನು ನೋಡಿದಾಗ ಮತ್ತು ಅಲ್ಲಿಯ ಬರದ ಬಗೆಗಿನ ವರದಿಗಳನ್ನು ನೋಡಿದಾಗ, ನಮ್ಮ ರಾಜ್ಯದ ಪ್ರಮುಖವಾದಂಥ ಪತ್ರಿಕೆಗಳಾದ ಪ್ರಜಾವಾಣಿ, ಕನ್ನಡ ಪ್ರಭ, ವಿಜಯ ಕರ್ನಾಟಕ, ಉದಯವಾಣಿ, ಸಂಯುಕ್ತ ಕರ್ನಾಟಕ ಪತ್ರಿಕೆಗಳು ಅದರ ಬಗ್ಗೆ ವಿಶ್ಲೇಷಣೆಯನ್ನು ಮಾಡಿದ್ದಾರೆ. ಮೊದಲನೇ ಹಂತದಲ್ಲಿ, ಈರಬಸಮ್ಮ ಬಹಳ ದಿವಸಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದಳು. ಆಕೆ ಮೂಲವ್ಯಾಧಿ ಮತ್ತು ಅಸ್ತಮಾ ರೋಗಗಳಿಂದ ಬಳಲುತ್ತಿದ್ದು, ಆಕೆಯ ಟ್ರೀಟ್‌ಮೆಂಟಿಗೆ ಅವರು ಬಹಳಷ್ಟು ಸಾಲವನ್ನು ಮಾಡಿದ್ದರು. ಆದರೆ ದುರ್ದೈವದಿಂದ ಆಕೆ ಮರಣವನ್ನು ಹೊಂದಿದಳು. ಆಕೆ ಮರಣ ಹೊಂದಿದ ನಂತರ ಇವರೆಲ್ಲಾ ಮಾನಸಿಕವಾಗಿ ಆಘಾತಕ್ಕೆ ಒಳಗಾಗಿ ಸಾವನ್ನಪ್ಪಿರಿದ್ದಾರೆ. ಎನ್ನುವ ವಿಚಾರವನ್ನು ಒಂದು ಕಡೆ ಇಟ್ಟುಕೊಂಡರೂ ಕೂಡ, ಬೇರೆಯವರು ಯಾರಾದರೂ ಸತ್ತರೆ, ಅವರ ಸಂಬಂಧಿಕರು ಆತ್ಮಹತ್ಯೆಯ ಪ್ರಯತ್ನಕ್ಕೆ ಹೋಗತಕ್ಕಂಥಾದ್ದು ಬಹಳ ಕಡಿಮೆ ಉದಾಹರಣೆಗೆ ಹೇಳುವುದಾದರೆ, ನಮ್ಮ ನಾಯಕರಾದ ಶ್ರೀಮಾನ್ ಶ್ರೀಮಾನ್ ಬೈರೇಗೌಡರು ತೀರಿಕೊಂಡರು. ಅವರು ತೀರಿಕೊಂಡ ತಕ್ಷಣ ನಾವ್ಯಾರೂ ಆತ್ಮಹತ್ಯೆಗೆ ಹೋಗತಕ್ಕಂಥ ಭಾವನೆಯನ್ನು, ಅಂಥ ಪ್ರಯತ್ನಕ್ಕೆ ಹೋಗತಕ್ಕಂಥಾದ್ದನ್ನು ಮಾಡಲಿಲ್ಲ. ಈ ವಾಸ್ತವಾಂಶವನ್ನು ಮತ್ತು ಹಿನ್ನೆಲೆಯನ್ನು ನಾವು ಗಮನಿಸಿದಾಗ, ಈ ಸಾಮೂಹಿಕ ಆತ್ಮಹತ್ಯೆಗೆ ಕಾರಣವನ್ನು ತಿಳಿಯಬಹುದು. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರೂ ಕೂಡ ನಮ್ಮ ಭಾಗದ ಪರಿಸ್ಥಿತಿಯನ್ನು ತಿಳಿದುಕೊಂಡಿದ್ದಾರೆ. ಅವರು ಸಚಿವ ಸಂಪುಟದ ಉಪ ಸಮಿತಿಯ ಅಧ್ಯಕ್ಷರಾಗಿ, ಬರಗಾಲದ ಬಗ್ಗೆ ರಾಜ್ಯದಲ್ಲಿ ಪ್ರವಾಸ ಮಾಡಿ, ರಿವ್ಯೂ ಮೀಟಿಂಗ್ ಮಾಡಿದಂಥ ಸಂದರ್ಭದಲ್ಲೂ ಕೂಡ ನಾನು ಪ್ರಸ್ತಾಪ ಮಾಡಿದ್ದೆ. ವಿಶೇಷವಾಗಿ ಕೊಪ್ಪಳ ಜಿಲ್ಲೆಯಲ್ಲಿ ಮೂರು ವರ್ಷಗಳಿಂದ ಬಹಳ ಧಾರುಣವಾದಂಥ ಪರಿಸ್ಥಿತಿ ಇದೆ ಮಳೆ ಸಂಪೂರ್ಣವಾಗಿ ಬಿದ್ದಿಲ್ಲ, ರೈತರು ಬಹಳ ಚಿಂತಾಕ್ರಾಂತರಾಗಿದ್ದಾರೆ, ಸಂಕಷ್ಟದಲ್ಲಿದ್ದಾರೆ ಎಂದು ಅವರಿಗೆ ಮನವರಿಕೆ ಮಾಡಿಕೊಡತಕ್ಕಂಥಾದ್ದನ್ನೂ ಕೂಡ ನಾನು ಮಾಡಿದ್ದೇನೆ. ಬರಪರಿಹಾರದ ಯೋಜನೆಗಳನ್ನೂ ನಾವು ಕೈಗೆತ್ತಿಕೊಂಡಿದ್ದೇವೆ. ಅದನ್ನು ನಾನು ಇಲ್ಲ ಎಂದು ಹೇಳುವುದಿಲ್ಲ. ಸಿಕ್ಸ್ ಪೀಸ್ ಕಾರ್ಯಕ್ರಮಗಳನ್ನೂ ಕೂಡ ನಾವು ಹಾಕಿಕೊಂಡಿದ್ದೇವೆ. ಆದರೆ ಬರದ ತೀವ್ರತೆ ಬಹಳವಾಗಿದೆ. ಆ ಬರದ ತೀವ್ರತೆಯನ್ನು ಗಮನಿಸಬೇಕು ಎಂದು ನಾನು ಅನೇಕ ಸಾರಿ ಒತ್ತಾಯ ಮಾಡಿದರೂ ಕೂಡ ಸರ್ಕಾರ ತೀವ್ರತೆಯನ್ನು ಗಮನಿಸುತ್ತಿಲ್ಲ. ಇವತ್ತು ನಾನು ಬಹಳ ನೇರವಾಗಿ ಈ ಮಾತನ್ನು ಹೇಳಲು ಬಯಸುತ್ತೇನೆ. ಶಾಸಕರಾದಂಥ ನಾವುಗಳು ಇವತ್ತು ಅಲ್ಲಿ ಅಡ್ಡಾಡತಕ್ಕಂಥ ವಾತಾವರಣವಿಲ್ಲ. ನಾವು ಪಟ್ಟಣಕ್ಕೆ ಹೋದರೆ, ಸಾವಿರಾರು ಜನ ಹೆಣ್ಣುಮಕ್ಕಳು ತಮ್ಮ ಮಕ್ಕಳನ್ನು ಎತ್ತಿಕೊಂಡು ಬಂದು, ಶಾಸಕರೇ ನಮಗೆ ಊಟಕ್ಕೆ ಆಹಾರವಿಲ್ಲ, ನಮಗೆ ಉದ್ಯೋಗ ಕೊಡಿ, ನಮಗೆ ಅಕ್ಕಿಯನ್ನು ಕೊಡಿಸಿ ಎಂದು ಕೇಳುವ ವಾತಾವರಣ ನಿರ್ಮಾಣವಾಗಿದೆ. ಅದಕ್ಕಾಗಿ ನೀವು

ಸಮರೋಪಾದಿಯಲ್ಲಿ ಕೆಲಸಗಳನ್ನು ತೆಗೆದುಕೊಳ್ಳಬೇಕು ಎಂದು ಸರ್ಕಾರದ ಗಮನಕ್ಕೆ ತಂದರೂ ಕೂಡ ಆ ಕೆಲಸಗಳು ಆಗುತ್ತಿಲ್ಲ. ಆ ಕಾರಣಕ್ಕಾಗಿ ನಾವು ಈ ಸರ್ಕಾರವನ್ನು ಖಂಡಿಸಬೇಕಾಗಿದೆ. ಕೇಂದ್ರ ಸರ್ಕಾರ ಕೂಡ ಈ ದಿಕ್ಕಿನಲ್ಲಿ ಚಿಂತನೆಯನ್ನು ಮಾಡಬೇಕಾಗಿದೆ. ಒಬ್ಬ ಮನುಷ್ಯ ಹಸಿವಿನಿಂದ ಸತ್ತರೆ, ಅವನ ರಕ್ಷಣೆಗೆ ಸರ್ಕಾರಗಳು ಬರಬೇಕು ಎಂದು ಒಂದು ಕಡೆ ಸುಪ್ರಿಂ ಕೋರ್ಟ್ ಹೇಳುತ್ತದೆ. ಅದನ್ನು ನಾವೆಲ್ಲರೂ ಕೂಡ ಒಪ್ಪುತ್ತೇವೆ ಆದರೆ ಕೇಂದ್ರದಲ್ಲಿ ಅಕ್ಕಿ ಕೊಳೆಯುತ್ತ ಬಿದ್ದಿದ್ದರೂ ಅದನ್ನು ಬರಪರಿಹಾರಕ್ಕೆ ಕೊಡುತ್ತಿಲ್ಲ. ನಾಗರೀಕ, ಸರ್ಕಾರ ಎಂದು ಕರೆಸಿಕೊಳ್ಳುವ, ಆಡಳಿತ ನಡೆಸುವ ಸರ್ಕಾರಗಳು ಈ ಚಿಂತನೆಯನ್ನು ಮಾಡಬೇಕಾಗಿದೆ. ಎಲ್ಲಿದೆ ನಿಮ್ಮ ನಾಗರೀಕರತೆ? ಸಾರ್ವಜನಿಕರ ಬದುಕನ್ನು, ಸಾರ್ವಜನಿಕರ ಜೀವನವನ್ನು, ಸಾರ್ವಜನಿಕರ ಆಸ್ತಿಯನ್ನು ಉಳಿಸತಕ್ಕಂತ ಕೆಲಸ ಸರ್ಕಾರಗಳಿಂದ ಆಗಬೇಕಾಗಿದೆ. ಆದರೆ ಅದು ಆಗುತ್ತಿಲ್ಲ. ಶ್ರೀ ಮುದ್ದಹನುಮೇಗೌಡರು ಹೇಳಿದರು, ಸಾವಿಗೆ ಕಾನೂನಿನಲ್ಲಿ ಅವಕಾಶ ಕೊಟ್ಟಿಲ್ಲ, ನಾವು ಸಾವನ್ನು ತಂದು ಕೊಳ್ಳಬಾರದು ಎಂದು ಹೇಳಿದರು. ಆದರೆ ಈ ಸರ್ಕಾರ ಅವರನ್ನು ಬದುಕಲು ಬಿಡುತ್ತಿಲ್ಲ. ಆ ಕಾರಣಕ್ಕಾಗಿ ನಾವು ಆಲೋಚನೆಯನ್ನು ಮಾಡಬೇಕಾಗಿದೆ. ನಮ್ಮ ಸಂವಿಧಾನದಲ್ಲಿ ಸಾವಿಗೆ ಅವಕಾಶವಿಲ್ಲ. ಅದನ್ನು ನಾನೂ ಒಪ್ಪಿಕೊಳ್ಳುತ್ತೇನೆ. ಆದರೆ ಅವರು ಬದುಕಲು ಆಗುತ್ತಿಲ್ಲ. ಆ ಕಾರಣಕ್ಕಾಗಿ ನಾವು ಅದರ ಬಗ್ಗೆ ಚಿಂತನೆಯನ್ನು ಮಾಡಬೇಕಾಗಿದೆ. ಬರದ ಛಾಯೆ ಮತ್ತು ವಸ್ತುಸ್ಥಿತಿಯನ್ನು ನಾವೆಲ್ಲರೂ ಗಮನಿಸಿದಾಗ, ಕೇಂದ್ರ ಸರ್ಕಾರ ಇದಕ್ಕೆ ಸಹಾಯ ನೀಡತಕ್ಕಂಥ ದೃಷ್ಟಿಯಲ್ಲಿ ಇಲ್ಲ, ರಾಜ್ಯ ಸರ್ಕಾರ ಕೂಡ ಇದರಲ್ಲಿ ತನ್ನ ಪಾಲು ಏನು ಎನ್ನುವುದನ್ನು ಮರೆಮಾಚುತ್ತಿದೆ. ನಿನ್ನೆಯ ದಿವಸ ಜಿಲ್ಲಾಮಂತ್ರಿಗಳು ಸಂಕ್ಷಿಪ್ತವಾದ ರಿಪೋರ್ಟ್‌ನ್ನು ಮಾಡಿದ್ದಾರೆ. ಅವರ ಆ ರಿಪೋರ್ಟ್ ಅನ್ನು ಒಪ್ಪಲಿಕ್ಕೆ ಸಾವು ತಯಾರಿಲ್ಲ. ಅವರು ಆ ಘಟನೆ ನಡೆದಂಥ ಸ್ಥಳಕ್ಕೆ ಭೇಟಿ ಮಾಡಬೇಕಾಗುತ್ತದೆ. ಅಲ್ಲಿಯ ಘಟನೆಯ ಬಗ್ಗೆ ಪ್ರಮುಖವಾಗಿ ದಿನಪತ್ರಿಕೆಗಳಲ್ಲಿ ಬಂದ ವರದಿಯನ್ನು ನೋಡಿದಾಗ, ಅಲ್ಲಿಯ ಗ್ರಾಮಸ್ಥರು ಮತ್ತು ಅವರ ಇಬ್ಬರು ಆಪ್ತರು ಸ್ಟೇಟ್‌ಮೆಂಟ್ ಅನ್ನು ಪತ್ರಿಕೆಗೆ ಕೊಡುತ್ತಾ, 'ಬಹಳಷ್ಟು ದಿನಗಳಿಂದ ಅವರಿಗೆ ಕೆಲಸ ಸಿಕ್ಕಿಲ್ಲ, ಸುಮಾರು ದಿವಸಗಳಿಂದ ಅವರು ಒಂದು ಹೊತ್ತು ಮಾತ್ರ ಊಟ ಮಾಡಿದ್ದಾರೆ, ಒಂದು ವಾರದಿಂದ ಒಲೆಯನ್ನೇ ಹಚ್ಚಿಲ್ಲ. ಎಂದು ಹೇಳಿದ್ದಾರೆ. ಆ ಕುಟುಂಬದಲ್ಲಿ ಅಡಿಗೆಯನ್ನೇ ಮಾಡಿಲ್ಲ ಎಂದರೆ ಇನ್ನು ಮನುಷ್ಯ ಬದುಕಲಿಕ್ಕೆ ಪ್ರಯತ್ನ ಮಾಡುತ್ತಾನೆಯೇ ಹೇಳಿ. ನಾವೆಲ್ಲರೂ ಕೂಡ ಈ ಪ್ರಶ್ನೆಯ ಬಗ್ಗೆ ಆಲೋಚನೆ ಮಾಡಬೇಕಾಗಿದೆ. ಆದ್ದರಿಂದ ಸರ್ಕಾರ ಏನು ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತದೆ ಎಂಬುದರ ಬಗ್ಗೆ ಸ್ಪಷ್ಟಪಡಿಸಬೇಕಾಗಿದೆ. ಮಾನ್ಯ ಖರ್ಗೆ ಸಾಹೇಬರು ಮಾತನಾಡುತ್ತಾ, ರೈತರು ಆತ್ಮಹತ್ಯೆ ಮಾಡಿಕೊಂಡಿರುವ ಪ್ರಕರಣದಲ್ಲಿ ಸರ್ಕಾರದಿಂದ ಪರಿಹಾರದ ಘೋಷಣೆಯನ್ನು ಮಾಡುತ್ತೇವೆ. ಎನ್ನುವ ಮಾತನ್ನು ಕೂಡ ಹೇಳಿದ್ದಾರೆ. ಅದನ್ನು ಸ್ವಾಗತ ಮಾಡುತ್ತೇನೆ. ಆದರೆ ಆ ಮಾತನ್ನು ಬಹಳ ತಡವಾಗಿ ಹೇಳಿದ್ದೀರಿ... ಅಲ್ಲಿ ಸಾರ್ವಜನಿಕರು ಕೂಡ ಏನು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆಂದರೆ...

ಶ್ರೀ ಎಸ್. ಎಸ್. ಪಾಟೀಲ್ :- ಮಾನ್ಯ ಛೇರ್‌ಮನ್‌ರವರೇ, ಅಲ್ಲೊಬ್ಬರು ಕುಲಕರ್ಣಿ ಎಂದು ತಿಳಿದುಕೊಂಡು, ಅವರ ಹೆಸರು ಸರಿಯಾಗಿ ನನ್ನ ನೆನಪಿನಲ್ಲಿ ಇಲ್ಲ. ಅವರು ಹಿರಿಯರು, ಕಾಂಗ್ರೆಸ್ ಮುಖಂಡರಾಗಿದ್ದಾರೆ. ಅವರು ಟಿ.ವಿ ಸಂದರ್ಶನ ಮಾಡುತ್ತಾ- 'ಯಾರು ರೈತರು ಸತ್ತಿದ್ದಾರೆ ಅವರಿಗೆ ಕೆಲಸ ಇಲ್ಲದೆ ಉಪವಾಸದಿಂದಲೇ ಸತ್ತಿದ್ದಾರೆ' ಎಂದು ಹೇಳಿದ್ದಾರೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ :- ಮಾನ್ಯ ಛೇರ್‌ಮನ್‌ರವರೇ, ಖಂಡಿತವಾಗಿ ಅಲ್ಲಿ ಸಾರ್ವಜನಿಕರು ಹೇಳಿದ್ದಾರೆ, ಅವರ ಆಪ್ತರೂ ಕೂಡ ಹೇಳಿದ್ದಾರೆ ಮತ್ತು ಪತ್ರಿಕಾ ವರದಿ ಮಾಡತಕ್ಕಂಥವರು ಯಾರು ಇದ್ದಾರೆ ಅವರು ವಾಸ್ತವಾಂಶವನ್ನು ಸರ್ಕಾರದ ಗಮನಕ್ಕೆ ತರತಕ್ಕಂಥದ್ದು, ಸಾರ್ವಜನಿಕರ ಗಮನಕ್ಕೆ ತರತಕ್ಕಂಥ ಕೆಲಸವನ್ನು ಪತ್ರಿಕೆಗಳು ಮಾಡಿವೆ. ಆದರೆ ತಾವು ಇವತ್ತು ಹೇಳಿಕೆಯನ್ನು ಏನು ಕೊಡುತ್ತೀರಿ ಎನ್ನುವುದನ್ನೂ ಸಹ ನಾವು ಗಮನಿಸಬೇಕಾಗಿದೆ. ಇವತ್ತು ಜ್ವಲಂತ ಸಮಸ್ಯೆ ಇದೆ, ತೋಟಗಾರಿಕಾ ಬೆಳೆಗಳ ಬಗ್ಗೆಯೂ ಇವತ್ತು ಕೇಂದ್ರ ಅಥವಾ ರಾಜ್ಯಸರ್ಕಾರ ಇರಬಹುದು, ಹೀಗೆ ಯಾವುದೇ ಸರ್ಕಾರಗಳು ಚಕಾರವೆತ್ತುತ್ತಿಲ್ಲ. ಆ ದಿಶೆಯಲ್ಲಿ ಈ ಇಶ್ಯೂಸ್ ಅನ್ನು ತೆಗೆದುಕೊಂಡು ಹೋಗಿ ಕೇಂದ್ರ ಸರ್ಕಾರದ ಮೇಲೆ ಒತ್ತಡವನ್ನು ತಂದರೆ ಕೆಲಸ ಆಗಬಹುದು. ಇದನ್ನು ರಾಜ್ಯಸರ್ಕಾರ ಮಾಡಬೇಕು. ಬಳ್ಳಾರಿ ಜಿಲ್ಲೆಯಲ್ಲಿ ಕೂಡ ಒಂದು ತಿಂಗಳ ಹಿಂದೆ ಅರಗಿನದೋಣಿ ಎಂಬಲ್ಲಿ ಹಸಿವಿನಿಂದ ಸಾವನ್ನಪ್ಪಿದ್ದಾರೆ ಎಂದೂ ಕೂಡ ವರದಿಯಾಗಿತ್ತು. ಅದನ್ನು ಟೋಟಲಿ ಈ ಸರ್ಕಾರದವರು ಅಲ್ಲಗಳೆದರು. ಇವತ್ತು ನೀವು ಕೇಂದ್ರ ಸರ್ಕಾರದ ಮೇಲೆ ಒತ್ತಡವನ್ನು ತನ್ನಿ, ಇಷ್ಟೊಂದು ಜನ ಇವತ್ತು ಹಸಿವಿನಿಂದ ಸಾಯುತ್ತಿದ್ದಾರೆ. ನಮ್ಮ ರಾಜ್ಯದಲ್ಲಿರತಕ್ಕಂಥ ಬಂಡವಾಳ ಸಾಕಾಗುತ್ತಿಲ್ಲ. ಇವತ್ತು ನಾವು ಜನರ ಮಾನವನ್ನು ಜನರ ಜೀವವನ್ನು ಉಳಿಸಿಕೊಳ್ಳಬೇಕಾಗಿದೆ. ಅದಕ್ಕೆ ನಿಮ್ಮ ಸಹಾಯವನ್ನು ಕೊಡಿ ಎಂದು ಕೇಂದ್ರಕ್ಕೆ ರಾಜ್ಯಸರ್ಕಾರದಿಂದ ನೀವು ಒತ್ತಾಯ ಮಾಡಬೇಕು. ಆ ದೃಷ್ಟಿಯಿಂದ ಸರ್ಕಾರ ತನ್ನ ಪಾಲಿನ ಕರ್ತವ್ಯವನ್ನು ಮಾಡಿ ಈ ರಾಜ್ಯದ ಜನತೆಯ ಮಾನ ಮತ್ತು ಜೀವವನ್ನು ಉಳಿಸತಕ್ಕಂಥ ಕೆಲಸವನ್ನು ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ ಮತ್ತು ಆ ಕುಟುಂಬಕ್ಕೆ, ಇವತ್ತು ರಾಷ್ಟ್ರೀಯ ಭದ್ರತಾ ಯೋಜನೆ ಎನ್ನುವ ಒಂದು ಯೋಜನೆ ಇದೆ. ಅದಕ್ಕೆ ದುಡ್ಡು ಇಲ್ಲ. ಅದು ಕೇಂದ್ರ ಸರ್ಕಾರದ ಯೋಜನೆಯಾಗಿತ್ತು. ಈಗ ಅದು ವರ್ಗಾವಣೆಯಾಗಿ (ಮಾರ್ಪಾಡಾಗಿ) ರಾಜ್ಯ ಸರ್ಕಾರಕ್ಕೆ ಕೊಟ್ಟಿದ್ದಾರೆ. ಅಲ್ಲಿ ಇರುವಂಥ ಅಪ್ಲಿಕೇಷನ್ಸ್ ಅನ್ನು ನಾವು ನೋಡಿದರೆ ಕುಟುಂಬವನ್ನು ನಡೆಸತಕ್ಕಂಥ ಯಜಮಾನ ಸತ್ತಾಗ ಆ ಕುಟುಂಬದವರಿಗೆ ಸ್ವಲ್ಪ ಆರ್ಥಿಕ ನೆರವನ್ನು ಕೊಟ್ಟರೆ, ಆ ಯಜಮಾನನ ಸಾವಿನಿಂದ ಕುಸಿದಿರತಕ್ಕಂಥ ಕುಟುಂಬಕ್ಕೆ ಸಹಾಯ ಮಾಡುವುದಕ್ಕೆ ಇದ್ದಂಥ ಯೋಜನೆ ಏನು ಇದೆ, ಅದರಲ್ಲಿ ಕೂಡ ಇವತ್ತು ಹಣ ಇಲ್ಲ. ಆ ಕಾರಣಕ್ಕಾಗಿ 10 ಸಾವಿರ ರೂಪಾಯಿಗಳನ್ನು ಕೊಡತಕ್ಕಂಥ ರಾಷ್ಟ್ರೀಯ ಭದ್ರತಾ ಯೋಜನೆ ಅದನ್ನು ಕೂಡ ಇವತ್ತು ಜಾರಿಗೊಳಿಸತಕ್ಕಂಥ ಕೆಲಸ ಆಗಬೇಕೆಂದು ಒತ್ತಾಯ ಮಾಡಿ, ಈ ಒಂದು ಸಂದರ್ಭದಲ್ಲಿ ರೈತರ ಸಾವಿನ ನೋವಿನ ವಿಚಾರದಲ್ಲಿ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ) :- ಮಾನ್ಯ ಛೇರಮನ್‌ರವರೇ, ತಾವು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನರ್ಪಿಸುತ್ತೇನೆ. ಮೊದಲನೆಯದಾಗಿ, ಈ ನಮ್ಮ ಕೊಪ್ಪಳ ಜಿಲ್ಲೆಯ ಕುಷ್ಟಗಿ ತಾಲ್ಲೂಕಿನ ರಾಮಾಪುರದ ಘಟನೆ ಒಂದು ಹೃದಯವಿದ್ರಾವಕ ಘಟನೆ ಎನ್ನುವಂಥದ್ದರ ಬಗ್ಗೆ ಬಹುಶಃ ಈ ಸದನದಲ್ಲಿರುವಂಥ ಅಥವಾ ಯಾವುದೇ ಜನತೆಯೂ ಸಹ ಇದಕ್ಕೆ ಬೇರೆ ರೀತಿಯ ಅಭಿಪ್ರಾಯವನ್ನು ಕೊಡಲಿಕ್ಕೆ ಸಾಧ್ಯವೇ ಇಲ್ಲ. ನಾವೆಲ್ಲರೂ ಕೂಡ ಇಂಥ ಘಟನೆಗಳು ಆಗದಿರುವಂಥ ವಿಶ್ವಾಸವನ್ನು ಮೂಡಿಸುವಂಥ ಸಂದೇಶವನ್ನು ಈ ಸದನದ ಮೂಲಕ ಕಳುಹಿಸುವಂತೆ ಆಗಬೇಕು ಎನ್ನುವಂಥ ನನ್ನ ಅಭಿಪ್ರಾಯವನ್ನು ಈ ಸಂದರ್ಭದಲ್ಲಿ ಹೇಳುತ್ತಾ, ಅನೇಕ ಸಲಹೆ ಸೂಚನೆಗಳನ್ನು ನಮ್ಮ ವಿರೋಧ ಪಕ್ಷದ ನಾಯಕರು ಮತ್ತು ಉಳಿದ

ಕೆಲವು ಸದಸ್ಯರುಗಳು ಈ ಸಂದರ್ಭದಲ್ಲಿ ಕೊಟ್ಟಿದ್ದಾರೆ. ನಾನು ಆ ಎಲ್ಲಾ ಸಲಹೆಗಳನ್ನು ಪುನರುಚ್ಚಾರ ಮಾಡುವುದಕ್ಕೆ ಬಯಸದೆ, ಮಾನ್ಯ ಮುಖ್ಯಮಂತ್ರಿಗಳಲ್ಲಿ ಮತ್ತು ಹಿರಿಯ ಸಚಿವರುಗಳಲ್ಲಿ ನಾನು ನನ್ನ ಒಂದು ವಿನಂತಿಯನ್ನು ಆಗ್ರಹಪೂರ್ವಕವಾಗಿ ಮಾಡುವವನಿದ್ದೇನೆ. ರಾಜ್ಯದ, ಸರ್ಕಾರದ ಜವಾಬ್ದಾರಿ ಇರುವಂಥವರಿಗೆ ವಿಶೇಷವಾಗಿ ಮಂತ್ರಿಗಳಿಗೆ ಸಮಾಜದಲ್ಲಿ ವಿಶೇಷವಾದಂಥ ಜವಾಬ್ದಾರಿ ಇದೆ. ಹಾಗಾಗಿ ಮಾನ್ಯ ಖರ್ಗೆಯವರಲ್ಲಿ ಮತ್ತು ಉಳಿದಂಥ ಹಿರಿಯ ಸಚಿವರುಗಳಲ್ಲಿ ನನ್ನ ವಿನಂತಿ ಏನೆಂದರೆ, ನಾವು ಹೇಗೆ ನಡೆದುಕೊಳ್ಳುತ್ತೇವೆ, ನಾವು ಹೇಗೆ ಇರುತ್ತೇವೆ, ನಮ್ಮ ಜೀವನದ ರೀತಿ ನೀತಿಗಳು ಅಥವಾ ನಮ್ಮ ಎಲ್ಲಾ ವ್ಯವಹಾರದ ಚಟುವಟಿಕೆಗಳನ್ನು ಸಾರ್ವಜನಿಕರು ಬಹಳ ಸೂಕ್ಷ್ಮತೆಯಿಂದ ಬಹಳ ಗಂಭೀರವಾಗಿ ಗಮನಿಸುತ್ತಿರುತ್ತಾರೆ. ಕಳೆದ ಮೂರು ವರ್ಷಗಳಿಂದ ನಮ್ಮ ರಾಜ್ಯದಲ್ಲಿ ಬರಗಾಲವಿರುವುದು ನಮಗೆಲ್ಲರಿಗೂ ಗೊತ್ತಿರುವಂಥ ವಿಚಾರ. ರಾಜ್ಯದಲ್ಲಿ 155 ತಾಲ್ಲೂಕುಗಳಲ್ಲಿ ಬರಗಾಲವಿದೆ. ಇವತ್ತು ಜನತೆಗೆ ಕೆಲಸ ಇಲ್ಲದೆ ಈ ರೀತಿ ಆತ್ಮಹತ್ಯೆ ಮಾಡಿಕೊಳ್ಳುವಂಥ ಸ್ಥಿತಿ, ಹೊರರಾಜ್ಯಗಳಿಗೆ ಕೆಲಸಕ್ಕಾಗಿ, ಕೂಲಿಗಾಗಿ ಗುಳೆ ಹೋಗುತ್ತಿರುವಂಥ ಸಂದರ್ಭ, ದನಕರುಗಳು ಇವತ್ತು ಕಟುಕರ ಪಾಲಾಗುತ್ತಿರುವಂಥ ಸಂದರ್ಭ, ಇತ್ಯಾದಿ ಅನೇಕ ಘಟನೆಗಳು ರಾಜ್ಯದಲ್ಲಿ ನಡೆಯುತ್ತಿವೆ, ಇಂಥ ಸಂದರ್ಭದಲ್ಲಿಯೂ ನಾವೆಲ್ಲರೂ ಊಟ ಮಾಡುತ್ತೇವೆ, ತಿಂಡಿತಿನ್ನುತ್ತೇವೆ. ಉಪಹಾರ ಮಾಡುತ್ತೇವೆ ಹೀಗೆ ಅವಶ್ಯವಿರುವಂಥದ್ದೆಲ್ಲವನ್ನು ಮಾಡುತ್ತೇವೆ. ಆದರೆ ಸರ್ಕಾರದ ಜವಾಬ್ದಾರಿ ಸ್ಥಾನದಲ್ಲಿರತಕ್ಕಂಥವರು ಇಂಥದ್ದೆಲ್ಲವನ್ನೂ ಮಾಡುವಂಥ ಸಂದರ್ಭದಲ್ಲಿ ಯಾವ ದೃಷ್ಟಿಕೋನದಲ್ಲಿ ಆ ಎಲ್ಲಾ ಚಟುವಟಿಕೆಯನ್ನು ಮಾಡುತ್ತಿದ್ದೇವೆ ಎನ್ನುವಂಥದ್ದನ್ನೂ ಕೂಡ ನಾವು ಆತ್ಮಾವಲೋಕನ ಮಾಡಿಕೊಳ್ಳಬೇಕು. ನಾನು ಇಲ್ಲಿ ಉಲ್ಲೇಖ ಮಾಡುತ್ತಿರುವಂಥ ಪ್ರಸಂಗ ಯಾವುದೆಂದರೆ, ಮಾನ್ಯ ಮುಖ್ಯಮಂತ್ರಿಗಳು ದೋಸೆ ತಿನ್ನಲಿಕ್ಕೆ ಹೋಗಿದ್ದರು. ಅದು ತಪ್ಪು ಎಂದು ನಾನು ಹೇಳುವುದಿಲ್ಲ. ನಾವೆಲ್ಲರೂ ದೋಸೆ ತಿನ್ನುತ್ತೇವೆ, ಇಡ್ಲಿ ತಿನ್ನುತ್ತೇವೆ, ಊಟ ಮಾಡುತ್ತೇವೆ. ಆದರೆ ಅದನ್ನು ಮೀಡಿಯಾ ಈವಂಟ್ ಆಗಿ ಮಾಡಿದ್ದಿದೆಯಲ್ಲಾ ಅದನ್ನು ಈ ರಾಜ್ಯದ ಜನ ಯಾರೂ ಒಪ್ಪುವುದಕ್ಕೆ ಸಾಧ್ಯವಿಲ್ಲ. ಇಲ್ಲಿ ತುಪ್ಪ ಜಾಸ್ತಿ ಇತ್ತು, ತುಪ್ಪ ಕಡಿಮೆ ಇತ್ತು ಎನ್ನುವುದು ಸುದ್ದಿಮಾಧ್ಯಮದಲ್ಲಿ ಬರುವುದು ಅಗತ್ಯ ಇರಲಿಲ್ಲ. ಈ ಸಂದರ್ಭದಲ್ಲಿ ಬರ ಪ್ರದೇಶದಲ್ಲಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ.

ಶ್ರೀ ಹೆಚ್. ಎಂ. ರೇವಣ್ಣ (ರೇಷ್ಮೆ ಮತ್ತು ಜವಳಿ ಸಚಿವರು) :- ಮಾನ್ಯ ಛೇರ್‌ಮನ್‌ರವರೇ, ಇವರು ಬುದ್ಧಿ ಹೇಳುವ ಮಾತಿನಲ್ಲಿ ಯಾವ ರೀತಿಯಾಗಿ ಹೇಳಿಕೊಂಡು ಹೋಗಿತ್ತಿದ್ದಾರೆ ನೋಡಿ ಸಚಿವರಿಗೆ ಬುದ್ಧಿ ಹೇಳುತ್ತೇನೆಂದು ಅವರು ಹೇಳಿದರು. ಬುದ್ಧಿ ಹೇಳುವ ರೀತಿಯೇ ಇದು? ಇವರಿಂದ ಬುದ್ಧಿ ಹೇಳಿಸಿಕೊಳ್ಳುವಂಥದ್ದೇನೂ ನಮಗೆ ಬಂದಿಲ್ಲ. ಬುದ್ಧಿ ಹೇಳುತ್ತೇನೆ ಎಂದು ನೀವು ಹೇಳುವುದಲ್ಲ, ಏನು ಕ್ರಮ ಕೈಗೊಳ್ಳಬೇಕಾಗಿದೆ ಎಂಬುದನ್ನು ಹೇಳಿ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- ನಾನು ಹೇಳುತ್ತಿರುವಂಥ ಭಾವನೆ ದೃಷ್ಟಿಕೋನವನ್ನು ನೀವು ಅರ್ಥ ಮಾಡಿಕೊಂಡಿಲ್ಲವೆಂದು ಕಾಣುತ್ತದೆ. ನಾನು ಆಗಲೇ ಹೇಳಿದ ಹಾಗೆ ನಾವು ಯಾರೂ ದೋಷ ತಿನ್ನದೇ ಇಲ್ಲ, ಇಡ್ಲಿ ತಿನ್ನದೇ ಇಲ್ಲ, ಊಟ ಉಪಹಾರ ಮಾಡದೇ ಇಲ್ಲ. ಆದರೆ ರಾಜ್ಯದ ಜನತೆ ಇಷ್ಟು ಭೀಕರವಾದಂಥ ಕಷ್ಟವನ್ನು ಅನುಭವಿಸುತ್ತಿದ್ದಂಥ ಸಂದರ್ಭದಲ್ಲಿ ಇವರು ದೋಸೆ ತಿನ್ನುವುದನ್ನು ಮೀಡಿಯಾ ಈವೆಂಟ್ ಆಗಿ ಮಾಡುವುದು ತಪ್ಪು. ಅದೂ ಕೂಡ ಮುಖ್ಯಮಂತ್ರಿಗಳ ಸ್ಥಾನದಲ್ಲಿ ಅಂದರೆ ಬಹಳ ಜವಾಬ್ದಾರಿ ಸ್ಥಾನದಲ್ಲಿ ಇರುವಂಥವರು ಈ ರೀತಿಯಾಗಿ ಮಾಡುವುದು

ತಪ್ಪು ಎಂದು ಹೇಳಿದ್ದೇನೆಯೇ ಹೊರತು ಅಲ್ಲಿ ಹೋಗಿ ತಿನ್ನುವುದು ತಪ್ಪು ಎಂದು ಹೇಳುತ್ತಿಲ್ಲ. ಅದರರ್ಥ ನಾವೆಲ್ಲರೂ ಉಪವಾಸದಿಂದ ಇದ್ದೇವೆಂದು ಅಲ್ಲ.

ಶ್ರೀ ಸಿ.ಆರ್. ಸಗೀರ್ ಅಹಮದ್ :– ಮಾನ್ಯ ಛೇರ್‌ಮನ್‌ರವರೇ, ನಾನು ಸಚಿವಸಂಪುಟದ ಒಬ್ಬ ಸದಸ್ಯನಾಗಿದ್ದೇನೆ. ನಾಗರೀಕರು, ಈ ರಾಜ್ಯದ ಜನತೆ ಆಯ್ಕೆ ಮಾಡಿದ್ದರಿಂದ ನಾನು ಇಲ್ಲಿ ಇದ್ದೇನೆ. ನಾನು ನನ್ನ ಸ್ವಂತ ವಾಹನವನ್ನು ನಾನು ನಡೆಸಿಕೊಂಡು ಹೋದರೆ, ಅದನ್ನು ನಮ್ಮ ಪತ್ರಿಕಾ ಮಿತ್ರರು ನಮಗೆ ಪ್ರಚಾರ ಕೊಟ್ಟರೆ ನಾನು ಕೇಳಿಕೊಂಡ ಹಾಗೆ ಆಗುತ್ತದೆಯೇ? ನಾನು ಒಂದು ಸಾರಿ ನನ್ನ ಸ್ವಂತ ಕಾರನ್ನು ನಡೆಸಿಕೊಂಡು ಹೋಗುವಂಥ ಸಂದರ್ಭದಲ್ಲಿ ಪತ್ರಿಕೆಗಳಲ್ಲಿ ಬಂತು. ಅದರ ಅರ್ಥ ನಾನು ನನ್ನ ಪ್ರಚಾರಕ್ಕಾಗಿ ಮಾಡಿದ್ದೇನೆಂದಾಗಿದೆಯೇ? ಮಾನ್ಯ ಮುಖ್ಯಮಂತ್ರಿಗಳಿಗೆ ಹಸಿವು ಆಗಿದ್ದರಿಂದ ದೋಸೆ ತಿನ್ನುವುದಕ್ಕೆ ಹೋಗಿದ್ದರೆಂದು ಕಾಣುತ್ತದೆ. ಅದಕ್ಕೆ ಪ್ರಚಾರ ಸಿಕ್ಕಿದೆ. ಆದ್ದರಿಂದ ಇವರು ಅದನ್ನು ಉದಾಹರಣೆ ಕೊಟ್ಟುಕೊಂಡು ಈ ರಾಜ್ಯದ ಬರಪರಿಹಾರದ ಬಗ್ಗೆ ಮಾತನಾಡಿದರೆ, ಇವರೇನು ಊಟ ಬಿಟ್ಟಿದ್ದಾರೆಯೇ? ಇವರು ಮೀನು ತಿನ್ನುವುದನ್ನು ಬಿಟ್ಟಿದ್ದಾರೆಯೇ? ಮುದ್ದೆ ತಿನ್ನುವುದನ್ನು ಏನಾದರೂ ಬಿಟ್ಟಿದ್ದಾರೆಯೇ? ಕೋಳಿ ತಿನ್ನುವುದನ್ನು ಏನದರೂ ಬಿಟ್ಟಿದ್ದಾರೆಯೇ? ಮಾತನಾಡುವುದು ಬಹಳ ಸುಲಭ ಇದೆ. ಆದರೆ ಅದನ್ನು ಕಾರ್ಯಾಚರಣೆಗೆ ತರುವುದು ಬಹಳ ಕಷ್ಟ ಇದೆ.

ಛೇರ್‌ಮನ್ :– ಮೀನಿಗೂ ಹೆಗಡೆಯವರಿಗೂ ಏನು ಸಂಬಂಧ ಸ್ವಾಮಿ?

ಶ್ರೀ ಕೆ. ಷಡಕ್ಷರಿ :– ಈಗ ದೇಶ ಬರಗಾಲದಲ್ಲಿದೆ. ಪ್ರಧಾನಮಂತ್ರಿಗಳು ವಿದೇಶಯಾತ್ರೆ ಮಾಡಲಿಲ್ಲವೇ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :– ಮಾನ್ಯ ಛೇರ್‌ಮೆನ್‌ರವರೇ, ನಾನು ಬಹಳ ಜವಾಬ್ದಾರಿಯುತವಾಗಿ ಈ ಮಾತನ್ನು ಹೇಳಿದ್ದೇನೆ. ನಾನು ಅಥವಾ ನೀವು, ಯಾವ ಸಂಗತಿಯನ್ನೂ ಬಿಟ್ಟಿಲ್ಲ ಎನ್ನುವುದನ್ನೂ ಸಹ ಸ್ಪಷ್ಟಪಡಿಸಿದ್ದೇನೆ.

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು :– ಶ್ರೀ ಸಗೀರ್ ಆಹಮದ್‌ರವರು ಶಿವಾಜಿನಗರದ ಹೋಟೆಲ್‌ನಲ್ಲಿ ಪ್ರತಿ ದಿನ ಬಿರಿಯಾನಿ ತಿನ್ನುತ್ತಾರೆ. ನಗು ಅದರ ಬಗ್ಗೆ ಪ್ರಚಾರವೇ ಬಂದಿಲ್ಲ.

ಛೇರ್ಮನ್ :– ಮಾನ್ಯ ಸದಸ್ಯರು ಏಕೆ ಅಲ್ಲಿ ಹೋಗಿದ್ದರು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :– ಮಾನ್ಯ ಛೇರ್‌ಮನ್‌ರವರೇ, ಶ್ರೀ ಸಗೀರ್ ಅಹಮ್ಮದ್‌ರವರು ಎಲ್ಲಾ ವಿಷಯವನ್ನು ಹೇಗೆ ಲಘುವಾಗಿ ಪರಿಗಣಿಸುವುದಕ್ಕೆ ಬಯಸುತ್ತಾರೋ ಆ ರೀತಿ ಈ ವಿಷಯವನ್ನು ಪರಿಗಣಿಸುವುದಕ್ಕೆ ನನು ಬಯಸುವುದಿಲ್ಲ.

ಶ್ರೀ ಸಿ.ಆರ್. ಸಗೀರ್ ಅಹಮ್ಮದ್ :– ಮಾನ್ಯ ಛೇರ್‌ಮನ್‌ರವರೇ, ಬಡವರ ಬಗ್ಗೆ ಕಾಳಜಿ ಇದ್ದಂಥವರು, ಬಡವರ ಬಗ್ಗೆ ಅನುಕಂಪ ಇದ್ದಂಥವರು ಈಗ ತಿಂಗಳಿಗೆ ಮೂರೇ ದಿವಸ ಇವರು ಊಟ ಮಾಡುತ್ತಿರುವುದು ಬಾಕಿ ಎಲ್ಲಾ ಇವರು ಬಡವರಿಗೆ ಹಂಚಿಕೆ ಮಾಡಿಕೊಡುತ್ತಿದ್ದಾರೆ, ಈ ದೇಶದ ಜನರಿಗೆ, ಈ ರಾಜ್ಯದ ಜನರಿಗೆ ಬಟವಾಡೆ ಮಾಡುತ್ತಿದ್ದಾರೆ.

ಗೊಂದಲ

ಶ್ರೀ ಸಿ.ಆರ್. ಸಗೀರ್ ಅಹಮ್ಮದ್ :– ಏಕೆಂದು ಹೇಳಿದರೆ ಇದು ಕೇವಲ ನಮ್ಮ ರಾಜ್ಯದ ಒಂದೇ ಸಮಸ್ಯೆ ಅಲ್ಲ. ಹಿರಿಯ ಸದಸ್ಯರಾದಂಥ ಮಾನ್ಯ ಸಿಂಧ್ಯಾರವರು ಎಷ್ಟು ಚೆನ್ನಾಗಿ ಮಾತನಾಡಿದರು. ವಿಚಾರವನ್ನು ನಾವೂ ಒಪ್ಪಬೇಕಾಗುತ್ತದೆ, ನೀವೂ ಒಪ್ಪಬೇಕಾಗುತ್ತದೆ. ಈ ರಾಜ್ಯದ

ಜನರ ಹಿತವನ್ನು ಕಾಪಾಡುವುದು ಎಲ್ಲರ ಜವಾಬ್ದಾರಿಯಾಗಿರುತ್ತದೆ. ಕೇವಲ ಟೀಕೆಟಿಪ್ಪಣಿಯಿಂದ ಯಾವುದೇ ಸಮಸ್ಯೆಯನ್ನು ಬಗೆಹರಿಸುವುದಕ್ಕೆ ಸಾಧ್ಯವಾಗುವುದಿಲ್ಲ. ತಾವು ಏನು ಮಾಡಬೇಕೆಂಬುದರ ಬಗ್ಗೆ ಆಲೋಚನೆ ಮಾಡಿದ್ದೀರಿ ಅದನ್ನು ಹೇಳಿ. ನಾವು ಏನು ಆಲೋಚನೆ ಮಾಡಬೇಕೆಂಬುದರ ಬಗ್ಗೆ ಸಲಹೆ ಕೊಡಿ ಅದರ ಬಗ್ಗೆ ಈ ರಾಜ್ಯದ ರೈತರ ಹಿತದೃಷ್ಟಿಯಲ್ಲಿ ಏನು ಮಾಡಬೇಕೋ ಅದನ್ನು ಮಾಡುತ್ತೇವೆ. ಇಲ್ಲಿ ಲಘುವಾಗಿ ತೆಗೆದುಕೊಳ್ಳುವ ವಿಚಾರ ಏನು ಬಂತು?

ಗೊಂದಲ

ಶ್ರೀ ಬಿ. ರಮಾನಾಥ ರೈ (ಸಾರಿಗೆ ಸಚಿವರು) :– "ತನ್ನ ಬಣ್ಣಿಸಬೇಡ, ಇದಿರ ಹಳಿಯಲು ಬೇಡ. ಕೂಡಲಸಂಗಮ ದೇವಾ"... ಎಂದು ಬಸವಣ್ಣನವರ ವಚನದಲ್ಲಿ ಹೇಳಿರುವುದು ಗೊತ್ತಿಲ್ಲವೇ?

ಗೊಂದಲ

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :– ಮಾನ್ಯ ಛೇರ್‌ಮನ್‌ರವರೇ, ನಾನು ಈ ವಿಷಯವನ್ನು ಬೆಳೆಸುವುದಕ್ಕೆ ಬಯಸುವುದಿಲ್ಲ. ಆದರೆ ಸರ್ಕಾರ ನಡೆಸುವಂಥ, ಪ್ರಮುಖ ಜವಾಬ್ದಾರಿ ಸ್ಥಾನದಲ್ಲಿರತಕ್ಕಂಥವರು ಈ ರೀತಿಯ ಸಂಗತಿಗಳನ್ನು ಮೀಡಿಯಾ ಈವೆಂಟ್ ಆಗಿ ಮಾಡಬಾರದೆಂದು ಮತ್ತೊಮ್ಮೆ ಪುನರುಚ್ಚಾರ ಮಾಡುವುದಕ್ಕೆ ಬಯಸುತ್ತೇನೆ. ಇದನ್ನು ಜನ ಒಪ್ಪುವುದಿಲ್ಲ. ಇದರಿಂದ ಜನರಿಗೆ ಸರಿಯಾದಂಥ ವಿಶ್ವಾಸವನ್ನು ಮೂಡಿಸುವಂಥ ಸಂದೇಶ ಹೋಗುವುದಿಲ್ಲ. ಹಾಗಾಗಿ ಈ ರೀತಿ ಚಟುವಟಿಕೆಗಳು ಆಗಬಾರದೆನ್ನುವುದನ್ನು ಮತ್ತೊಮ್ಮೆ ಹೇಳುತ್ತಾ,

3.20 ಪಿಎಂ

ನಮ್ಮ ನಾಯಕರು ಈಗಾಗಲೇ ಪ್ರಸ್ತಾಪಿಸಿದ್ದಾರೆ. ಡಾ: ವೀರೇಶ್ ವರದಿಯಲ್ಲಿರುವ ಅನೇಕ ಸಂಗತಿಗಳನ್ನು ಗಮನಿಸಿ, ಸರ್ಕಾರ ತನ್ನ ಬಜೆಟ್ ಭಾಷಣದಲ್ಲಿ, ರೈತರ ಪರವಾಗಿ ಈ ರೀತಿಯಾದ ಸಂದರ್ಭದಲ್ಲಿ ತಕ್ಷಣ ಪರಿಹಾರ ಕೊಡುವ ಬಗ್ಗೆ ನಾವು ಮುಂದಾಗುವುದರ ಜೊತೆಗೆ, ಈ ರೀತಿ ಅವರಿಗೆ ಉದ್ಯೋಗಾವಕಾಶಗಳನ್ನು ಸೃಷ್ಟಿಸುವುದಕ್ಕೆ ಬೇಕಾಗಿರುವ ರೀತಿಯಲ್ಲಿ ಸರ್ಕಾರ ಇನ್ನಷ್ಟು ಯೋಜನೆಗಳನ್ನು ತನ್ನ ಸ್ವಂತ ನಿಧಿಯಿಂದ, ಕೇಂದ್ರ ಸರ್ಕಾರದಿಂದ ಬರುವ ಹಣ ತೆಗೆದುಕೊಳ್ಳಲು ನಾವೆಲ್ಲರೂ ಜೊತೆ ಸೇರಿ ಪ್ರಯತ್ನಿಸೋಣ. ಆದರೆ, ತನ್ನ ಶಕ್ತಿಯಧಾರದ ಮೇಲೆ ತನ್ನ ಆರ್ಥಿಕ ಕ್ರೋಢೀಕರಣದಿಂದ ಅದನ್ನು ಹಾಕಿಕೊಳ್ಳುವುದಕ್ಕೆ ಪ್ರಯತ್ನ ಮಾಡಬೇಕು ಮತ್ತು ತಕ್ಷಣದಲ್ಲಿ ಇಂಥ ಘಟನೆಗಳು ನಡೆದ ಸಂದರ್ಭದಲ್ಲಿ ಸರ್ಕಾರ ಸ್ಪಂದಿಸಿ, ಸಮಾಜದಲ್ಲಿ, ರೈತರಲ್ಲಿ ಆತ್ಮ ವಿಶ್ವಾಸವನ್ನು ಮೂಡಿಸುವ ಪ್ರಯತ್ನ ಮಾಡಬೇಕೆಂದು ನಾನು ಆಗ್ರಹಿಸುತ್ತಿದ್ದೇನೆ.

ಶ್ರೀ ಶಿವಾನಂದ ಎಸ್. ಪಾಟೀಲ್ :– ಮಾನ್ಯ ಅಧ್ಯಕ್ಷರೆ............

ಛೇರ್ಮನ್ :– ಶಿವಾನಂದ ಪಾಟೀಲರೆ, ನೀವು ಜಗಳ ಹಚ್ಚಿ ಟೈಂ ತೆಗೆದುಕೊಳ್ಳುತ್ತೀರಿ. ಹಾಗೆ ಮಾಡಬೇಡಿ.

ಶ್ರೀ ಸಿ.ಆರ್. ಸಗೀರ್ ಅಹಮದ್:– ಈ ವಿಚಾರ ನಿಮಗೆ ಇವತ್ತೇ ಗೊತ್ತಾಯಿತೇ?

ಛೇರ್ಮನ್ :– ಅಲ್ಲಿ ಕುಳಿತಾಗ ಗೊತ್ತಾಯಿತು.

ಶ್ರೀ ಶಿವಾನಂದ ಎಸ್. ಪಾಟೀಲ್ :– ನಾನು ವಿನಂತಿ ಮಾಡುತ್ತೇನೆ, ನೀವು ನಮ್ಮ ಜೊತೆ ಇದ್ದೀರಿ. ನಾನು ನಿಮ್ಮ ಜೊತೆ ಜಗಳ ಆಡಿಲ್ಲ, ನನ್ನ ಜೊತೆ ನೀವೂ ಜಗಳವಾಡಿಲ್ಲ.

ಶ್ರೀ ಬಿ. ಹೆಚ್. ಬನ್ನಿಕೋಡ್ :– ನಿಮ್ಮದೆಲ್ಲಾ ಕೆಲಸವೆಂದರೆ ಏನಾದರೂ ಉದ್ಯೋಗ ಮಾಡಬೇಕಾದರೆ ಬಂಡವಾಳ ಬೇಕು, ನಿಮ್ಮದೇನೆಂದರೆ ದಿನಬೆಳಗಾದರೆ ಏನಾದರೊಂದು ಬಿಸಿನೆಸ್, ರಾಮ ಮಂದಿರ ಹಿಡಿದು ದಿನ ಬೆಳಗಾದರೆ ಬಿಸಿನೆಸ್ ಮಾಡುತ್ತೀರಿ.

ಶ್ರೀ ಶಿವಾನಂದ ಎಸ್. ಪಾಟೀಲ್ :– ನಾನು ರಾಮನೂ ಅಲ್ಲ, ರಹೀಮನೂ ಅಲ್ಲ, ನಾನು ಅದಕ್ಕಾಗಿ ವಿಶ್ವೇಶ್ವರ ಹೆಗಡೆಯವರಿಗೆ, ಇದನ್ನೇಕೆ ಡೈಲ್ಯೂಟ್ ಮಾಡಲು ಹೊರಟಿರಿ ಎಂದು ಹೇಳಿದ್ದು.

ಶ್ರೀ ಸಿ.ಆರ್. ಸಗೀರ್ ಅಹಮದ್ :– ನೀವು ಎಸ್.ಎಸ್. ಪಾಟೀಲರ ಜೊತೆ ಸೇರಿಕೊಳ್ಳಿ.

ಶ್ರೀ ಶಿವಾನಂದ ಎಸ್. ಪಾಟೀಲ್ (ತಿಕೋಟ) :– ಮಾನ್ಯ ಅಧ್ಯಕ್ಷರೆ, ನಾನು ಇವತ್ತಿನ ವಿಚಾರದಲ್ಲಿ ಇಷ್ಟೇ ಹೇಳಲು ಇಚ್ಛೆಪಡುತ್ತೇನೆ. ಕೊಪ್ಪಳದಲ್ಲಿ ಅಲ್ಲ ಮೊನ್ನೆ 3 ದಿವಸಗಳ ಹಿಂದೆ ಶಿವಮೊಗ್ಗ ಜಿಲ್ಲೆಯ ಸಾಗರ ತಾಲ್ಲೂಕಿನಲ್ಲಿ ಕೂಡ ಒಂದು ಆತ್ಮಹತ್ಯೆಯಾಯಿತು. ಅದನ್ನು ಉದಯಟೀವಿಯಲ್ಲಿ ಎಲ್ಲರೂ ನೋಡಿರಬಹುದು ಮಾನ್ಯ ಕಾಗೋಡು ತಿಮ್ಮಪ್ಪನವರು ಅಲ್ಲಿಗೆ ಹೋಗುತ್ತಾರೆಂದು ನಾನು ಆಸೆಪಟ್ಟಿದ್ದೆ. 3–4 ದಿವಸಗಳ ಹಿಂದೆ ಆಯಿತು. ಅದು ಪ್ರಾಯಶಃ ಗೃಹ ಸಚಿವರ ಗಮನಕ್ಕೆ ಬಂದಿರಬಹುದೆಂದು ನಾನು ಭಾವಿಸುತ್ತೇನೆ. ಆದರೆ, ಶ್ರೀವನಾಸ್ ಮುದ್ದಹನುಮೇಗೌಡರು ಸಬ್‌ಮಿಷನ್ ಮಾಡುವಾಗ ಒಂದು ಮಾತು ಹೇಳಿದರು. ಆತ್ಮಹತ್ಯೆ ಮಾಡಿಕೊಳ್ಳುವುದು ಅಪರಾಧ ಅದನ್ನು ಸರ್ವಥಾ ನಾನೂ ಒಪ್ಪುತ್ತೇನೆ, ನೀವೂ ಒಪ್ಪುತ್ತೀರಿ. ಆ ತರಹದ ಕಾನೂನನ್ನು ನಾವು ಸೃಷ್ಟಿ ಮಾಡಿದ್ದೇವೆ. ಆದರೂ ಸುದೈವದಿಂದ ನಿಮಗೆ ಈ ಸಂಗತಿ ಗೊತ್ತಿರಬಹುದು. ನೀವು, ನಾವು ಶಾಸಕರಾಗಿದ್ದಾಗ ಖರ್ಗೆಯವರು ವಿರೋಧ ಪಕ್ಷದ ನಾಯಕರಾಗಿದ್ದಾಗ ಈ ವಿಷಯವನ್ನು ಎತ್ತಿದ್ದರು. ನಂತರ ಹೌಸ್ ಕಮಿಟಿ ಕಾನ್‌ಸ್ಟಿಟ್ಯೂಟ್ ಮಾಡಲಾಗಿತ್ತು. ನಂತರ, ಇಡೀ ರಾಜ್ಯ ಪ್ರದಕ್ಷಿಣೆ ಹಾಕಿ ವರದಿ ಕೊಟ್ಟೆವು. ವರದಿ ಕೊಟ್ಟು ಇವತ್ತಿಗೆ ಪ್ರಾಯಶಃ 5 ವರ್ಷಗಳಾಗಿರಬಹುದು. ಅದರಲ್ಲಿ ಆತ್ಮಹತ್ಯೆ ಮಾಡಿಕೊಳ್ಳಿ ಎಂದು ಯಾರಿಗೂ ಹೇಳಿಲ್ಲ. ಆದರೆ, ನಿಜವಾಗಲೂ ಆತ್ಮಹತ್ಯೆ ಮಾಡಿಕೊಳ್ಳುವವರು ಯರೂ ಇಲ್ಲ ಎನ್ನುವ ಪರಿಶೀಲನೆ ಮಾಡುವುದರಲ್ಲಿ ಸ್ವಲ್ಪ ಎಡವಿದ್ದೇವೆನ್ನುವ ಮಾತನ್ನೂ ಕೂಡ ಆ ವರದಿಯಲ್ಲಿ ಸರ್ಕಾರದ ಗಮನಕ್ಕೆ ತರುವ ಪ್ರಯತ್ನ ಪಟ್ಟಿದ್ದೇವೆ. ಆದರೆ, ಇದನ್ನು ನಿವಾರಿಸಲು ಶಾಶ್ವತ ಪರಿಹಾರ ಕೊಡಬೇಕಲ್ಲವೇ? ಆ ದಿಶೆಯಲ್ಲಿ ಸರ್ಕಾರ ಸಾಗಬೇಕೋ ಬೇಡವೋ? ಸಾಗಿದೆಯೋ, ಇಲ್ಲವೋ ಎನ್ನುವ ಮೂಲಭೂತ ಪ್ರಶ್ನೆ ನಮ್ಮೆದುರಿಗಿದೆ. ಅದಕ್ಕೆ ಪದೇ ಪದೇ ನಾವು ಹೇಳುವುದೇನೆಂದರೆ, ರಾಜ್ಯದಲ್ಲಿ 84 ತಾಲ್ಲೂಕುಗಳು ಶಾಶ್ವತ ಬರಗಾಲಕ್ಕೆ ತುತ್ತಾಗುತ್ತವೆ. ಅದಕ್ಕೆ ಕಾರಣವಿಷ್ಟೆ, ಒಂದೇ ಒಂದು ಮುಂಗಾರಿ ಮಳೆ ಬರದಿರುವುದರಿಂದ ಮಾತ್ರ ಬರಗಾಲಕ್ಕೆ ತುತ್ತಾಗುತ್ತವೆ. ಆಕಸ್ಮಾತ್ ಹಿಂಗಾರಿ ಮಳೆ ಬರದಿದ್ದರೆ, ಸಂಪೂರ್ಣ ಬರಗಾಲಕ್ಕೆ ತುತ್ತಾಗುತ್ತವೆ. ಅದಕ್ಕೆ ನಾವು ಒಂದು ವಿನಂತಿ ಮಾಡಿಕೊಂಡಿದ್ದು, ಮೊನ್ನೆ ಕೂಡ ತಾವು ಗಮನಿಸಿದ್ದೀರೋ ಇಲ್ಲವೋ ಗೊತ್ತಿಲ್ಲ. ನಾನು ಹೇಳಿದೆ, ಒಂದು ಕಡೆ ನಾವು ಬೃಹತ್ ನೀರಾವರಿ ಯೋಜನೆಗಳನ್ನು ಕೈಗೆತ್ತಿಕೊಳ್ಳುತ್ತಿದ್ದೇವೆ. This is related to that ನಾನು ನಿಮಗೆ ಅದಕ್ಕೇ ಹೇಳುತ್ತಿದ್ದೇನೆ.

ಛೇರ್ಮನ್ :– ಡಿಮಾಂಡ್ ಮೇಲೆ ಮಾತನಾಡುವಾಗ ಮಾತನಾಡಿ.

ಶ್ರೀ ಶಿವಾನಂದ ಎಸ್. ಪಾಟೀಲ್ :– ಡಿಮಾಂಡ್ ಮೇಲೆ ಮಾತನಾಡುವಾಗ ಅದನ್ನು ಹೇಳುವುದಿಲ್ಲ. ಶಾಶ್ವತವಾಗಿ ಬರಗಾಲವನ್ನು ಹೋಗಲಾಡಿಸಲು ಕೆಲವು ಯೋಜನೆಗಳನ್ನಾದರೂ

ಸರ್ಕಾರ ಸೃಷ್ಟಿಸಬೇಕಾಗಿತ್ತು. ಸೃಷ್ಟಿ ಕೊಡುಗೆ ವಿರುದ್ಧ ನಾವು ಹೋಗುವುದಕ್ಕಾಗುವುದಿಲ್ಲ. ಸ್ವಲ್ಪ ಮಟ್ಟಿಗಾದರೂ ಪರಿಹಾರದ ದಿಕ್ಕಿನಲ್ಲಿ ಸಾಗಿದ್ದರೆ ಪ್ರಾಯಶಃ ಪರಿಹಾರ ಸಿಗುತ್ತಿತ್ತೋ ಏನೋ? ಆದರೆ ಮಾನ್ಯ ಮುದ್ದಹನುಮೇಗೌಡರಿಗೆ ಈ ವಿಚಾರದಲ್ಲಿ ಒಂದು ಹೇಳಲು ಇಚ್ಛೆಪಡುತ್ತೇನೆ. ರಾಜ್ಯಾಂಗದಲ್ಲಿ ಎಲ್ಲಿ ಕೂಡ ಯಾರನ್ನಾದರೂ ಕಿಡ್ನಾಪ್ ಮಾಡಿ ಎಂದು ಬರೆದಿಲ್ಲ. ಆದರೂ ಕೆಲವೊಬ್ಬರನ್ನು ಕಿಡ್ನ್ಯಾಪ್ ಮಾಡುತ್ತಾರೆ. ಆ ಸಂದರ್ಭದಲ್ಲಿ ಯಾವ ಸಂದಿಗ್ಧ ಪರಿಸ್ಥಿತಿಗೆ ಸರ್ಕಾರ ಸಿಕ್ಕಿಕೊಳ್ಳುತ್ತದೆ ಎನ್ನುವುದು ನಿಮಗೆ ಗೊತ್ತಿದೆ. ಆದರೆ, ನಾವು ಯಾವ ರೀತಿ, ಸಂಧಾನ ಮಾಡಿಸಿಕೊಂಡು, ಬಿಡಿಸಿಕೊಂಡು ಬರುತ್ತೇವೆ ಎಂಬುದು ಗೊತ್ತಿದೆ. ನಾವು ನಿಮ್ಮಲ್ಲಿ ಇಷ್ಟೇ ವಿನಂತಿ ಮಾಡುವುದು, ಯಾರನ್ನಾದರೂ ಯಾರಾದರೂ ಕಿಡ್ನ್ಯಾಪ್ ಮಾಡಿದಾಗ ನೀವು, ಸರ್ಕಾರದ ಪತಿಯಿಂದ ಮನೆತನಕ್ಕೆ ರಾಜ್ಯಕ್ಕೆ, ಸಮಾಜಕ್ಕೆ ಸಂದೇಶ ಕೊಡುತ್ತೀರಿ. ನಿಮ್ಮ ಜೊತೆಯಲ್ಲಿ ನಾವಿದ್ದೇವೆ, ನಿಮ್ಮನ್ನು ಬಿಡಿಸಿಕೊಂಡು ಬರುತ್ತೇವೆ ಎಂದು ಹೇಳುತ್ತೀರಲ್ಲ, ಹಾಗೆಯೇ ಈಗ ಆತ್ಮಹತ್ಯೆ ಮಾಡಿಕೊಳ್ಳುವ ರೈತರಿಗೆ ನಿಮ್ಮಿಂದ ಸ್ವಲ್ಪವಾದರೂ ಸಂದೇಶ ಹೋಗಲಿ. ಈಗಾಗಲೇ ಮಾನ್ಯ ಸಿಂಧ್ಯಾ ಅವರು ಸೋಮಶೇಖರ್‌ರವರು ತೋಟಗಾರಿಕೆಯಲ್ಲಿ, ಕೃಷಿಯಲ್ಲಿ ಎಷ್ಟು ಹಾನಿಯಾಗಿದೆ ಎಂದು ಹೇಳಿದರು. ಆದರೆ, ಸರ್ಕಾರ ರೈತರ ಪರ ಇದೆ ರೈತರು ಆತ್ಮಹತ್ಯೆ ಮಾಡಿಕೊಳ್ಳುವ ಅವಶ್ಯಕತೆ ಇಲ್ಲ, ನಾವು ನಿಮ್ಮ ಜೊತೆಯಲ್ಲಿದ್ದೇವೆ, ನಿಮಗೆ ಯಾವ ರೀತಿ ಪರಿಹಾರ ಬೇಕೆಂದು ಕೇಳುತ್ತಿಲ್ಲ. ನೀವು 127 ಕೋಟಿ ರೂ. ಬಡ್ಡಿಯನ್ನು ಮನ್ನಾ ಮಾಡಿದ್ದೇವೆಂದು ಹೇಳಬಹುದು. ಅದು ಕೆಲವೊಬ್ಬರಿಗೆ ಮಾತ್ರ ಸೀಮಿತವಾಗಿ ಸಿಗುವ ಲಾಭ ಆದರೆ, ಇಡೀ ರೈತ ಸಮುದಾಯಕ್ಕೆ ಅದು ಸಿಗಬೇಕು. ಈಗಾಗಲೇ ಮೊನ್ನೆ ಮಾನ್ಯ ಮುಖ್ಯಮಂತ್ರಿಗಳು ಭಾಷಣ ಮಾಡಿದರು. ಫಿಸ್ಕಲ್ ಡಿಫಿಸಿಟ್ ಅನ್ನು ಅರೆಸ್ಟ್ ಮಾಡಿದ್ದೇವೆ, ನಾನ್-ಪ್ಲಾನ್ ಎಕ್ಸ್‌ಪೆಂಡಿಚರ್ ಅನ್ನು 2000 ಕೋಟಿ ರೂ. ಗಳವರೆಗೆ ಕಡಿಮೆ ಮಾಡಿದ್ದೇವೆಂದು ಹೀಗೆ 4-6 ಮೆಷರ್ಸ್ ಅನ್ನು ಇಲ್ಲಿ ಹೇಳಿದರು. ಅಲ್ಲದೆ ರೆವಿನ್ಯೂ ರೆಸೀಟ್ಸ್ ಇನ್‌ಕ್ರೀಸ್ ಆಗಿದೆ ಎಂದು ಹೇಳಿದರು. ನಿಮ್ಮ ಕಡೆ ಇಷ್ಟೊಂದು ಆದಾಯ ಇದ್ದಾಗ, ರೈತರಿಗೋಸ್ಕರ 200-300 ಕೋಟಿ ರೂಗಳ ಯೋಜನೆಯನ್ನಾದರೂ ತ್ವರಿತವಾಗಿ ಅನೌನ್ಸ್ ಮಾಡುವ ಕಾರ್ಯಕ್ರಮ ಹಾಕಿಕೊಂಡರೆ ನಿಜವಾಗಲೂ ಆತ್ಮಹತ್ಯೆ ಪ್ರಕರಣಗಳು ಇಲ್ಲಿಗೇ ನಿಲ್ಲುತ್ತವೆ. ಇಲ್ಲದಿದ್ದರೆ ನಿರಂತರವಾಗಿ ಇದು ನಡೆಯುತ್ತದೆ. ಇವತ್ತು ಕೇಂದ್ರ ಸರ್ಕಾರ ಏನು ಮಾಡಿತು ಎನ್ನುವ ದಿಸೆಯಲ್ಲಿ ನನ್ನ ಎರಡು ಮಾತಿಲ್ಲ. ಅವರೂ ಮಾಡಬೇಕು ಇವತ್ತು ಹೇಗೆ ಯಾರನ್ನಾದರೂ ಯಾರಾದರು ಕಿಡ್ನ್ಯಾಪ್ ಮಾಡಿದರೆ, ಇವತ್ತು 32 ಕೋಟಿ ರೂ.ಗಳನ್ನು ವೀರಪ್ಪನ್ ಹಿಡಿಯಲು ಖರ್ಚು ಮಾಡಿದ್ದೀರಿ ಆದರೆ, ಇವತ್ತು ರೈತರ ಬಡ್ಡಿ ಮನ್ನಾ ಮಾಡುವ ಕಾರ್ಯಕ್ರಮವಿದ್ದರೂ ಕೂಡ ಆತ್ಮಹತ್ಯೆ ಮಾಡಿಕೊಳ್ಳುವ ಸಂದಿಗ್ಧ ಪರಿಸ್ಥಿತಿ ಉದ್ಭವವಾಗದಿರುವ ಹಾಗೆ ಲಾಂಗ್ ಟರ್ಮ್ ಮೆಷರ್‌ಗಳನ್ನು ಸರ್ಕಾರ ಘೋಷಣೆ ಮಾಡಿದೆಯೇ ಎಂದು ನಾನು ತಮ್ಮ ಮೂಲಕ ಅವರನ್ನು ಕೇಳಬಯಸುತ್ತೇನೆ. ಇದನ್ನೊಂದಾದರೂ ಮಾಡಲೆಂದು ನಾನು ತಮ್ಮ ಮೂಲಕ ಕೇಳುತ್ತೇನೆ. ಇಷ್ಟು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಜಿ.ಎಸ್. ಗಡ್ಡದೇವರ ಮಠ್ (ಶಿರಹಟ್ಟಿ) :- ಮಾನ್ಯ ಅಧ್ಯಕ್ಷರೆ, ಕೊಪ್ಪಳ ಜಿಲ್ಲೆಯಲ್ಲಿ ನಡೆದ ಘಟನೆ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಈ ವಿಚಾರದಲ್ಲಿ ನಾನೂ ಸಹ ವಿಷಾದ ವ್ಯಕ್ತಪಡಿಸುತ್ತೇನೆ. ಆದರೆ, ಬಹಳ ಮುಖ್ಯವಾಗಿ ನನ್ನ ತಾಲ್ಲೂಕಿನಲ್ಲಿ ನಡೆದ ಕೆಲವು ಸಂಗತಿಗಳನ್ನು ಸಭೆಯ ಗಮನಕ್ಕೆ ತರಲು ಸಾಕಷ್ಟು ಪ್ರಯತ್ನ ಮಾಡಿದರೂ ಇಲ್ಲಿ ವೇಳೆ ಸಿಗದಿದ್ದರಿಂದ ಅಷ್ಟೇ ವಿಷಾದದಿಂದ ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ. ನಿನ್ನೆ ತಾನೇ ನನ್ನ ತಾಲ್ಲೂಕಿನಲ್ಲಿ ಅನೇಕ ಜನ ರೈತರು ಚಾಪಡಿಗೆ

ಕೀಲಿ ಹಾಕುವ ಸಂದರ್ಭ ಅಥವಾ ತಾಲ್ಲೂಕು ಕಛೇರಿಗೆ ಕೀಲಿ ಹಾಕುವ ಸಂದರ್ಭದಲ್ಲಿ ಮುಂದಾಗಿದ್ದಾರೆ. ಅದಕ್ಕೆ ಕಾರಣವನ್ನು ಅವರು ಹೇಳುವುದೇನೆಂದರೆ, ಈಗ 31ನೇ ತಾರೀಖಿಗೆ ಏನು ಬೆಳೆ ವಿಮೆಗೆ ಪ್ರೀಮಿಯಂ ತುಂಬುವ ಕಡೆಯ ದಿನಾಂಕವನ್ನು ನಿಗದಿಪಡಿಸಲಾಗಿತ್ತು ಅದನ್ನು ವಿಸ್ತರಿಸುವ ಬಗ್ಗೆ ಕೇಳಿದ್ದಾರೆ. ಆದರೆ, ನಾನು ಇವತ್ತಿನ ಸಂದರ್ಭದಲ್ಲಿ ಸ್ವಾಗತಿಸುತ್ತೇನೆ. ಮಾನ್ಯ ಮುಖ್ಯಮಂತ್ರಿಗಳು ಉತ್ತರಿಸುವ ಸಂದರ್ಭದಲ್ಲಿ ಒಂದು ಮಾತನ್ನು ಹೇಳಿದ್ದಾರೆ.

ಛೇರ್ಮನ್ :– ಅದರ ಬಗ್ಗೆ ಪ್ರಾಸಂಗಿಕವಾಗಿ ಹೇಳಿ.

ಶ್ರೀ ಗಡ್ಡದೇವರ ಮಠ್ :– ಆದರೆ, ಅದಕ್ಕೊಂದು ಏನಾದರೂ ವಿವರಣೆ ಹೇಳಿದರೆ, ಅಲ್ಲಿಯ ಜನರಿಗೆ ತೃಪ್ತಿಪಡಿಸಲು, ಸಮಾಧಾನ ಹೇಳಲು ಸಾಧ್ಯವಾಗುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು) :– ಮಾನ್ಯ ಅಧ್ಯಕ್ಷರೆ, ಅದರ ಬಗ್ಗೆ ಅಗ್ರಿಕಲ್ಚರ್ ಮಿನಿಸ್ಟರ್‌ರವರು ಎಕ್ಸ್‌ಟೆನ್‌ಷನ್‌ಗೆ ಬರೆದಿದ್ದಾರೆ. ಅದನ್ನು ನಿರೀಕ್ಷೆ ಮಾಡುತ್ತಿದ್ದೇವೆ. ಮೊನ್ನೆ ಡೆಲಿಗೇಷನ್ ಹೋದಾಗಲೂ ಕೂಡ ಮಾನ್ಯ ರಾಜ್‌ನಾಥ್‌ಸಿಂಗ್‌ರವರನ್ನು ರಿಕ್ವೆಸ್ಟ್ ಮಾಡಿದ್ದೆವು. ಒಂದು ತಿಂಗಳು ಎಕ್ಸ್‌ಟೆನ್‌ಷನ್‌ಗೆ ಅವರನ್ನು ಕೋರಿದ್ದೇವೆ. ಅವರು ಕನ್‌ಸಿಡರ್ ಮಾಡುತ್ತೇವೆಂದು ಹೇಳಿದ್ದಾರೆ. ಅದಕ್ಕಾಗಿ ಅವರ ಆದೇಶವನ್ನು ಕಾಯುತ್ತಿದ್ದೇವೆ.

ಛೇರ್ಮನ್ :– ಇಲ್ಲಿಗೆ ಚರ್ಚೆ ಮುಗಿಯಿತೆಂದು ಭಾವಿಸುತ್ತೇನೆ. ಈಗ ಮಾನ್ಯ ಮಂತ್ರಿಗಳು ಉತ್ತರ ಹೇಳುತ್ತಾರೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ :– ಮಾನ್ಯ ಅಧ್ಯಕ್ಷರೆ, ಜಿಲ್ಲಾಧಿಕಾರಿಗಳ.....

ಛೇರ್ಮನ್ :– ನಾನು ಪದೇ ಪದೇ ಹೇಳುವುದಕ್ಕಾಗುವುದಿಲ್ಲ. ದಯವಿಟ್ಟು ಕುಳಿತುಕೊಳ್ಳಿ. ಅದರ ಪೂರ್ವದಲ್ಲಿ, ನಾನು ಈ ವಿಷಯದ ಮೇಲೆ ಮಾತನಾಡಲು ಬಯಸಿದ್ದೆ. ದಯವಿಟ್ಟು ಕ್ಷಮಿಸಬೇಕು. ಇದು ಗಂಭೀರವಾದ ವಿಷಯ. ವರ್ಷದಿಂದ ವರ್ಷಕ್ಕೆ ಈ ಪ್ರಕರಣಗಳು ಜಾಸ್ತಿಯಾಗುತ್ತಿವೆ. ಪ್ರತಿಯೊಂದು ಸಾವನ್ನೂ ಸಹ ಆತ್ಮಹತ್ಯೆ ಎಂದು ಪರಿಗಣನೆ ಮಾಡುವುದು ಅಥವಾ ಸಂಬಂಧವಿಲ್ಲವೆಂದು ಹೇಳುವ ಪ್ರವೃತ್ತಿಗೆ ಅವಕಾಶ ಕೊಡಬಾರದು. ನಿಜವಾಗಲೂ ಯಾರಿಗೆ ಸಿಗಬೇಕಾಗಿದೆ ಅವರಿಗೆ ದೊರೆಯುವ ಪ್ರಯತ್ನ ಮಾಡಬೇಕೆಂದು ಸರ್ಕಾರಕ್ಕೆ ಮನವಿ ಮಾಡುತ್ತೇನೆ. ಅವರು ಬಹಳ ಕಷ್ಟದಲ್ಲಿದ್ದಾರೆ. ಒಂದೇ ಕಾರಣಕ್ಕಾಗಿ ಇದು ಆಗಿದೆ ಎಂದು ಹೇಳುವುದು ಕಷ್ಟ ಕೇಂದ್ರ ಸರ್ಕಾರ ರಾಜ್ಯ ಸರ್ಕಾರ ಅಲ್ಲ, ಜಾಗತಿಕ ಪರಿಸ್ಥಿತಿ, ಉದಾರೀಕರಣದ ನೀತಿಯಲ್ಲಿ ನಾವು ಹೋಗುವಾಗ ಬಹಳಷ್ಟು ಮಟ್ಟಿಗೆ ಇದು ಕಾರಣವಾಗಿದೆ. ಇರುವಂಥ ನೈಸರ್ಗಿಕ ಪರಿಸ್ಥಿತಿಯು ಕಾರಣವಾಗಿದೆ, ರೈತ ತನ್ನ ಆತ್ಮಸ್ಥೈರ್ಯವನ್ನು ಕಳೆದುಕೊಳ್ಳುವಂಥ ಪರಿಸ್ಥಿತಿ ಇವತ್ತು ಬಂದಿದೆ, ಬಹುತೇಕ ಸದನದ ಅಭಿಪ್ರಾಯವನ್ನು ಗಣನೆಗೆ ತೆಗೆದುಕೊಂಡು ಸರ್ಕಾರ ಉತ್ತರ ಕೊಡುತ್ತದೆ ಎಂದು ನಾನು ಭಾವಿಸುತ್ತೇನೆ.

+ **ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ (ಕಂದಾಯ ರಾಜ್ಯ ಸಚಿವರು)** :– ಮಾನ್ಯ ಛೇರ್ಮನ್‌ರವರೇ, ಸುಮಾರು ಎರಡು ತಾಸುಗಳ ಕಾಲ ಕೊಪ್ಪಳ ಜಿಲ್ಲೆಯಲ್ಲಿ ನಡೆದಂಥ ಘಟನೆಯ ಬಗ್ಗೆ ವಿರೋಧ ಪಕ್ಷದ ನಾಯಕರಾದ ಶ್ರೀ ಜಗದೀಶ್ ಶೆಟ್ಟರ್‌ರವರು, ಸೋಮಶೇಖರ್‌ರವರು, ಪಿ.ಜಿ.ಆರ್. ಸಿಂಧ್ಯಾರವರು, ಮುದ್ದಹನುಮೇಗೌಡರವರು, ಕರಡಿ ಸಂಗಣ್ಣನವರು, ವಿಶ್ವೇಶ್ವರ ಹೆಗಡೆಯವರು, ಶಿವಾನಂದ ಪಾಟೀಲ್‌ರವರು, ಗಡ್ಡದೇವರ್ ಮಠ್‌ರವರು, ಇವರೆಲ್ಲರೂ ಇದರ ಬಗ್ಗೆ ಸಾಕಷ್ಟು ತಿಳಿಸಿದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್ :- ಕೊನೆಯದಾಗಿ ಅಧ್ಯಕ್ಷ ಸ್ಥಾನದಲ್ಲಿ ಕುಳಿತಿರುವವರು ತಮಗೆ ಬಹಳ ಚೆನ್ನಾಗಿ ಹೇಳಿದರು, ಅದನ್ನೇ ನೀವು ಬಿಟ್ಟುಬಿಟ್ಟಿರಿ.

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ :- ತಾವೂ ಕೂಡ ಹೇಳಿದಿರಿ, ಇವತ್ತು ಕೊಪ್ಪಳ ಜಿಲ್ಲೆಯಲ್ಲಿ ಕುಷ್ಟಗಿ ತಾಲ್ಲೂಕಿನ ಎಂ.ರಾಂಪುರ ಗ್ರಾಮದಲ್ಲಿ ನಿನ್ನೆ ಬೆಳಗಿನ ಜಾವ 4–30 ಗಂಟೆಗೆ ಇದು ನಡೆದಂಥ ದುರ್ಘಟನೆ. ಈ ಕುಟುಂಬದಲ್ಲಿ ತಂದೆ-ತಾಯಿ ಹಾಗೂ ಮಕ್ಕಳು ಸೇರಿದಂತೆ ಒಟ್ಟು ಎಂಟು ಮಂದಿ ಇರತಕ್ಕಂತ ಕುಟುಂಬ. ಇದರಲ್ಲಿ ನಾಲ್ಕು ಜನ ಗಂಡು ಮಕ್ಕಳು, ನಾಲ್ಕು ಜನ ಹೆಣ್ಣು ಮಕ್ಕಳು ಹಾಗೂ ತಂದೆ-ತಾಯಿ ಇರುವಂಥ ಕುಟುಂಬ. ಇವತ್ತು ಇಲ್ಲಿ ಮಾತನಾಡಿದ ಮಾನ್ಯ ಸದಸ್ಯರುಗಳು ಸಾಕಷ್ಟು ಅವರ ಬಗ್ಗೆ ತಿಳಿಸಿದರು. ಅವರಿಗೆ ಬಡತನ ಇತ್ತು, ರೈತರಾಗಿದ್ದರು. ಸಾಲ ಹೆಚ್ಚಿಗೆ ಆಗಿತ್ತು, ಹಸಿವಿನಿಂದ ಬಳಲುತ್ತಿದ್ದರು, ಸುಮಾರು 2–3 ದಿನಗಳಿಂದಲೂ ಅವರ ಮನೆಯಲ್ಲಿ ಒಲೆಯನ್ನೇ ಹಚ್ಚಿಲ್ಲ ಎಂದು ಪತ್ರಿಕೆಯಲ್ಲಿ ಬಂದಂಥ ವಿಷಯವನ್ನು ಸಹ ತಾವು ಹೇಳಿದಿರಿ. ನಾನೂ ಕೂಡ ಈ ದಿವಸದ ಎಲ್ಲಾ ಪತ್ರಿಕೆಗಳನ್ನು ಓದಿದ್ದೇನೆ. ಏಕೆಂದರೆ, ಈ ಎಂ. ರಾಂಪುರ ನನ್ನ ಮತಕ್ಷೇತ್ರದ ವ್ಯಾಪ್ತಿಯಲ್ಲಿ ಬರತಕ್ಕಂಥ ಪಕ್ಕದ ಹಳ್ಳಿ ನಾನು ಈ ಹಿಂದೆ ಈ ಗ್ರಾಮಕ್ಕೆ ಎರಡು ಸಲ ಭೇಟಿ ಕೊಟ್ಟಿದ್ದೆ ಬರಗಾಲ ಕಾಮಗಾರಿಯಲ್ಲಿ ಎರಡು ಕಾಮಗಾರಿಗಳನ್ನು ನಾನು ಹಾಗೂ ಸ್ಥಳೀಯ ಶಾಸಕರು ಹೋಗಿ ವಿಸಿಟ್ ಮಾಡಿ ಕೆಲಸ ಪ್ರಾರಂಭ ಮಾಡಿಸಿದ್ದು ನಿಜ. ಪ್ರಜಾವಾಣಿ ಹಾಗೂ ಕನ್ನಡಪ್ರಭ ಪತ್ರಿಕೆಯಲ್ಲಿ ಈ ಬಗ್ಗೆ ಒಂದು ವರದಿಯನ್ನು ಕೊಟ್ಟಿದ್ದು, ಉಳಿದ ಪತ್ರಿಕೆಗಳಲ್ಲಿ ಹಸಿವಿನಿಂದಾಗಲಿ ಅಥವಾ ಒಲೆಯಲ್ಲಿ ಬೆಂಕಿ ಹಾಕಿಲ್ಲ ಎಂದು ಎಲ್ಲೂ ವರದಿ ಮಾಡಿಲ್ಲ. ಇದು ವರದಿ ಬಂದಂಥ ವಿಷಯ. ಇವತ್ತು ಅಲ್ಲಿರತಕ್ಕಂಥ ನತದೃಷ್ಟ ತಂದೆಗೆ 70 70 ವರ್ಷ, ತಾಯಿಗೆ 50 ವರ್ಷ, ಆ ಒಂದು ಗ್ರಾಮದಲ್ಲಿ ಅವರು ಚಿಕ್ಕದಾದ ಕಿರಾಣಿ ಅಂಗಡಿ ಇಟ್ಟುಕೊಂಡು ಅಂದರೆ ಹೋಟೆಲ್ ಇಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದರು. ಇವರ ಕುಟುಂಬದ ನಾಲ್ಕು ಜನ ಗಂಡು ಮಕ್ಕಳಲ್ಲಿ ಹಾಗೂ ನಾಲ್ಕು ಜನ ಹೆಣ್ಣು ಮಕ್ಕಳಲ್ಲಿ ಕೇವಲ ಒಬ್ಬ ಹೆಣ್ಣುಮಕ್ಕಳಿಗೆ ಮದುವೆಯಾಗಿತ್ತು, ಮೊದಲನೆಯದಾಗಿ ಸತ್ತಂಥ ಶ್ರೀಮತಿ ಈರಬಸಮ್ಮನವರು ಸುಮಾರು 20,25 ವರ್ಷಗಳಿಂದ ಮೂಲವ್ಯಾಧಿ ಹಾಗೂ ಕೆಮ್ಮು ಇತರ ಖಾಯಿಲೆಗಳಿಂದ ಬಾಧೆಪಡುತ್ತಿದ್ದರು. ಇವರ ಮನೆಯವರು ಎಲ್ಲರೂ ದುಡಿದು ಇವರ ಆರೋಗ್ಯ ಸುಧಾರಣೆಗಾಗಿ ಎಷ್ಟೇ ಹಣ ಖರ್ಚು ಮಡಿದರೂ ಆ ತಾಯಿಗೆ ಗುಣ ಮುಖವಾಗಲಿಲ್ಲ. ಅವರು ಎಷ್ಟೇ ಪ್ರಯತ್ನಪಟ್ಟರೂ ಅದು ಸಾಧ್ಯವಾಗಲಿಲ್ಲ. ಸುಮಾರು 20 ವರ್ಷಗಳಿಂದ ನಾವು ತೋರಿಸಿದರೂ ಆ ತಾಯಿಗೆ ಆರಾಮಾಗಲಿಲ್ಲವೆಂದು ಅವರೆಲ್ಲರು ಬಹಳ ನೊಂದಿದ್ದರು. ಆ ತಾಯಿ ಈರಬಸಮ್ಮನವರು ಬೆಳಿಗಿನ ಜಾವ ನಾಲ್ಕು ಮೂವತ್ತು ಗಂಟೆಗೆ ವಿಧಿವಶರಾದರು. ಆ ಸಂದರ್ಭದಲ್ಲಿ ಮೂರು ಜನ ತಮ್ಮಂದಿರು ಹಾಗೂ ಮೂರು ಜನ ತಂಗಿಯರು ಒಟ್ಟು ಆರು ಜನ ಮನೆಯಲ್ಲಿ ಇದ್ದರು. ಅದರಲ್ಲಿ ಒಬ್ಬ ಮಹಿಳೆಗೆ ಮದುವೆಯಾಗಿದ್ದು ಆಕೆ ಮದುವೆಯಾದ ಮೇಲೆ ಗಂಡನನ್ನು ಬಿಟ್ಟು ತಾಯಿಯ ಮನೆಯಲ್ಲಿಯೇ ಇದ್ದಳೆಂಬ ವರದಿ. ನಮ್ಮ ಪಕ್ಕದ ಹಳ್ಳಿಯಾದ್ದರಿಂದ ಅದು ನಮಗೆ ಗೊತ್ತಿದ್ದ ವಿಷಯ. ಇವರೆಲ್ಲರೂ ಈರಬಸಮ್ಮನವರು ಮರಣ ಹೊಂದಿದತಕ್ಷಣವೇ ಬಹಳ ಜಿಗುಪ್ಸೆಗೊಂಡು, ಇಷ್ಟೆಲ್ಲಾ ನಾವು ಆಸ್ಪತ್ರೆಗೆ ತೋರಿಸಿ ಹಣ ಖರ್ಚು ಮಾಡಿದರೂ ನಮ್ಮಕ್ಕ ಉಳಿಯಲಿಲ್ಲ, ನಾವು ಇಷ್ಟೆಲ್ಲಾ ಖರ್ಚು ಮಾಡಿದ್ದು ವೇಸ್ಟ್ ಆಯಿತು, ಅವರಿಗೋಸ್ಕರ ಉಳಿದವರು ಇದುವರೆವಿಗೂ ಇನ್ನೂ ಮದುವೆಯಾಗಿಲ್ಲ ಎಂದು ಹತಾಶರಾಗಿದ್ದರು. ಮುಖ್ಯವಾದ ಅಂಶ ಏನೆಂದರೆ, ಉಳಿದಿದ್ದ 6–7 ಜನರಿಗೆ ಮದುವೆಯಾಗಿರಲಿಲ್ಲ. ಏಕೆಂದರೆ ಆ

ತಾಯಿಗೆ ಅರಾಮ ಆದರನೇ ನಾವು ಮದುವೆಯಾಗುವುದು ಎಂದು ಶಮ್ಮನವರು ಹಾಗೂ ತಂಗಿಯರ ಅಭಿಪ್ರಾಯವಾಗಿತ್ತು ಹಾಗಾಗಿ ಈ ದುರ್ಘಟನೆಯಾದ ತಕ್ಷಣ ಅಲ್ಲಿರತಕ್ಕಂಥ ಕ್ರಿಮಿನಾಶವನ್ನು ತೆಗೆದುಕೊಂಡು ಅವರೆಲ್ಲರೂ ಆತ್ಮಹತ್ಯೆ ಮಾಡಿಕೊಂಡಿರುವುದು ನಿಜ. ಇದರ ಬಗ್ಗೆ ನಮ್ಮದೇನೂ ಇಲ್ಲ. ಈ ವಿಷಯ ತಿಳಿದಾಕ್ಷಣ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಅಸಿಸ್ಟೆಂಟ್ ಕಮಿಷನರ್ ಅವರು, ಅಲ್ಲಿರತಕ್ಕಂಥ ಜೆಡ್‌ಪಿ ಮೆಂಬರ್ ಇರಬಹುದು, ಟಿಪಿ ಮೆಂಬರ್ ಇರಬಹುದು, ಇವರೆಲ್ಲರೂ ಸ್ಥಳಕ್ಕೆ ಹೋಗಿ ವಿಸಿಟ್ ಮಾಡಿದ್ದಾರೆ. ವಿಧಾನಸಭಾ ಅಧಿವೇಶನ ನಡೆಯುತ್ತಿದ್ದುದರಿಂದ ಆ ಭಾಗದ ಎಲ್ಲಾ ಶಾಸಕರು ಇಲ್ಲಿಯೇ ಇದ್ದರು. ಅವರು ಈ ವಿಷಯವನ್ನು ನಿನ್ನೆ ರೈಸ್ ಮಾಡಿದರು, ಅವರು ಇವತ್ತು ತಕ್ಷಣ ಜಿಲ್ಲೆಗೆ ಹೋಗಿ ಆ ಒಂದು ಕುಟುಂಬಕ್ಕೆ ಸಾಂತ್ವನ ಹೇಳಿದ್ದಾರೆ. ನಾನೂ ಕೂಡ ಮಾರನೇ ದಿವಸ ಹೋಗಬೇಕೆಂದು ಇದ್ದದ್ದು ನಿಜ, ನಾನು ಹೋಗಬಾರದು ಎಂದಲ್ಲ, ವಿಧಾನಸಭಾ ಅಧಿವೇಶನ ಇದ್ದ ಕಾರಣ ಇವತ್ತು ಹೋಗಬೇಕಾದುದು ನಮ್ಮೆಲ್ಲರ ಕರ್ತವ್ಯ. ಇವತ್ತು ಎಲ್ಲೆಲ್ಲಿ ಇಂಥ ಅಹಿತಕರ ಘಟನೆ ನಡೆಯುತ್ತದೆ, ಅಂಥ ಇರತಕ್ಕಂಥ ಎಲ್ಲಾ ಜಿಲ್ಲಾ ಸಚಿವರು ಪ್ರಮಾಣಿಕವಾಗಿ ಹೋಗುತ್ತಾರೆ, ಭೇಟಿ ಕೊಡುತ್ತಾರೆ, ಪ್ರತಿಯೊಂದೂ ವಿಷಯವನ್ನು ನೋಡುತ್ತರೆ. ನಾನೂ ಕೂಡ ನಾಳೆ ಅಲ್ಲಿಗೆ ಭೇಟಿ ಕೊಡುತ್ತೇನೆ. ಏಕೆಂದರೆ, ಅದು ನನ್ನ ಜಿಲ್ಲೆಯಾಗಿದ್ದು ಆ ಹಳ್ಳಿ ನನ್ನ ಪಕ್ಕದ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವುದರಿಂದ ನನಗೆ ಇವತ್ತು ಬಹಳ ದುಃಖವಾಗುತ್ತದೆ. ಅವರು ಇಂಥ ಒಂದು ಕೆಟ್ಟ ಮನಸ್ಸು ಮಾಡಿದರಲ್ಲಾ ಎಂದು ನನಗೂ ಕೂಡ ಬಹಳ ನೋವು ಆಗುತ್ತದೆ. ಅದಕ್ಕೆ ನಾನು ನಾಳೆ ಅಲ್ಲಿಗೆ ಭೇಟಿ ಕೊಟ್ಟು ಇನ್ನು ಅಲ್ಲಿರತಕ್ಕಂಥ ಅವರ ತಂದೆ–ತಾಯಿಯಂದಿರು ಮತ್ತು ಇನ್ನೊಬ್ಬ ಮಗ ಏನು ಇದ್ದಾರೆ ಅವರಿಂದ ಕೂಡ ವಾಸ್ತವಿಕವಾಗಿ ಅಲ್ಲಿ ಏನು ಆಯಿತು ಎಂಬ ಬಗ್ಗೆ ಮಾಹಿತಿ ತೆಗೆದುಕೊಳ್ಳುತ್ತೇನೆ. ಇದಲ್ಲದೇ ಮಾನ್ಯ ಮುಖ್ಯಮಂತ್ರಿಗಳಿಗೂ ಕೂಡ ವಿಷಯ ತಿಳಿಸಿದ್ದೇನೆ.

(ಉಪಾಧ್ಯಕ್ಷರು (ಮನೋಹರ್ ಹೆಚ್. ತಹಶೀಲ್ದಾರ್) ಅಧ್ಯಕ್ಷ ಸ್ಥಾನವನ್ನಲಂಕರಿಸಿದರು.)

ಅವರು ಕೂಡ ವಿಷಯವನ್ನು ಆಲಿಸಿದ್ದಾರೆ, ನಾನು ಮತ್ತು ಸ್ಥಳೀಯ ಶಾಸಕರು ಇದಕ್ಕಾಗಿ ತಮ್ಮ ವಿಶೇಷ ಅನುದಾನದಲ್ಲಿ ಹೆಚ್ಚಿಗೆ ಹಣ ಕೊಡಬೇಕೆಂದು ಮನವಿ ಮಾಡಿಕೊಂಡಿದ್ದೇವೆ. ಮಾನ್ಯ ಕರಡಿ ಸಂಗಣ್ಣನವರು ಹೇಳಿದ ಪ್ರಕಾರ, ಅಲ್ಲಿ ಮುಖ್ಯಸ್ಥರು ಯಾರು ಇದ್ದಾರೆ ಆ ಕುಟುಂಬದವರಿಗೆ ಈಗಾಗಲೇ ನಿನ್ನೆ ದಿವಸ ಹತ್ತು ಸಾವಿರ ರೂಪಾಯಿಗಳ ಚೆಕ್ ಅನ್ನು ಕೊಡಲಾಗಿದೆ. ಇನ್ನೂ ಇಬ್ಬರಿಗೆ ಕೊಡಬೇಕೆನ್ನು ಉದ್ದೇಶ ಇದ್ದು ಅದರ ಬಗ್ಗೆ ನಾಳೆ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೇವೆ. ಈ ವಿಷಯದಲ್ಲಿ ನಾನು ಮುದಾಂ ಅಲ್ಲಿಗೆ ಹೋಗಿ ಎಲ್ಲಾ ವಿಷಯ ತಿಳಿದುಕೊಂಡು ಹೇಳಲಿಕ್ಕೆ ಅನುಕೂಲವಾಗುತ್ತಿತ್ತು. ಆದರೂ ತಾವೇನು ಇವತ್ತು ಸದನದಲ್ಲಿ ಹೇಳಿದ್ದೀರಿ ಹಾಗೂ ನನ್ನ ಹತ್ತಿರ ಬಂದಂಥ ವರದಿ ನಾನು ಅಲ್ಲಿರತಕ್ಕಂಥ ಚುನಾಯಿತ ಪ್ರತಿನಿಧಿಗಳೊಡನೆ ಚರ್ಚೆ ಮಾಡಿದ್ದು, ಎಲ್ಲಾ ವಿಷಯಗಳನ್ನು ಸದನಕ್ಕೆ ಹೇಳಿದ್ದೇನೆ. ಇವತ್ತು ಬರಗಾಲ ಕಾಮಗಾರಿ ಎಲ್ಲಾ ಹೆಚ್ಚಿನ ರೀತಿಯಲ್ಲಿ ನಡೆಯಬೇಕೆನ್ನುವುದೇ ಈ ಮನೆಯ ಬಹುತೇಕ ಸದಸ್ಯರ ಅಭಿಪ್ರಾಯವಾಗಿದೆ. ನಾನು ಇದನ್ನು ಒಪ್ಪಿಕೊಳ್ಳುತ್ತೇನೆ, ಹೋದ ಸಲ ನಾವು ಸುಮಾರು 159 ತಾಲ್ಲೂಕುಗಳನ್ನು ಬರಗಾಲವೆಂದು ಘೋಷಣೆ ಮಾಡಿದ್ದೆವು. ಮಾನ್ಯ ಪಿ.ಜಿ.ಆರ್.ಸಿಂಧ್ಯಾರವರು ಕೇವಲ 126 ತಾಲ್ಲೂಕುಗಳಲ್ಲಿ ಇವತ್ತು ಘೋಷಣೆ ಮಾಡಿರುವುದು ಬಹಳ ಕಡಿಮೆಯಾಯಿತು ಎಂದು ಹೇಳಿದರು. ರಾಜ್ಯ ಮಟ್ಟದಲ್ಲಿ ಇರತಕ್ಕಂಥ ಅಡಿಷನಲ್ ಚೀಫ್ ಸೆಕ್ರೆಟರಿ, ಸೆಕ್ರೆಟರಿ ಮತ್ತು ಡೆವಲೆಪ್‌ಮೆಂಟ್ ಕಮೀಷನರ್ ರೆವಿನ್ಯೂ ಕಮಿಷನರ್ ಮತ್ತು ಹವಮಾನ ತಜ್ಞರು, ಪ್ರತಿವಾರ ಒಂದು ಸಭೆ ನಡೆಸುತ್ತಾರೆ, ಕಳೆದ ಮೂರು ವರ್ಷಗಳಲ್ಲಿ

ಆದಂಥ ಮಳೆ, ಅಂದರೆ, ಮೇ–ಎಪ್ರಿಲ್–ಜೂನ್, ಈ ಮೂರು ತಿಂಗಳಲ್ಲಿ ಯಾವ್ಯಾವ ವರ್ಷ ಹೆಚ್ಚಿಗೆ ಮಳೆಯಾಗಿದೆ ಅದನ್ನು ನೋಡಿಕೊಂಡು ನಾವು ಇವತ್ತು ಈ 126 ತಾಲ್ಲೂಕುಗಳಲ್ಲಿ ಬರಗಾಲ ಇದೆ ಎಂದು ಘೋಷಣೆ ಮಾಡಿದ್ದೇವೆ. ತಾವು ಇದನ್ನು ಏಕೆ ಹೆಚ್ಚಿಸಿಲ್ಲವೆಂದು ಪ್ರಶ್ನೆ ಕೇಳಿದರು? ಪ್ರತಿವಾರ ನಡೆಯತಕ್ಕಂಥ ಸಭೆಯಲ್ಲಿ ಎಲ್ಲೆಲ್ಲಿ ಮಳೆಯ ಪ್ರಮಾಣ ಕಡಿಮೆಯಗುತ್ತದೆ ಅದನ್ನು ನೋಡಿಕೊಂಡು ಮಾಡಲಿಕ್ಕೆ ಇನ್ನೂ ಅವಕಾಶವಿದೆ. ಹಿಂದೆ ಹೋದ ಸಲ ಕೂಡ ನಾವು 136 ತಾಲ್ಲೂಕುಗಳನ್ನು ಬರಪೀಡಿತ ತಾಲ್ಲೂಕುಗಳೆಂದು ಗುರುತಿಸಿ ನಂತರ ಎಲ್ಲೆಲ್ಲಿ ಮಳೆಯಾಗಿಲ್ಲವೆಂದು ನೋಡಿಕೊಂಡು ನಂತರ 159 ತಾಲ್ಲೂಕುಗಳಿಗೆ ವಿಸ್ತಾರ ಮಾಡಿದ್ದು ತಮಗೆಲ್ಲರಿಗೂ ಗೊತ್ತಿರತಕ್ಕಂಥ ವಿಷಯ. ಇವತ್ತು ಅಲ್ಲಿ ಬರಗಾಲ ಕಾಮಗಾರಿ ನಡೆದಿಲ್ಲ, ಕೂಲಿಗಾಗಿ ಕಾಳು ಯೋಜನೆಯ ಕೆಲಸ ನಡೆದಿಲ್ಲ. ಎನ್ನುವುದು ವಿರೋಧ ಪಕ್ಷದ ನಾಯಕರ ಆರೋಪ ಮಾನ್ಯ ಅಧ್ಯಕ್ಷರೆ, ನಾನೇ ಸ್ವತಃ ಅಲ್ಲಿಗೆ ಹೋಗಿದ್ದು, ಅಲ್ಲಿ ಎರಡು ಕಾಮಗಾರಿಗಳನ್ನು ಅಂದರೆ ಗೋಕಟ್ಟೆ ಮಾಡತಕ್ಕಂಥ ಕೆಲಸವನ್ನು ಪ್ರಾರಂಭ ಮಾಡಿದ್ದೇವೆ. ಸ್ವತಃ ನಾನೇ ಸ್ಥಳಕ್ಕೆ ಭೇಟಿ ಕೊಟ್ಟಿದ್ದೇನೆ. ಇವತ್ತು ಒಂದೊಂದು ಜಿಲ್ಲೆಯಲ್ಲಿ ನಾಲ್ಕು ಅಥವಾ ಐದು ತಾಲ್ಲೂಕುಗಳು ಇರಬಹುದು, ಆ ಜಿಲ್ಲೆಯಲ್ಲಿ ಹಣ ಎಷ್ಟು ಬಂತು, ಅಕ್ಕಿ ಎಷ್ಟು ಬಂತು, ಎಂಬ ಅಂಕಿ ಅಂಶಗಳನ್ನು ನೋಡಿಕೊಂಡು ಆ ತಾಲ್ಲೂಕಿನ ಟಾಸ್ಕ್‌ಫೋರ್ಸ್‌ನಲ್ಲಿ ನಾವು ಹಣ ಬಿಡುಗಡೆ ಮಾಡುತ್ತೇವೆ. ಅಲ್ಲಿ ಪ್ರತಿಯೊಂದು ಗ್ರಾಮ ಪಂಚಾಯಿತಿಯ ಪ್ರತಿಯೊಂದು ಹಳ್ಳಿಗೂ ಕೆಲಸ ಕೊಡಬೇಕು ಎನ್ನುವುದು ನಮ್ಮ ಉದ್ದೇಶವಿದ್ದು, ಇವತ್ತು ಈ ಗ್ರಾಮ ಪಂಚಯಿತಿಗೆ ಕೊಟ್ಟರೆ ಮತ್ತೊಂದು ದಿವಸ ಬೇರೆ ಗ್ರಾಮ ಪಂಚಾಯಿತಿಗೆ ಕೆಲಸ ಕೊಡತಕ್ಕಂಥ ವ್ಯವಸ್ಥೆಯನ್ನು ಮಾಡಿಕೊಂಡು, ಇವತ್ತು ಪ್ರತಿಯೊಂದು ಗ್ರಾಮ ಪಂಚಾಯಿತಿಯಲ್ಲಿ ಈ ಒಂದು ಬರ ಕಾಮಗಾರಿಯಲ್ಲಿ ಕೂಲಿಗಾಗಿ ಕಾಳು ಯೋಜನೆಯನ್ನು ಹಾಕಿಕೊಂಡಿದ್ದೇವೆ. ಆದರೆ ಅಲ್ಲಿ ಒಮದು ವಾರದಿಂದ ಅವರಿಗೆ ಏನೂ ಕೆಲಸ ಸಿಕ್ಕಿಲ್ಲ. ಒಂದು ವಾರದಿಂದ ಅವರಿಗೆ ಆಹಾರ ಸಿಕ್ಕಿಲ್ಲ ಎನ್ನುವುದು ಏನು ಇದೆ. ಈ ಬಗ್ಗೆ ನನ್ನ ಹತ್ತಿರ ಮಾಹಿತಿ ಇಲ್ಲ. ಆದರೂ ಅವರು ಮುಖ್ಯವಾಗಿ ಹಸಿವಿನಿಂದ ಸತ್ತರು ಎಂದು ಹೇಳಿದರು. ಇದು ಮಾತ್ರ ಆಗಬಾರದು ಯಾವುದೇ ಕಾರಣಕ್ಕೂ ಈ ರಾಜ್ಯದಲ್ಲಿ ಇವತ್ತಾದರೂ ಅಥವಾ ಮುಂದಾದರೂ ಕೂಡ ಹಸಿವಿನಿಂದ ಯಾರೂ ಸಾಯಬಾರದು, ಈ ಸದನದ ಉದ್ದೇಶವೇ ಅದು ಇದೆ. ಅದಕ್ಕೆ ನಾನು ಇಡೀ ಜನತೆಗೆ ಮನವಿ ಮಾಡುತ್ತೇನೆ, ಈ ಒಂದು ಪರಿಸ್ಥಿತಿ ಮುಂದೆ ಬರಬಾರದು ಎನ್ನುವ ಉದ್ದೇಶದಿಂದ ನಾನು ಯವುದೇ ಕಾರಣಕ್ಕೂ ಈ ಹಸಿವಿನಿಂದ ಸಾಯಬಾರದು ಎಂದು ಹೇಳುತ್ತೇನೆ. ಅವರು ಏನು ಹಸಿವಿನಿಂದ ಸತ್ತರು ಎಂದು ಹೇಳಿದರು, ಅದು ಸತ್ಯಕ್ಕೆ ದೂರದ ಮಾತು ನಾನು ಕೂಡ ದೂರವಾಣಿಯಲ್ಲಿ ಮಾತನಾಡಿ ವಿಷಯವನ್ನು ತಿಳಿದುಕೊಂಡಿದ್ದೇನೆ. ಇವತ್ತು ಜೀವನದಲ್ಲಿ ಜುಗುಪ್ಸೆಗೊಂಡು ಈ ರೀತಿಯಾಗಿ ಆತ್ಮಹತ್ಯೆ ಮಾಡಿಕೊಂಡಿದ್ದಾರೇ ಇನ್ನು ಮುಖ್ಯವಾಗಿ ರೈತರ ಬಗ್ಗೆ ಹೇಳುವುದಾದರೆ, ಎಷ್ಟು ಜನ ರೈತರು ಸತ್ತಿದ್ದಾರೆ? ನನ್ನ ಹತ್ತಿರ ಬಂದಂಥ ಮಾಹಿತಿ ಪ್ರಕಾರ ಸುಮಾರು 185 ಜನ ರೈತರು ಸತ್ತಿದ್ದಾರೆ ಎಂದು ನನಗೆ ಒಂದು ರಿಪೋರ್ಟ್ ಇದೆ. 185 ಜನ ರೈತರು ಎಂದಾಕ್ಷಣ ಅವರು ಯವ ಕಾರಣಕ್ಕೆ ಸತ್ತರು? ಯಾವ ವಿಷಯಕ್ಕೆ ಸತ್ತರೇ, ಸಾಲ ಮಾಡಿಕೊಂಡಿದ್ದಾರೆ ಅಥವಾ ಬೇರೆ ಬೇರೆ ಕಾರಣಗಳಿಗೆ ಸತ್ತರು ಎನ್ನುವುದಕ್ಕೆ ಡಾ. ವೀರೇಶ್ ಅವರು ವರದಿ ಕೊಟ್ಟಿದ್ದಾರೆ, ನಾವು ಒಂದು ಕಮಿಟಿ ಮಾಡಿದ್ದೇವೆ. ಈಗಾಗಲೇ ನಮ್ಮ ಹಿರಿಯ ಸಚಿವರು ತಿಳಿಸಿದಂತೆ ಆ ಕಮಿಟಿಯನ್ನು ಚಿಸುವ ಬಗ್ಗೆ 16–7–03 ರಂದು ಆದೇಶ ಕೂಡ ಆಗಿದೆ.

ಶ್ರೀ ಪಿ.ಜಿ. ಆರ್. ಸಿಂಧ್ಯ :- ಮಾನ್ಯ ಉಪಾಧ್ಯಕ್ಷರೆ, ಈ ಸಂದರ್ಭದಲ್ಲಿ ಮಾನ್ಯ ಗೃಹಮಂತ್ರಿಯವರ ಗಮನಕ್ಕೆ ಒಂದು ವಿಷಯವನ್ನು ತರುವುದಕ್ಕೆ ಇಷ್ಟಪಡುತ್ತೇನೆ. ಇಲ್ಲೊಂದು ಡಿಸ್‌ಪ್ಯೂಟ್ ಇದೆ. ಸುಮಾರು 450 ಕ್ಕಿಂಥ ಹೆಚ್ಚು ಜನರು ಸತ್ತಿದ್ದಾರೆಂದು ನಾವು ಹೇಳುತ್ತಿದ್ದೇವೆ. ಆದರೆ, ಚೀಟಿ ವ್ಯವಹಾರ ನಡೆಸತಕ್ಕಂಥವರು ಮತ್ತು ಮಟ್ಕಾ ಆಟ ಆಡತಕ್ಕಂಥವರು ಸತ್ತು ಹೋಗಿದ್ದಾರೆ, ಇವರಿಗೆಲ್ಲಾ ಸರ್ಕಾರ ಏನು ಮಾಡುವುದಕ್ಕೆ ಆಗುತ್ತದೆ ಎಂದು ಮಾನ್ಯ ಮುದ್ದಹನುಮೇಗೌಡರು ಹೇಳಿದರು.

ಶ್ರೀ ಎಸ್.ಪಿ. ಮುದ್ದಹನುಮೇಗೌಡ :- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿರತಕ್ಕಂಥ ವಿಷಯವನ್ನು ಉದಾಹರಣೆ ಕೊಡುವುದಕ್ಕೋಸ್ಕರ ಉಪಯೋಗ ಮಾಡಿದ್ದೇನೆ.

ಶ್ರೀ ಪಿ.ಜಿ. ಆರ್. ಸಿಂಧ್ಯ :- ಮಾನ್ಯ ಸದಸ್ಯರು ಉದಾಹರಣೆ ಕೊಟ್ಟಿದ್ದೇನೆಂದು ಹೇಳುತ್ತಿದ್ದಾರೆ. ಈ ಸಂದರ್ಭದಲ್ಲಿ ನಾನು ಸರ್ಕಾರಕ್ಕೆ ಸಲಹೆ ಕೊಡುವುದೇನೆಂದರೆ, ಕೇಂದ್ರದಲ್ಲಿ ಬೇರೆ ಪಾರ್ಟಿಯ ಸರ್ಕಾರ ಅಧಿಕಾರದಲ್ಲಿದೆ; ಮತ್ತೆ ಇಲ್ಲಿ ನಿಮ್ಮ ಸರ್ಕಾರ ಇದೆ. ನಾನು ಹೇಳಿರತಕ್ಕಂಥ ಅಂಕಿ-ಅಂಶಗಳಲ್ಲಿ ತಮಗೆ ಅಪನಂಬಿಕೆ ಇದ್ದರೆ ಇದನ್ನು ತನಿಖೆ ಮಾಡುವುದಕ್ಕೋಸ್ಕರ ನ್ಯಾಷನಲ್ ಹ್ಯೂಮನ್ ರೈಟ್ಸ್ ಕಮೀಷನ್‌ರಿಗೆ ಪತ್ರ ಬರೆದು ತಿಳಿಸಿ ಏಕೆಂದರೆ ನ್ಯಾಷನಲ್ ಹ್ಯೂಮನ್ ರೈಟ್ಸ್ ಕಮೀಷನ್ ಒಂದು ಸ್ವತಂತ್ರ ಸಂಸ್ಥೆಯಾಗಿದೆ. ಆದ್ದರಿಂದ, ಕರ್ನಾಟಕ ರಾಜ್ಯದಲ್ಲಿ ಎಷ್ಟು ಜನ ಹಸಿವಿನಿಂದ ಸತ್ತಿದ್ದಾರೆ ಮತ್ತು ಎಷ್ಟು ಜನ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂಬುದನ್ನು ಅವರೇ ತನಿಖೆ ಮಾಡಿದರೆ ಒಳ್ಳೆಯದು. ಸಿ.ಬಿ.ಐ. ವಿಚಾರದಲ್ಲಿ ಯಾವುದೋ ಒಂದು ಪ್ರಕರಣದಲ್ಲಿ ಎನ್.ಹೆಚ್.ಆರ್.ಸಿ. ಕೇಂದ್ರ ಸರ್ಕಾರದ ಮೇಲೆ ಹೋಗಿರತಕ್ಕಂಥದ್ದು ನಮ್ಮ ಕಣ್ಣುಗಳ ಮುಂದೆ ಇದೆ. ಇವರು ತನಿಖೆ ಮಾಡಿದರೆ ಸತ್ಯಾಂಶ ಹೊರಕ್ಕೆ ಬರುತ್ತದೆ ಆದ್ದರಿಂದ ಇದರ ಬಗ್ಗೆ ನೀವು ಹೆರತಕ್ಕಂಥ ಅವಶ್ಯಕತೆ ಇಲ್ಲ. ಆದ್ದರಿಂದ ಇದನ್ನು ಎನ್.ಹೆಚ್.ಆರ್.ಸಿ. ಗೆ ರೆಫರ್ ಮಾಡಬೇಕೆಂದು ಮಾನ್ಯ ಗೃಹಮಂತ್ರಿಯವರಲ್ಲಿ ಕೇಳಿಕೊಳ್ಳುತ್ತೇನೆ. ಮತ್ತೆ ಮಾನ್ಯ ಗೃಹಮಂತ್ರಿಯವರೇ ಇವತ್ತಿನ ದಿವಸ ಬರಗಾಲ ಪರಿಸ್ಥಿತಿಯನ್ನು ಮಾನಿಟರ್ ಮಾಡುತ್ತಿರುವುದರಿಂದ ಇದಕ್ಕೆ ದಯಮಾಡಿ ಒಪ್ಪಿಗೆ ಕೊಟ್ಟರೆ ರಾಜ್ಯದ ಜನತೆಗೆ ಬಹಳ ಉಪಯೋಗ ಆಗುತ್ತದೆ ಎಂದು ನಾನು ತಿಳಿದುಕೊಂಡಿದ್ದೇನೆ.

+ ಶ್ರೀ ಮಲ್ಲಿಕಾರ್ಜುನ ಖರ್ಗೆ (ಗೃಹ ಮತ್ತು ಸಣ್ಣ ನೀರಾವರಿ ಸಚಿವರು) :- ಮಾನ್ಯ ಉಪಾಧ್ಯಕ್ಷರೆ, ಹಿರಿಯ ಸದಸ್ಯರಾಗಿರತಕ್ಕಂಥ ಮಾನ್ಯ ಸಿಂಧ್ಯಾರವರಿಗೂ ಕೂಡ ಈ ವಿಷಯದ ಬಗ್ಗೆ ಗೊತ್ತಿದೆ. ಕರ್ನಾಟಕ ರಾಜ್ಯದಲ್ಲಿ ಇದುವರೆಗೆ ಯಾವುದೇ ಸರ್ಕಾರ ಆಡಳಿತ ನಡೆಸಿರುವಂಥ ಸಂದರ್ಭದಲ್ಲಿ ಎಂಥಂಥ ಬರಗಾಲದ ಪರಿಸ್ಥಿತಿಯನ್ನು ನಾವು ನೀವು ಎದುರಿಸಿದ್ದೇವೆ. ಆದರೆ, ಕರ್ನಾಟಕ ರಾಜ್ಯದಲ್ಲಿ ಯಾವ ಕಾಲಕ್ಕೂ ಕೂಡ ಎಲ್ಲಿಯೂ ಹಸಿವಿನಿಂದ ರೈತರು ಸತ್ತಿದ್ದಾರೆ ಎನ್ನತಕ್ಕಂಥ ವರದಿ ಹಿಂದೆ ಕೂಡ ಆಗಿಲ್ಲ. ಮತ್ತೆ ಇವತ್ತೂ ಎಲ್ಲಿಯೂ ಆಗಿಲ್ಲ. ಆದರೆ, ಸತ್ತಿರತಕ್ಕಂಥದ್ದಕ್ಕೆ ಬೇರೆ ಬೇರೆ ಕಾರಣಗಳಿರಬಹುದು ನಮ್ಮ ರಾಜ್ಯದಲ್ಲಿ ಈಗಾಗಲೇ ಸುಮಾರು 185 ಜನ ಸತ್ತಿದ್ದಾರೆಂದು ಮಾನ್ಯ ಸಚಿವರು ಈಗಾಗಲೇ ಉತ್ತರ ಕೊಡತಕ್ಕಂಥ ಸಂದರ್ಭದಲ್ಲಿ ಹೇಳಿದ್ದಾರೆ. ರೈತರು ಬೇರೆ ಬೇರೆ ಕಾರಣಗಳಿಂದ ಅಥವಾ ಇದೇ ಕಾರಣಗಳಿಂದ ಸತ್ತಿದ್ದಾರೆ ಎನ್ನತಕ್ಕಂಥ ಮಾಹಿತಿ ನಮಗೆ ಯಾವಾಗ ಸಿಗಬಹುದು ಎಂದರೆ, ಅಸಿಸ್ಟೆಂಟ್ ಕಮೀಷನರ್‌ರವರ ನೇತೃತ್ವದಲ್ಲಿ ಒಂದು ಕಮಿಟಿಯನ್ನು ನಾವು ಈಗಾಗಲೇ ಮಾಡಿದ್ದೇವೆ. ಆ ಕಮಿಟಿ ನ್ಯಾಚುರಲ್ ಆಗಿ ಎಲ್ಲಾ ಜಿಲ್ಲಾ ತಾಲ್ಲೂಕುಗಳಿಗೆ ಭೇಟಿ ನೀಡಿ ತನಿಖೆ ಮಾಡಿದ ನಂತರ ನಮಗೆ ನಿಜವಾದ ಅಂಶ ತಿಳಿಯುತ್ತದೆ.

ಕಮಿಟಿ ರಚನೆ ಮಾಡಿರುವ ಬಗ್ಗೆ ಸರ್ಕಾರ ದಿನಾಂಕ 18-07-2003 ರಂದು ಆದೇಶ ಕೂಡ ಹೊರಡಿಸಿದೆ. ಸದರಿ ಕಮಿಟಿಯವರು ಇಂಥ ಕೆಲಸವನ್ನು ಪರಿಶೀಲಿಸುತ್ತಾರೆ. ರೈತರು ನಿಜವಾಗಿಯೂ ಹಸಿವಿನಿಂದ ಅಥವಾ ಸಾಲ ಮಾಡಿರುವುದರಿಂದ ಅಥವಾ ಬೇರೆ ಬೇರೆ ಯಾವುದಾದರೊಂದು ಕಾರಣಗಳಿಂದ ಸತ್ತಿದ್ದಾರೆಯೇ ಎನ್ನತಕ್ಕಂಥದ್ದನ್ನು ಅವರು ಪರಿಶೀಲನೆ ಮಾಡುತ್ತಾರೆ. ಭಾರತ ದೇಶ ಮತ್ತು ಕರ್ನಾಟಕ ರಾಜ್ಯದಲ್ಲಿ ವಿಶೇಷವಾಗಿ ಕೃಷಿ ಕ್ಷೇತ್ರವೇ ಪ್ರಧಾನವಾಗಿರುವುದರಿಂದ ಇಲ್ಲಿರತಕ್ಕಂಥ ಎಲ್ಲರೂ ಕೂಡ ರೈತರು ಅಥವಾ ರೈತ ಕಾರ್ಮಿಕರೇ ಹೆಚ್ಚಾಗಿ ಇದ್ದಾರೆ. ನಮ್ಮ ದೇಶದಲ್ಲಿ 100ಕ್ಕೆ 70ರಷ್ಟು ಜನ ರೈತರು ಅಥವಾ ರೈತ ಕಾರ್ಮಿಕರು ಇದ್ದಾರೆ. ಮತ್ತೆ ಇವತ್ತಿನದಿವಸ ಯಾವುದೇ ಒಂದು ಹಳ್ಳಿಯಲ್ಲಿ ಹೆಚ್ಚು ಕಡಿಮೆ ರೈತರೇ ಸಾಯುತ್ತಾರೆ. ಅಥವಾ ಕೃಷಿಕರು ಸಾಯುತ್ತಾರೆ. ಅದರೆ, ಇವರು ಯಾವ ಕಾರಣಕ್ಕಾಗಿ ಸತ್ತಿದ್ದಾರೆ ಎನ್ನತಕ್ಕಂಥದ್ದು ಬಹಳ ಮುಖ್ಯ. ಇದನ್ನು ತಾವು ತಿಳಿದುಕೊಳ್ಳಬೇಕೆಂದು ಹೇಳುತ್ತೇನೆ. ಈಗಾಗಲೇ ಕಮಿಟಿ ಮಾಡಿದ್ದೇವೆ. ಈ ಕಮಿಟಿ ಮುಂದೆ ನಿಜವಾದ ಅಂಶ ಬರುತ್ತದೆ. ಇಂಥವರಿಗೆ ಪರಿಹಾರ ಕೊಡಬೇಕೆಂದು ಕಮಿಟಿ ತಿಳಿಸಿದರೆ ಅಂಥವರಿಗೆ ನಾವು ಖಂಡಿತ ಪರಿಹಾರ ಕೊಡುತ್ತೇವೆ. ಪರಿಹಾರ ಕೊಡುವುದಕ್ಕಿಂಥ ಮುಂಚಿತವಾಗಿ ಎಲ್ಲಾ ವಿಷಯ ಗೊತ್ತಾಗುತ್ತದೆ. ಈ ಒಂದು ಕಮಿಟಿಯಲ್ಲಿ ಅಸಿಸ್ಟೆಂಟ್ ಕಮಿಷನರ್ ಮತ್ತು ಪೊಲೀಸ್ ಇಲಾಖೆಯ ಅಧಿಕಾರಿಗಳು ಮತ್ತು ತನಿಖಾ ಅಧಿಕಾರಿಗಳು ಇರುತ್ತಾರೆ, ಇವರೆಲ್ಲರೂ ತನಿಖೆ ಮಾಡಿದ ಮೇಲೆ ನಿಜವಾದ ಅಂಶ ಹೊರಕ್ಕೆ ಬರುತ್ತದೆ. ಇದಕ್ಕಾಗಿಯೇ ಆಗಿದೆ ಎನ್ನತಕ್ಕಂಥದ್ದನ್ನು ನಾವು ಕೂಡ ಹೇಳುತ್ತಿಲ್ಲ. ಕರ್ನಾಟಕ ರಾಜ್ಯದಲ್ಲಿ ಇದುವರೆಗೂ ಆ ಪರಿಸ್ಥಿತಿ ಬಂದಿಲ್ಲ. ನಮ್ಮ ದೇಶದಲ್ಲಿ ಒರಿಸ್ಸಾ ಅಥವಾ ಬೇರೆ ಬೇರೆ ರಾಜ್ಯದಲ್ಲಿ ಇಂಥ ಒಂದು ಪರಿಸ್ಥಿತಿ ಬಂದಿದೆ. ಇದನ್ನು ನೀವು ಕೂಡ ಒಪ್ಪಿಕೊಳ್ಳಬೇಕು. ಇಲ್ಲಿ ಒಬ್ಬರ ಮೇಲೊಬ್ಬರು ಸುಮ್ಮನೆ ಚಾರ್ಜ್ ಮಾಡತಕ್ಕಂಥದ್ದು ಸರಿಯಲ್ಲ. ಇದಕ್ಕಾಗಿ ಅವರು ಸತ್ತಿಲ್ಲ ಎನ್ನತಕ್ಕಂಥದ್ದನ್ನು ನೀವು ಒಪ್ಪಿಕೊಳ್ಳಿ. ನೀವು ಏನೂ ಕೆಲಸ ಮಾಡಿಲ್ಲ ಅಥವಾ ಸರ್ಕಾರ ಅತ್ತಕಡೆ ಗಮನಹರಿಸಿಲ್ಲ ಎನ್ನತಕ್ಕಂಥದ್ದು ಅಷ್ಟೊಂದು ಸರಿಯಲ್ಲ. ಇದು ಸತ್ಯಕ್ಕೆ ದೂರವಾದಂಥ ಮಾತು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- ಈಗ 185 ಜನರಿಗೆ ಪರಿಹಾರ ಕೊಟ್ಟಿದ್ದಾರೆಯೇ ಅಥವಾ ಇಲ್ಲವೇ ಎನ್ನತಕ್ಕಂಥದ್ದನ್ನು ಹೇಳಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ನಾನು ಈಗಾಗಲೇ ಹೇಳಿದ ಹಾಗೆ ಇದನ್ನು ಪರಿಶೀಲನೆ ಮಾಡುವುದಕ್ಕೆ ಒಂದು ಕಮಿಟಿಯನ್ನು ರಚನೆ ಮಾಡಿದ್ದೇವೆ. ಇದು ಕಮಿಟಿ ಮುಂದೆ ಬಂದ ನಂತರ ಸತ್ಯಾಂಶ ಹೊರಕ್ಕೆ ಬರುತ್ತದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- ಇನ್ನು ಯಾವಾಗ ಬರುತ್ತದೆ?

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಯಾವಾಗ ಅಂದರೆ, ಈಗ ಆರ್ಡರ್ ಹೋಗಿದೆ. ಇನ್ನು ಮುಂದೆ ಕಮಿಟಿಯ ಕೆಲಸ ಪ್ರಾರಂಭವಾಗುತ್ತದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ :- ಮಾನ್ಯ ಉಪಾಧ್ಯಕ್ಷರೆ, ಇವರೆಲ್ಲರೂ ಸತ್ತು ಬಹಳಷ್ಟು ದಿನಗಳಾಗಿವೆ. 185 ಜನ ಸತ್ತಿದ್ದಾರೆಂದು ಅವರು ಹೇಳುತ್ತಿದ್ದಾರೆ. ಆದರೆ ನಮ್ಮ ಸಂಖ್ಯೆಯೇ ಬೇರೆ ಇದೆ. ಇನ್ನು ಯಾವಾಗ ಪರಿಹಾರ ಕೊಡಲಾಗುತ್ತದೆ ಎಂಬುದನ್ನು ತಿಳಿಸಬೇಕು.

ಶ್ರೀ ಎಸ್.ಎಸ್. ಪಾಟೀಲ್ :- ಮಾನ್ಯ ವಿಶ್ವೇಶ್ವರ ಹೆಗಡೆಯವರೇ, ಮಾನ್ಯ ಗೃಹ ಮಂತ್ರಿಗಳು ಹೇಳತಕ್ಕಂಥದ್ದನ್ನು ನೋಡಿದರೆ, ರೈತರು ಸತ್ತಾಗ ತಕ್ಷಣವೇ ಆತ ತನ್ನ ತೊಂದರೆಯಿಂದ

ಸತ್ತಿದ್ದಾನೆಂದು ತೀರ್ಮಾನ ಮಾಡಿ 1 ಲಕ್ಷ ರೂಪಾಯಿಗಳನ್ನು ಹಿಂದಿನ ಸರ್ಕಾರ ಕೊಟ್ಟಿದೆ. ಅವರು ಕಟ್ಟಿಕೊಟ್ಟಿದ್ದಾರೆಂದು ಹೇಳುತ್ತೀರೇನು? ಇದು ಪ್ರಶ್ನೆ ಅವರು ಸತ್ತವರಿಗೆಲ್ಲ ಕೊಟ್ಟಿದ್ದಾರೇನು? ರೈತರು ಸತ್ತ ತಕ್ಷಣವೇ ಅವರನ್ನು ಗುರುತು ಮಾಡಿ ಅವರೆಲ್ಲರಿಗೂ ಕೂಡ ಹಿಂದೆ ಇದ್ದಂಥ ನಮ್ಮ ಸರ್ಕಾರ ಪರಿಹಾರದ ಹಣವನ್ನು ಕೊಟ್ಟಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :– ಆ ಸಂದರ್ಭದಲ್ಲಿ ಇದಕ್ಕೆ ನಾವು ಎಷ್ಟು ಹೋರಾಟ ಮಾಡಿದ್ದೇವೆ ಎನ್ನತಕ್ಕಂಥದ್ದು ನಮಗೆ ಗೊತ್ತಿದೆ. ಈಗ ಸುಮ್ಮನೆ ಇದರ ಬಗ್ಗೆ ಏಕೆ ಮಾತನಾಡುವುದಕ್ಕೆ ಹೋಗುತ್ತೀರಿ. ಈಗ ನಾನು ಹೇಳುವುದೇನೆಂದರೆ, ವೀರೇಶ್ ಕಮಿಟಿಯ ವರದಿ ಬಂದ ಮೇಲೆ ಏನಾದರೂ ಕೊಡುವುದಕ್ಕೆ ಒಂದು ಆಧಾರ ಬೇಕಲ್ಲವೆ? ನೀವು ಇದ್ದಂಥ ಸಂದರ್ಭದಲ್ಲಿ ರೈತರು ಸತ್ತ ಕೂಡಲೇ ನೀವೇನು ಚೆಕ್ ಬರೆದು ಕೊಟ್ಟಿದ್ದೀರಾ? ಈಗ ಆ ವಿಷಯವೆಲ್ಲವನ್ನೂ ಮಾತನಾಡುವುದು ಬೇಡ. ಸದನದಲ್ಲಿ ಚರ್ಚೆಯಾದ ಪ್ರಕಾರವೇ ಒಂದು ಕಮಿಟಿಯನ್ನು ಮಾಡಿದ್ದೇವೆ. ಈಗ ಒಂದು ಸಿಸ್ಟಮ್ಯಾಟಿಕ್ ಪ್ರೊಸೀಜರ್ ಪ್ರಾರಂಭವಾಗಿದೆ. ಅವರು ಪರಿಶೀಲನೆ ಮಾಡಿ ನಮಗೆ ವರದಿ ಕೊಡಲಿ. ಆನಂತರ ಪರಿಹಾರ ಕೊಡೋಣ. ತಮ್ಮೆಲ್ಲರ ಅಭಿಪ್ರಾಯ ಏನಿದೆ, ಅದೇ ಅಭಿಪ್ರಾಯ ಎಲ್ಲರಿಗೂ ಕೂಡ ಇದೆ. ನಾನು ಈಗಾಗಲೇ ಹೇಳಿದ ಹಾಗೆ, ನಮ್ಮ ದೇಶದಲ್ಲಿ 100ಕ್ಕೆ 70ರಷ್ಟು ರೈತರಿದ್ದಾರೆ. ಮತ್ತೆ ಇಲ್ಲಿರತಕ್ಕಂಥ ನಾವೆಲ್ಲರೂ ಕೂಡ ರೈತರ ಮತ ಕ್ಷೇತ್ರದಿಂದಲೇ ಬಂದಿದ್ದೇವೆ. ನಾವ್ಯಾರು ಅರ್ಬನ್ ಏರಿಯಾದಿಂದ ಆರಿಸಿ ಬಂದಂಥವರಲ್ಲ. ಇದರ ಬಗ್ಗೆ ತಮಗೆ ಎಷ್ಟು ಕಳಕಳಿ ಇದೆಯೋ ಅಷ್ಟೇ ಕಳಕಳಿ ನಮಗೂ ಕೂಡ ಇದೆ. ತಮಗೆ ಸ್ವಲ್ಪ ಜಾಸ್ತಿ ಇರಬಹುದು. ಆದರೆ ನಮಗೂ ಕೂಡ ಕಡಿಮೆ ಏನಿಲ್ಲ. ಎನ್ನತಕ್ಕಂಥ ಮಾತನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ :– ಇದು ಇಷ್ಟರಲ್ಲಿಯೇ ಗೊತ್ತಾಗುತ್ತದೆ. ಮಾನ್ಯ ಸಚಿವರು ನಿನ್ನೆದಿವಸ ಹೇಳಿದ ಉತ್ತರವನ್ನೇ ಇವತ್ತೂ ಕೂಡ ಹೇಳುತ್ತಿದ್ದಾರೆ. ಮತ್ತೆ ವೀರೇಶ್ ಕಮಿಟಿ ಮಾಡಿದ್ದೇವೆ, ಇವರು ವರದಿ ಕೊಟ್ಟ ಮೇಲೆ ನಾವು ಕೊಡುತ್ತೇವೆಂದು ಆಗಿನಿಂದ ಹೇಳಿಕೊಂಡು ಬರುತ್ತಿದ್ದಾರೆ. ಹಿಂದಿನ ಸರ್ಕಾರ, ಇವ್ಯಾವುದನ್ನು ಮಾಡದೇ ಕೊಟ್ಟಿಗತಕ್ಕಂಥ ಉದಾಹರಣೆಗಳಿವೆ. ಆ ಸಂದರ್ಭದಲ್ಲಿ ನೀವೂ ಕೂಡ ಇಲ್ಲಿದ್ದೀರಿ. ಅದೇ ರೀತಿಯಾಗಿ ಈ ಸಾರಿಯೂ ಕೂಡ ಮಾಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ :– ಮಂಡ್ಯ ಜಿಲ್ಲೆಯ ಶಾಸಕರಾಗಿದ್ದಂಥ ಶ್ರೀ ಶಿವಕುಮಾರ್ ರವರ ಅಧ್ಯಕ್ಷತೆಯಲ್ಲಿ ತೊಗರಿ ಮತ್ತು ರೈತರ ಸಮಸ್ಯೆ ಬಗ್ಗೆ ರಚನೆ ಮಾಡಿದಂಥ ಸಮಿತಿಯು ಒಂದು ವರದಿಯನ್ನು ಕೊಟ್ಟಿತ್ತು. ಆ ಸಂದರ್ಭದಲ್ಲಿ ಇದಕ್ಕೆ ಸಂಬಂಧಪಟ್ಟಂತೆ ನೀವೇನು ಕೊಟ್ಟಿದ್ದೀರಿ? ಈಗ ಸುಮ್ಮನೆ ಇದೆಲ್ಲಾ ಚರ್ಚೆ ಬೇಡ. ಮೊದಲು ಈ ವಿಷಯದ ಬಗ್ಗೆ ಪೂರ್ಣ ಮಾಡೋಣ. ಆ ನಂತರ ಇದಕ್ಕೆ ಉತ್ತರ ಕೊಡುತ್ತೇವೆ.

ಶ್ರೀ ಸಿ.ಆರ್. ಸಗೀರ್ ಆಹಮದ್ :– ಈ ರಾಜ್ಯದ ರೈತರ ಬಗ್ಗೆ ನೀವು ಯಾವ ರೀತಿ ಚಿಂತನೆ ಮಾಡಿದ್ದೀರಿ ಎನ್ನತಕ್ಕಂಥದ್ದನ್ನು ನಾವೂ ಕೂಡ ನೋಡಿದ್ದೇವೆ.

ಶ್ರೀ ಎಸ್.ಎಸ್. ಪಾಟೀಲ್ :– ಮಾನ್ಯ ಶಿವಕುಮಾರ್‌ರವರು ನೀಡಿರತಕ್ಕಂಥ ವರದಿಯನ್ನು ತರಿಸಿಕೊಟ್ಟಿದ್ದೇವೆ.

ಗೊಂದಲ

ಉಪಾಧ್ಯಕ್ಷರು :– ಒಬ್ಬೊಬ್ಬರು ಮಾತನಾಡಿ.

ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) :- ಮಾನ್ಯ ಉಪಾಧ್ಯಕ್ಷರೆ, ವೀರೇಶ್ ಕಮಿಟಿ ರಿಪೋರ್ಟ್‌ನ್ನು ಯಾವ ಹಿನ್ನೆಲೆಯಲ್ಲಿ ಮಾಡಿದ್ದಾರೆ ಎಂಬುದನ್ನು ಮತ್ತು ಈ ಕಮಿಟಿ ವರದಿಯನ್ನು ತಿರಸ್ಕಾರ ಮಾಡಿ ಮತ್ತು ಅದನ್ನು ರದ್ದು ಮಾಡಬೇಕೆಂದು ನಾವೇ ಹೇಳಿದ್ದೇವೆ. ಯಾವ ಉದ್ದೇಶಕ್ಕೋಸ್ಕರ ಈ ಸಮಿತಿಯನ್ನು ರಚನೆ ಮಾಡಿದ್ದಾರೆಂದರೆ, ರೈತರು ಯಾವುದೋ ಕಾರಣಕ್ಕೋಸ್ಕರ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಆದ್ದರಿಂದ ಎಲ್ಲರಿಗೂ ಪರಿಹಾರ ಕೊಡುವುದಕ್ಕೆ ಆಗುವುದಿಲ್ಲವೆಂದು ಬರೆಸಿಕೊಳ್ಳುವುದಕ್ಕೋಸ್ಕರ ಇದನ್ನು ಮಾಡಿದ್ದಾರೆ. ನಮ್ಮ ಸರ್ಕಾರ ಇದ್ದಂಥ ಸಂದರ್ಭದಲ್ಲಿ ಕೇವಲ ದಿವಸದೊಳಗೆ ಪರಿಹಾರದ ಹಣ ಕೊಡಿ ಎಂದು ನಾವು ಹೇಳಿದ್ದೆವು. ಆ ಸಂಧರ್ಭದಲ್ಲಿ ಮಂತ್ರಿಗಳಿರಬಹುದು ಅಥವಾ ಶಾಸಕರು ಮನೆಗೆ ಹೋಗಿ ಅವರ ಕುಟುಂಬದವರಿಗೆ 8 ದಿವಸದಲ್ಲಿ ಚೆಕ್ ವಿತರಣೆ ಮಾಡತಕ್ಕಂಥ ಕೆಲಸ ಮಾಡಿದ್ದೇವೆ. ಇಷ್ಟೊಂದು ಬಡತನ ನಿಮ್ಮ ಸರ್ಕಾರಕ್ಕೆ ಏಕಾಯಿತು ಇವತ್ತಿನ ದಿವಸ ಯಾರೂ ಸಹ ಬೇಕೆಂದು ಸಾಯುವುದಕ್ಕೆ ಹೋಗುವುದಿಲ್ಲ. ಮತ್ತೆ ಯಾರೂ ಕೂಡ ಬೇಕೆಂದು ಪ್ರಣ ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ಇವತ್ತಿನ ದಿವಸ ಸಾಯುತ್ತಿರುವವರು ಇದಕ್ಕಾಗಿಯೇ ಸಾಯುತ್ತಿದ್ದಾರೆಂದು ಇವರು ಬಹಳ ಹಗುರವಾಗಿ ಮಾತನಾಡುತ್ತಿದ್ದಾರೆ. ಆದ್ದರಿಂದ, ಇದನ್ನು ನಾನು ಒಪ್ಪಿಕೊಳ್ಳುವುದಿಲ್ಲ. ಮಾನ್ಯ ಸಚಿವರು ನಿನ್ನೆದಿವಸ ಕೂಡ ಇದೇ ಉತ್ತರವನ್ನು ಕೊಟ್ಟಿದ್ದಾರೆ. ಮತ್ತೆ ಇವತ್ತೂ ಕೂಡ ಅದೇ ಉತ್ತರವನ್ನು ಹೇಳುತ್ತಿದ್ದಾರೆ. ಆದ್ದರಿಂದ ಸರ್ಕಾರ ಇದರ ಬಗ್ಗೆ ಯಾವುದೇ ರೀತಿಯ ಕಾಳಜಿ ವಹಿಸಿಲ್ಲ. ಇದನ್ನು ನಾವು ಸಂಪೂರ್ಣವಾಗಿ ತಿರಸ್ಕಾರ ಮಾಡುತ್ತೇವೆ. ಈ ಸರ್ಕಾರದ ಧೋರಣೆಯನ್ನು....

ಶ್ರೀ ಎಸ್.ಎಸ್. ಪಾಟೀಲ್ :- ಮಾನ್ಯ ಉಪಾಧ್ಯಕ್ಷರೆ, 51 ಜನ ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ಕ್ಯೂ ನಿಂತಿದ್ದಾರೆ. ಇದರ ಬಗ್ಗೆ ಅವರೇನೂ ಹೇಳಲಿಲ್ಲ.

ಶ್ರೀ ಬಿ. ಸೋಮಶೇಖರ್ :- 51 ಜನ ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ಕ್ಯೂ ನಿಂತಿದ್ದಾರೆ. ಇದರ ಬಗ್ಗೆ ನಿಮ್ಮಲ್ಲಿ ಏನು ಮಾಹಿತಿ ಇದೆ ಎನ್ನತಕ್ಕಂಥದ್ದನ್ನು ತಿಳಿಸಬೇಕು. ಏಕೆಂದರೆ, ನಾಳೆದಿವಸ ಏನದರೂ ಹೆಚ್ಚು ಕಡಿಮೆ ಆದರೆ ಅದು ಸಾಮೂಹಿಕ ಹತ್ಯೆಯಾಗುತ್ತದೆ.

ಶ್ರೀ ಕರಡಿ ಸಂಗಣ್ಣ ಅಮರಪ್ಪ :- ಹಸಿವಿನಿಂದ ಅವರು ಸತ್ತಿದ್ದಾರೆಂದು ಜಿಲ್ಲಾಧಿಕಾರಿಗಳು ಈಗಾಗಲೇ ವರದಿ ಕೊಟ್ಟಿದ್ದಾರೆ. ಆದರೆ ಅವರು ಹಸಿವಿನಿಂದ ಸತ್ತಿಲ್ಲ, ಅವರು ಅನಾರೋಗ್ಯದ ನಿಮಿತ್ತ ಸತ್ತಿದ್ದಾರೆಂದು ಮಾನ್ಯ ಮಂತ್ರಿಯವರು ಉತ್ತರ ಕೊಡುತ್ತಿದ್ದಾರೆ.

ಗೊಂದಲ

ಶ್ರೀ ಮಲ್ಲಿಕಾರ್ಜುನ ನಾಗಪ್ಪ :- ಅಲ್ಲಿ ಏನು ನಡೆದಿದೆ ಎನ್ನತಕ್ಕಂಥದ್ದು ನಿಮಗೆ ಗೊತ್ತಿದೆ. ಆದ್ದರಿಂದ ಇಲ್ಲಿ ಈ ರೀತಿಯಾಗಿ ಹೇಳುವುದಕ್ಕೆ ಹೋಗಬೇಡಿ.

ಗೊಂದಲ

ಉಪಾಧ್ಯಕ್ಷರು :- ಮಾನ್ಯ ಸಚಿವರು ಮೊದಲು ಮಾತನಾಡುವುದಕ್ಕೆ ಅವಕಾಶ ಕೊಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಉಪಾಧ್ಯಕ್ಷರೆ, ಮೊದಲು ಸಚಿವರು ಮಾತನಾಡುವುದಿಕ್ಕೆ ಅವಕಾಶ ಕೊಡಿ. ಆನಂತರ ಅವರು ಕ್ಲಾರಿಫಿಕೇಶನ್ ಕೇಳಲಿ

ಉಪಾಧ್ಯಕ್ಷರು :- ಮೊದಲು ಸಚಿವರು ಮಾತನಾಡುವುದಕ್ಕೆ ಅವಕಾಶ ಕೊಡಿ. ಅವರು ಸ್ಟೇಟ್‌ಮೆಂಟ್ ಮಾಡಿದ ಮೇಲೆ ನೀವು ಏನಾದರು ಕ್ಲಾರಿಫಿಕೇಶನ್ ಕೇಳಿ.

ಶ್ರೀ ಪಿ.ಜಿ. ಆರ್. ಸಿಂಧ್ಯ :- ಮಾನ್ಯ ಉಪಾಧ್ಯಕ್ಷರೆ, ನಾನು ಈಗಾಗಲೇ ಕ್ಲಾರಿಫಿಕೇಶನ್ ಕೇಳಿದ್ದೇನೆ. ಮಾನ್ಯ ಗೃಹ ಸಚಿವರು ಬಹಳ ಮುಖ್ಯವಾಗಿ ನಮ್ಮ ರಾಜ್ಯದಲ್ಲಿ ಬಂದಿರತಕ್ಕಂಥ ಬರಗಾಲದ ರಿಲೀಫ್‌ಗೆ ಮಾನಿಟರ್ ಮಾಡತಕ್ಕಂಥ ಒಂದು ಸೆಲ್‌ಗೆ ಚೀಫ್ ಆಗಿದ್ದಾರೆ. ನ್ಯಾಯಬದ್ಧವಾಗಿ ಈ ವಿಷಯಕ್ಕೆ ಅವರೇ ಉತ್ತರ ಕೊಡಬೇಕಾಗಿತ್ತು. ಆದರೆ, ಮಾನ್ಯ ಮಲ್ಲಿಕಾರ್ಜುನ ನಾಗಪ್ಪನವರು ಕೊಡುತ್ತಿರುವ ಉತ್ತರ ನಮಗೆ ಸಮಾಧಾನ ಇದೆ. ಈಗ ಇರತಕ್ಕಂಥ ಡಿಸ್‌ಪ್ಯೂಟ್ ಏನೆಂದರೆ, ಬಡತನದಿಂದ ಮತ್ತು ಸಾಲದಿಂದ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆಂದು ನಾವು ಹೇಳುತ್ತಿದ್ದೇವೆ. ಆದರೆ ಇಲ್ಲವೆಂದು ನೀವು ಹೇಳುತ್ತಿದ್ದೀರಿ. This you give it to the NHRC ಎನ್.ಹೆಚ್.ಆರ್.ಸಿ. ಅವರಿಗೆ ಕೊಡುವುದಕ್ಕೆ ನಿಮಗೇನು ತೊಂದರೆ? It is a very fair body. ಇದರಲ್ಲಿ ಸುಪ್ರೀಂ ಕೋರ್ಟ್‌ನ ಜಡ್ಜ್ ಇರುತ್ತಾರೆ. Let them probe into the matter, somewhere or the other, truth has to come out. ಸತ್ಯಾಂಶ ಆಚೆಗೆ ಬರಬೇಕೆಂಬ ಉದ್ದೇಶದಿಂದ ಅವರಿಗೆ ಕೊಡಿ ಎಂದು ನಾವು ಹೇಳುತ್ತಿದ್ದೇವೆ. ನಿಮಗೆ ಗೊತ್ತಿರುವ ಹಾಗೆ, ಎನ್.ಹೆಚ್.ಆರ್.ಸಿ. ಗೆ ನೇಮಕ ಮಾಡಬೇಕಾದರೆ ಸಂಬಂಧಪಟ್ಟಂಥ ರಾಜ್ಯದ ಮುಖ್ಯಮಂತ್ರಿಯವರು ಮತ್ತು ಮುಖ್ಯ ನ್ಯಾಯಧೀಶರು ಹಾಗು ರಾಜ್ಯಪಾಲರೆಲ್ಲರೂ ಕೂಡ ಒಪ್ಪಿಗೆ ಕೊಡಬೇಕಾಗುತ್ತದೆ. ಮತ್ತೆ ಇದೇ ರೀತಿಯಾಗಿ ರಾಷ್ಟ್ರಪತಿಗಳು ಮತ್ತು ಪ್ರಧಾನಮಂತ್ರಿಗಳು ಹಾಗೂ ಮುಖ್ಯ ನ್ಯಾಯಧೀಶರು ಕೇಂದ್ರದಲ್ಲಿ ಎನ್.ಹೆಚ್. ಆರ್.ಸಿ. ಗೆ ಒಪ್ಪಿಗೆ ಕೊಡುತ್ತಾರೆ. N.H.R.C. is a very fair body ಸುಮ್ಮನೆ ಏಕೆ ಡಿಬೇಟ್ ಮಾಡಿಕೊಳ್ಳತಕ್ಕಂಥದ್ದು. ಮೂರು ವರ್ಷಗಳ ಹಿಂದೆ ಸತ್ತವರ ಕುಟುಂಬದವರಿಗೆ ಪರಿಹಾರ ಸಿಕ್ಕಿರಲಿಲ್ಲ. ಆಗ ಡಾ|| ವೀರೇಶ್ ವರದಿಯು ನಮ ಬಂತು, ಅದು ಬಂದ ಮೇಲೂ ಸತ್ತವರ ಪೋಸ್ಟ್ ಮಾರ್ಟ್‌ಂ ಮಾಡುವುದಕ್ಕೆ ಮೂರು ವರ್ಷವಾಗುತ್ತದೆ. ಈಗ ಇನ್ನು ಮೂರು ವರ್ಷಬೇಕು ಎಂದು ಹೇಳುತ್ತೀರಿ. Even assuming all that, ನೀವು ಮಾಡುತ್ತೀರೆಂದು ನಾನು ಒಪ್ಪಿಕೊಳ್ಳುತ್ತೇನೆ. ನ್ಯಾಷನಲ್ ಹ್ಯೂಮನ್ ರೈಟ್ಸ್ ಕಮಿಷನ್‌ಗೆ ಕರ್ನಾಟಕದಲ್ಲಿ ಇಷ್ಟೊಂದು ಸಂಖ್ಯೆಯಲ್ಲಿ ಆತ್ಮಹತ್ಯೆಗಳು ಆಗುತ್ತಿವೆ, ನಾವು ಹೇಳುತ್ತೇವೆ ಹಸಿವಿನಿಂದ, ಬಡತನದಿಂದ ಮತ್ತು ಸರ್ಕಾರದ ನಿರ್ಲಕ್ಷ್ಯ ಧೋರಣೆಯಿಂದ ಎನ್ನುವಂಥದ್ದು. Let the NHRC probe, Why can't the Home Minister agree for this proposition?

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಉಪಾಧ್ಯಕ್ಷರೆ, ಇದು ಎಲ್ಲರಿಗೂ ಅಧಿಕಾರವಿದೆ, ನ್ಯಾಷನಲ್ ಹ್ಯೂಮನ್‌ರೈಟ್ಸ್ ಕಮಿಷನ್ ಮುಂದೆ ಇವರು ಹೋಗಬಹುದು, ಸೋವ್ರೋ ಮೊಟೋ ಅವರು ಬರಬಹುದು. ಬೇಡವೆಂದು ಯಾರು ಹೇಳುತ್ತಾರೆ. ಆದರೆ ನೀವು ನಮಗೆ ಏಕೆ ಹೇಳುತ್ತೀರಿ, ಆಗಿದೆ ಎನ್ನುವ ಬಗ್ಗೆ ನಿಮಗೆ ಭಾವನೆ ಇದ್ದರೆ ಹೋಗಿ. ಇಂತಹ ಕೇಸ್‌ಗಳಲ್ಲಿ ಹಾಕಿದ್ದೇವೆಂದು ಹೇಳಿ. ಇದು ಏನಾಗುತ್ತಿದೆ. ಎಂದರೆ ವಿತ್ತಂಡವಾದ . ಹಿಂದೆ ಮಾನ್ಯ ಸಿಂಧ್ಯಾಜಿಯವರೇ ಹೇಳಿದ್ದರು. ಒಂದು ಕಮಿಟಿಯನ್ನು ಮಾಡಿ, ಎಲ್ಲ ಕಡೆ ಹೋಗಲಿ, ನಿಜವಾಗಿ ಅದು ಕಾಂಪೆನ್‌ಸೇಷನ್ ಬಗ್ಗೆ ಕೂಡ ಕೊಡತಕ್ಕಥಂದ್ದು ಆಗುತ್ತದೆ ಎನ್ನುವ ಸಲಹೆಯನ್ನು ಕೊಟ್ಟವರೂ ಸಹ ಅವರೇ. ಈಗ ಆ ಸಲಹೆಯ ಪ್ರಕಾರ ನಾವು ನಡೆದುಕೊಳ್ಳುತ್ತಿದ್ದೇವೆಂದು ಹೇಳಿದರೆ ಇದು ಸರಿಯಿಲ್ಲವೆಂದು ಹೇಳುವವರೂ ಅವರೇ.

ಶ್ರೀ ಪಿ.ಜಿ.ಆರ್. ಸಿಂಧ್ಯ :- ಮಾನ್ಯ ಉಪಾಧ್ಯಕ್ಷರೆ, ಇದು ನಮ್ಮ ಮೇಲೆ ಗೂಬೆ ಕೂಡಿಸುವುದಕ್ಕೆ ಮಾಡುತ್ತಿರುವ ಪ್ರಯತ್ನ. ನಾನು ಏನು ಹೇಳಿದೆ, ಮಾನ್ಯ ಮುಖ್ಯಮಂತ್ರಿಯವರು ಬಹಳ

ಬುದ್ಧಿವಂತರು, ಅವರ ಪಕ್ಕದಲ್ಲಿ ಇವರು ಕುಳಿತುಕೊಂಡಿರುವುದರಿಂದ ಅವರಿಗೂ ಕೂಡ ಮಾನ್ಯ ಮುಖ್ಯಮಂತ್ರಿಗಳ ತರಹ ಸುಳ್ಳು ಹೇಳುವ ಕಾಯಿಲೆ ಬಂದು ಬಿಟ್ಟಿದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಮಾನ್ಯ ಉಪಾಧ್ಯಕ್ಷರೆ, ನೀವು ಹೇಳಿದ್ದು ರೆಕಾರ್ಡ್‌ನಲ್ಲಿ ಅಸಿಸ್ಟೆಂಟ್ ಕಮಿಷನರ್ ಲೆವಲ್ ಕಮಿಟಿ ಮಾಡಿ ಎಂದು ಹೇಳಿರುತ್ತೀರಿ ಅದರ ಬಗ್ಗೆ ಮಾನ್ಯ ಕರಡಿ ಸಂಗಣ್ಣನವರಿಗೂ ಗೊತ್ತಿದೆ. ಗೊತ್ತಿದ್ದರೂ ಕೂಡ ಪದೇ ಪದೇ ರೈತರು ಸಾಲದಿಂದ ಸತ್ತರು, ಹಸಿವಿನಿಂದ ಸತ್ತರು ಎಂದರೆ ಹೇಗೆ? ಅವರು ಹೋಟೆಲ್ ಇಟ್ಟಿರುವುದನ್ನು ಹೇಳಿದರು, ಅವರಿಗೆ 4 ಎಕರೆ ಜಮೀನು ಇದ್ದದ್ದು ಹೇಳಿದರು, ಅವರ ಮನೆಯೊಳಗೆ ಏನಿತ್ತು ಎಂಬುದು ಎಲ್ಲವು ಕೂಡ ಅವರಿಬ್ಬರಿಗೂ ಸ್ಪಷ್ಟವಾಗಿ ಗೊತ್ತಿದೆ. ಗೊತ್ತಿರದ್ದರೂ ಕೂಡ ಈ ವಾದ-ವಿವಾದವನ್ನು ಮಾಡಿಕೊಂಡು ಹೋಗುತ್ತಿದ್ದಾರೆ ಮುಂಡರಗಿಯ ಶ್ರೀ ಎಸ್.ಎಸ್. ಪಾಟೀಲ್‌ರು ಇನ್ನೂ ದೂರ ಇದ್ದಾರೆ, ಆ ಮಾತು ಬೇರೆ. ಗೊತ್ತಿದ್ದು ಪದೇ ಪದೇ ಹಸಿವಿನಿಂದ ಸತ್ತಿದ್ದಾರೆಂದರೆ ಹೇಗೆ?

ಶ್ರೀ ಎಸ್.ಎಸ್. ಪಾಟೀಲ್ :- ಮಾನ್ಯ ಉಪಾಧ್ಯಕ್ಷರೆ, ಇವರ ಸರ್ಕಾರ ಏನಾಗಿದೆ ಎಂದರೆ. ಇನ್ನು 51 ಜನ ಸಾಯುವುದಕ್ಕೆ ಸಾಮೂಹಿಕವಾಗಿ...

ಶ್ರೀ ಜಗದೀಶ್ ಶೆಟ್ಟರ್ :- ಮಾನ್ಯ ಉಪಾಧ್ಯಕ್ಷರೆ, ಆರು ಜನ ಸಾಮೂಹಿಕ ಆತ್ಮಹತ್ಯೆಯನ್ನು ಮಾಡಿಕೊಂಡಿದ್ದಾರೆ, ಅದಕ್ಕಾಗಿ ನಾವು ಇದನ್ನು ನ್ಯಾಯಾಂಗ ತನಿಖೆಗೆ ಕೊಡಿ ಎಂದು ಒತ್ತಾಯವನ್ನು ಮಾಡುತ್ತಿದ್ದೇವೆ

ಶ್ರೀ ಬಿ. ಸೋಮಶೇಖರ್ :- ಮಾನ್ಯ ಉಪಾಧ್ಯಕ್ಷರೆ, 51 ಜನ ರೈತರು ಸಾಮೂಹಿವಾಗಿ ಆತ್ಮಹತ್ಯೆ ಮಾಡಿಕೊಳ್ಳುವ ಸಂದರ್ಭದಲ್ಲಿದ್ದಾರೆ. ಅದರ ಬಗ್ಗೆ ಸರ್ಕಾರ ಏನೂ ಪ್ರತಿಕ್ರಿಯೆ ಮಾಡಿಲ್ಲ, ನಾಳೆ ಇದೊಂದು ಅಚಾತುರ್ಯವಾದರೆ ಇನ್ನೊಂದು ದೊಡ್ಡ ಎಂಬರಾಸ್‌ಮೆಂಟ್ ಆಗುತ್ತದೆ. ಅದರ ಬಗ್ಗೆ ಸರ್ಕಾರ ಏನಾದರೂ ಹೇಳಬೇಕಾಗುತ್ತದೆ. ಆದರೆ ಇಲ್ಲಿ ಏನೂ ಉತ್ತರವನ್ನು ಕೊಟ್ಟಿಲ್ಲ, ಅದು ಬಹಳ ಗಾಭರಿಯಾಗುವಂಥ ವಿಚಾರ. 51 ಜನರು ಆತ್ಮಹತ್ಯೆ ಮಾಡಿಕೊಳ್ಳುವುದಕ್ಕೆ ನಾಳೆಯಿಂದಲೇ ತಯಾರಾಗಿದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್ :- ಮಾನ್ಯ ಉಪಾಧ್ಯಕ್ಷರೆ, ಅವರು ಏನು ಮಾಡಿಕೊಂಡರು ಎನ್ನುವುದನ್ನು ಹೇಳಬೇಕಾಗುತ್ತದೆ, ಅವರು ಉರುಲು ಹಾಕಿಕೊಂಡರೋ ಅವರನ್ನು ಅರೆಸ್ಟ್ ಮಾಡಿದರೋ? ಅದು ತಮ್ಮ ಜಿಲ್ಲೆಯದು ಇರುವುದರಿಂದ ಅದನ್ನು ಹೇಳಬೇಕಾಗುತ್ತದೆ.

ಉಪಾಧ್ಯಕ್ಷರು :- ತಾವು ಮೊದಲು ಕೇಳಿ, ಲೆಟ್ ಹಿಮ್ ಕಂಪ್ಲೀಟ್.

ಶ್ರೀ ಎಸ್.ಎಸ್. ಪಾಟೀಲ್ :- ಮಾನ್ಯ ಉಪಾಧ್ಯಕ್ಷರೆ, ಅವರು ಅಷ್ಟನ್ನು ಮಾತ್ರ ಹೇಳಿದರು, ಹೊಸದನ್ನು ಅವರು ಏನೂ ಹೇಳಲಿಲ್ಲ ಅವರು ಅದರಿಂದ ಸತ್ತಿಲ್ಲ, ಅದು ಕರಡಿ ಸಂಗಣ್ಣರವರಿಗೆ ಗೊತ್ತಿದೆ ಎಂದು ಅವರ ಮೈಮೇಲೆ ಹಾಕುತ್ತಾರೆ.

ಉಪಾಧ್ಯಕ್ಷರು :- ಮಾನ್ಯ ಸಚಿವರು ಮಾತನಾಡಿ ಮುಗಿಸುವುದಕ್ಕಾದರೂ ನೀವು ಅವಕಾಶವನ್ನು ಕೊಡಿ.

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ :- ಮಾನ್ಯ ಉಪಾಧ್ಯಕ್ಷರೆ, ಇರತಕ್ಕಂಥ ವಿಷಯವನ್ನು ನಾನು ಯಾವ ಮುಚ್ಚುಮರೆ ಇಲ್ಲದೆ ಸದನದ ಮುಂದಿಟ್ಟಿದ್ದೇನೆ. ಬೇರೆ ಹೇಳುವ ಪ್ರಶ್ನೆಯೇ ಇಲ್ಲ. ಹುಟ್ಟಿಸಿ ಹೇಳುವಂಥ ಅವಶ್ಯಕತೆಯೂ ಇಲ್ಲ. ಅವರು ಹಿಂದೆ ಸಚಿವರಾಗಿ ಕೆಲಸವನ್ನು ಮಾಡಿದ್ದಾರೆ, ಅವರಿಗೂ ಸಾಕಷ್ಟು ಅನುಭವ ಇದೆ. ಮಾನ್ಯ ಕರಡಿ ಸಂಗಣ್ಣನವರಿಗೂ ನನ್ನ ಜಿಲ್ಲೆಯೇ ಬರುತ್ತದೆ,

ಕುಷ್ಟಗಿ ಅಥವಾ ಕೊಪ್ಪಳ ಜಿಲ್ಲೆಯ ಪ್ರತಿಯೊಂದು ವಿಷಯವೂ ಅವರಿಗೆ ಗೊತ್ತಿದೆ. ಇವತ್ತು ನಾನು ಏನು ಹೇಳಿದನೆಂದರೆ ಡಾ|| ವೀರೇಶ್ ವರದಿಯ ಪ್ರಕಾರ ಇವತ್ತು ಅಸಿಸ್ಟೆಂಟ್ ಕಮಿಷನರ್ ಲೆವಲ್‌ನಲ್ಲಿ ಒಂದು ಕಮಿಟಿಯನ್ನು ಮಾಡಿರುತ್ತೇವೆ. ಆ ಒಂದು ಕಮಿಟಿಯ ರಿಪೋರ್ಟ್ ಬಂದಮೇಲೆ ಯರು ನಿಜವಾಗಿ ರೈತರು ಇರುತ್ತಾರೆ ಅವರಿಗೆ ಕೊಡುವುದಕ್ಕೆ ಒಂದು ಆದೇಶವನ್ನು ಈಗಾಗಲೇ ಹೊರಡಿಸಿರುತ್ತದೆ. ಅದರ ಬಗ್ಗೆ ಬೇರೆ ಏನೂ ಅನುಮಾನವಿಲ್ಲ. ಕಳೆದ ಎರಡು ಮುರು ದಿವಸಗಳ ಹಿಂದೆ ಹಾವೇರಿ ಜಿಲ್ಲೆಯಲ್ಲಿ 51 ಜನ ರೈತರ ಬಗ್ಗೆ ಇಲ್ಲಿ ಪ್ರಸ್ತಾಪವನ್ನು ಮಾಡಿದರು. ಕ್ರಾಪ್ ಇನ್‌ಷ್ಯೂರೆನ್ಸ್ ಬಂದಿಲ್ಲ. ಆಮೇಲೆ ಬಡ್ಡಿ ಮನ್ನಾ ಮಾಡುವುದರ ಬಗ್ಗೆಯೂ ಹೇಳಿದರು. ಈಗಾಗಲೇ ಅದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಉತ್ತರವನ್ನು ಕೊಟ್ಟಿದ್ದಾರೆ. ಇನ್‌ಷ್ಯೂರೆನ್ಸ್ ಕಂಪನಿಯ ಜೊತೆ ಈಗಾಗಲೇ ಚರ್ಚೆಯನ್ನು ಮಾಡಿದ್ದಾರೆ. ಇನ್‌ಷ್ಯೂರೆನ್ಸ್ ದುಡ್ಡು ಬಂದಮೇಲೆ ಕೊಡುತ್ತೇವೆಂದು ಹೇಳಿದ್ದಾರೆ.

ಶ್ರೀ ಎಸ್.ಎಸ್. ಪಾಟೀಲ್ :- ಮಾನ್ಯ ಉಪಾಧ್ಯಕ್ಷರೆ, ಆ 51 ಜನರ ಪರಿಸ್ಥಿತಿ ಏನಾಯಿತು ಎನ್ನುವುದರ ಬಗ್ಗೆ ತಕ್ಷಣ ಉತ್ತರವನ್ನು ನೀವು ಹೇಳಬೇಕು. ಅವರು ಏನು ಉರುಳು ಹಾಕಿಕೊಂಡರೋ ಅಥವಾ ಅದನ್ನು ತಡೆಹಿಡಿದಿರೋ ಅಥವಾ ಏನು ಮಾಡಿದಿರಿ ಎಂಬ ಬಗ್ಗೆ ನಮಗೆ ಉತ್ತರ ಹೇಳಬೇಕು. ಇವರಿಗೆ ಎಲ್ಲಾ ಮೆಸೇಜ್ ಬಂದಿರುತ್ತದೆ.

ಉಪಾಧ್ಯಕ್ಷರು :- ನೀವು ಅದನ್ನು ನಂತರ ಕೇಳಿ, ಮಾನ್ಯ ಮಂತ್ರಿಗಳು ಮೊದಲು ಉತ್ತರವನ್ನು ಕೊಡಲಿ. ಆಮೇಲೆ ಮತ್ತೆ ಏನಾದರೂ ಕೇಳುವುದಿದ್ದರೆ ಕೇಳಿ.

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ :- ಮಾನ್ಯ ಉಪಾಧ್ಯಕ್ಷರೆ, ಮನ್ಯ ಸದಸ್ಯರುಗಳು ಕೊಟ್ಟಿರುವ ಸಲಹೆಯನ್ನು ಸರ್ಕಾರ ಬಹಳ ಗಂಭೀರವಾಗಿ ಆಲೋಚನೆಯನ್ನು ಮಾಡಿದೆ. ನಾವು ಏನೂ ಸುಮ್ಮನೆ ಕುಳಿತುಕೊಂಡಿರುವುದಿಲ್ಲ. ಅವರಿಗೆ ರೈತರ ಬಗ್ಗೆ ಎಷ್ಟು ಕಾಳಜಿ ಇದೆ ಅದರ 100 ಪಟ್ಟು ಕಾಳಜಿ ಈ ಭಾಗದ ಜನರಿಗೆ ಇದೆ. ಅದರ ಬಗ್ಗೆ ಯಾವ ತೊಂದರೆಯೂ ಇಲ್ಲ. ನಾವು ಕೂಡ ರೈತರ ಪರವಾಗಿಯೇ ಅಸೆಂಬ್ಲಿಗೆ ಗೆದ್ದು ಬಂದಿರುತ್ತವೆ, ನಾವೇನೂ ಬೇರೆ ಕಡೆಯಿಂದ ಗೆದ್ದು ಬಂದಿಲ್ಲ.

ಶ್ರೀ ಶಿವಾನಂದ ಎಸ್. ಪಾಟೀಲ್ :- ಮಾನ್ಯ ಉಪಾಧ್ಯಕ್ಷರೆ, ನೀವು ಬರೀ ಡಾ|| ರಾಜಕುಮಾರ್ ಬಗ್ಗೆ ಕಾಳಜಿಯನ್ನು ಮಾಡುತ್ತೀರಿ. I stund by it I can prove it clso

ಶ್ರೀ ಮಲ್ಲಿಕಾರ್ಜುನ ನಾಗಪ್ಪ :- ಮಾನ್ಯ ಉಪಾಧ್ಯಕ್ಷರೆ, ನಿಜವಾಗಿ ಎಷ್ಟು ಜನ ರೈತರ ಆತ್ಮಹತ್ಯೆಯಾಗಿದೆ ಎನ್ನುವ ಬಗ್ಗೆ ಲಿಸ್ಟನ್ನು ಕೊಡುತ್ತೇವೆ, ನೀವು ಹೇಳುವುದು ಈಗ ಅದು ಬೇಕಿಲ್ಲ. ಅದನ್ನು ನೀವು ದೊಡ್ಡದು ಮಾಡುವ ಅವಶ್ಯಕತೆ ಇಲ್ಲ. ಇರತಕ್ಕಂಥ ಸಮಸ್ಯೆಯನ್ನು ಯಾವ ತರಹವಾಗಿ ಬಗೆಹರಿಸಬೇಕು. ಮುಂದೆ ಈ ತರಹ ಆಗಬಾರದು ಎನ್ನುವ ಬಗ್ಗೆ ನಾವು ಚರ್ಚೆ ಮಾಡಿದರೆ ಅದು ಒಳ್ಳೆಯ ವಿಚಾರ. ಮಾನ್ಯ ಶಿವಾನಂದ ಪಾಟೀಲರೇ ನನಗೆ ಗೊತ್ತು. ನಾವು ನೀವು ಎಲ್ಲ ಒಂದೇ ಜಿಲ್ಲೆಯವರಿದ್ದೇವೆ. ಅಂದರೆ ಪಕ್ಕದ ಜಿಲ್ಲೆ ಏನೂ ದೂರವಿಲ್ಲ. ನಿಮ್ಮದು ಬಿಜಾಪುರ-ಬಾಗಲಕೋಟೆ ಒಂದು ಜಿಲ್ಲೆಯಿದ್ದರೆ, ನಮ್ಮ ರಾಯಚೂರು-ಕೊಪ್ಪಳ ಒಂದೇ ಜಿಲ್ಲೆ ಇತ್ತು. ಎಲ್ಲರೂ ಪಕ್ಕಪಕ್ಕದ ಜಿಲ್ಲೆಯವರಾಗಿದ್ದೇವೆ. ಇವತ್ತು ಆ ರಿಪೋರ್ಟ್ ಪ್ರಕಾರ ನಿಜವಾದ ರೈತರು ಯಾರು ಸತ್ತಿದ್ದಾರೆ ಅಂಥವರಿಗೆ ಸಹಾಯ ಮಾಡತಕ್ಕ ಅಧಿಕಾರ ಸರ್ಕಾರಕ್ಕಿದೆ. ಆ ಪ್ರಕಾರ ನಾವು ಆದೇಶ ಕೊಟ್ಟಿದ್ದೇವೆ. ಇನ್ನು ಇವತ್ತು ಬರಗಾಲ ಕಾಮಗಾರಿ ಆಗಬೇಕೆಂದು ಹೇಳಿದರು. ಅದು ನಿಜ, ನಾವೂ

ಕೂಡ ಮೊನ್ನೆ ದಿವಸ ಕೇಂದ್ರ ಸರ್ಕಾರಕ್ಕೆ ಮನವಿಯನ್ನು ಕೊಟ್ಟಿದ್ದೇವೆ. ಮಾನ್ಯ ರಾಜನಾಥಸಿಂಗ್‌ರವರಿಗೂ ಕೂಡ ಭೇಟಿಯಾಗಿ ಕೊಟ್ಟಿರುತ್ತೇವೆ. ತತ್‌ಕ್ಷಣ ನಮ್ಮ ರಾಜ್ಯಕ್ಕೆ 9.99 ಲಕ್ಷ ಮೆಟ್ರಿಕ್ ಟನ್ ಕಾಳು ಕೇಳಿದ್ದೇವೆ, 1888 ಕೋಟಿ ರೂ. ಹಣ ಕೇಳಿರುತ್ತೇವೆ. ಅದರಲ್ಲಿ ನೀವು 1:3 ಭಾಗವಾದರೂ ಕೊಟ್ಟು ನಮ್ಮ ರಾಜ್ಯದಲ್ಲಿರತಕ್ಕಂಥ ಬರದ ಪರಿಸ್ಥಿತಿಗೆ ಅನುಕೂಲ ಮಾಡಿಕೊಡಿ ಎಂದು ಕೇಳಿಕೊಂಡಿದ್ದೇವೆ.

ಗೊಂದಲ

ಶ್ರೀ ಜಗದೀಶ್ ಶೆಟ್ಟರ್ :– ಮಾನ್ಯ ಉಪಾಧ್ಯಕ್ಷರೆ. ಪರಿಹಾರವನ್ನು ಎಷ್ಟು ಕೊಟ್ಟಿದ್ದೇವೆಂದು ಹೇಳುವುದಕ್ಕೆ ತಯಾರಿಲ್ಲ. ಇವರು ರೈತ ವಿರೋಧಿ ಧೋರಣೆಯನ್ನು ಮಾಡುತ್ತಿದ್ದಾರೆ. ಪರಿಹಾರವನ್ನು ಕೊಡುವುದಕ್ಕೂ ಇವರು ತಯಾರಿಲ್ಲ. ಇಲ್ಲಿಯವರೆಗೂ ಅದು ಎನ್‌ಕ್ವೈರಿ ಆಗಲಿಲ್ಲ. ಆ ನ್ಯಾಯಾಂಗ ತನಿಖೆ ಬಗ್ಗೆಯೂ ಹೇಳಲಿಲ್ಲ. ರೈತ ವಿರೋಧಿ ಧೋರಣೆಯನ್ನು ನಾವು ಪ್ರೊಟೆಸ್ಟ್ ಮಾಡಿ ಸಭಾತ್ಯಾಗವನ್ನು ಮಾಡುತ್ತಿದ್ದೇವೆ.

(ಬಿಜೆಪಿ ಹಗೂ ಜನತಾದಳ ಸಂಯುಕ್ತ ಪಕ್ಷದ ಸದಸ್ಯರೆಲ್ಲರೂ ಸಭಾತ್ಯಾಗ ಮಾಡಿದರು)

ಶ್ರೀ ಎಂ. ಮಲ್ಲಿಕಾರ್ಜುನ ನಾಗಪ್ಪ :– ಮಾನ್ಯ ಉಪಾಧ್ಯಕ್ಷರೆ, ನಾನು ಇರತಕ್ಕಂಥ ವಿಚಾರವನ್ನು ಸರ್ಕಾರದ ಗಮನಕ್ಕೆ ತಂದಿದ್ದೇನೆ. ಇವತ್ತು ಇಡೀ ಜನತೆಗೆ ನಾವು ಮನವಿಯನ್ನು ಮಾಡಿಕೊಂಡಿದ್ದೇವೆ, ಇವತ್ತು ಈ ಸದನದ ಮುಖಾಂತರ ಮುಂದಿನ ದಿನಗಳಲ್ಲಿ ಯಾವುದೇ ಕಾರಣಕ್ಕೂ ನಮ್ಮ ರಾಜ್ಯದ ಜನತೆ ಈ ರೀತಿಯಾದ ಆತ್ಮಹತ್ಯೆಯನ್ನು ಮಾಡಿಕೊಳ್ಳಕೂಡದೆಂದು ಹೇಳಿ, ನಾನು ಜನತೆಯಲ್ಲಿ ಮನವಿಯನ್ನು ಮಾಡಿಕೊಳ್ಳುತ್ತೇನೆ. ಜನರು ಹಸಿವಿನಿಂದ ಸತ್ತಿದ್ದಾರೆನ್ನುವುದು ಸತ್ಯಕ್ಕೆ ದೂರವಾದಂಥ ಮಾತು. ನಮ್ಮ ರಾಜ್ಯದಲ್ಲಿ ಇಲ್ಲಿಯವರೆಗೆ ಯಾರೂ ಹಸಿವಿನಿಂದ ಸತ್ತಿಲ್ಲ, ಸಾಯುವುದಕ್ಕೂ ಅವಕಾಶವಿಲ್ಲವೆಂದು ನಾನು ತಮ್ಮ ಮೂಲಕ ತಿಳಿಸುತ್ತೇನೆ.

ಶ್ರೀ ಪಿ.ಜಿ. ಆರ್. ಸಿಂಧ್ಯ :– ಮಾನ್ಯ ಉಪಾಧ್ಯಕ್ಷರೆ, ನಾನು ಎರಡು ಪ್ರಮುಖವಾಗಿರತಕ್ಕಂಥ ವಿಚಾರಗಳನ್ನು ಪ್ರಸ್ತಾಪ ಮಾಡಿರುತ್ತೇನೆ. ಅದಕ್ಕೆ ನಾನು ಮಾನ್ಯ ಮಂತ್ರಿಗಳಿಂದ ಉತ್ತರವನ್ನು ನಿರೀಕ್ಷೆ ಮಾಡುತ್ತೇನೆ. ನೀವು ರಾಜ್ಯದ ಎಲ್ಲಾ ಕಡೆಗಳಲ್ಲಿ ಬಡತನ ರೇಖೆಯ ಕೆಳಗಿರುವವರಿಗೆ ಕೇಂದ್ರ ಸರ್ಕಾರದ ಸಹಾಯದಿಂದ ಹಳದಿ ಕಾರ್ಡ್‌ನ್ನು ಕೊಟ್ಟಿದ್ದೀರಿ ಸ್ವಾಮಿ. ನಮ್ಮ ಕಡೆ ಹಳದಿ ಕಾರ್ಡ್ ಎಂದು ಕರೆಯುತ್ತಾರೆ. ನಿಮ್ಮ ಗುಲ್ಬರ್ಗಾ ಕಡೆ ಏನೆಂದು ಕರೆಯುತ್ತಾರೆ ನನಗೆ ಗೊತ್ತಿಲ್ಲ. ಇವರು ಹೇಳುವ ಪ್ರಕಾರವೇ 121 ತಾಲ್ಲೂಕುಗಳಲ್ಲಿ ಬರಗಾಲ ಇದೆ.ನೀವು ಈಗ 5 ಅಥವಾ 10 ಕೆಜಿ. ಅಕ್ಕಿಯನ್ನು ಕೊಡುತ್ತಿದ್ದೀರಿ ಅದನ್ನು ಕನಿಷ್ಟ ಪಕ್ಷ ಒಂದು ತಿಂಗಳಿಗೆ 35 ಕೆಜಿ ಅಕ್ಕಿಯನ್ನು ಕೊಡುವುದಕ್ಕೆ ಸಾಧ್ಯವೇ? ಹಳದಿ ಕಾರ್ಡುಗಳ ಎಷ್ಟು ಇವೆ? ಇಡೀ ರಾಜ್ಯದಲ್ಲಿ 4 ಅಥವಾ 5 ಲಕ್ಷ ಇರಬಹುದು. ತಮಗೆ ಗೊತ್ತಿರುವ ಹಾಗೆ ಈ ಹಳದಿ ಕಾರ್ಡ್‌ಗಳ ಸಂಖ್ಯೆಯ ಬಗ್ಗೆ ಬಹಳ ಡಿಸ್‌ಪ್ಯೂಟ್ ಇದೆ. ಇರತಕ್ಕಂಥದ್ದು ಎರಡೂವರೆ ಲಕ್ಷ ಆದ್ದರಿಂದ ಸರ್ಕಾರಕ್ಕೆ ಅಕ್ಕಿಯನ್ನು ಜಾಸ್ತಿ ಮಾಡುವುದಕ್ಕೆ ಏನು ತೊಂದರೆ ಎನ್ನುವುದು ನನಗೆ ಅರ್ಥವಾಗುತ್ತಿಲ್ಲ. ಏಕೆಂದರೆ, ಇವರು ಹಸಿವಿನಿಂದ ಸತ್ತಿದ್ದಾರೆಂದು ಹೇಳುತ್ತಿದ್ದಾರೆ. ಹಸಿವು ಆದರೆ ಪಕ್ಕದ ಮನೆಯಿಂದ ಹಸಿ ಹಿಟ್ಟನ್ನಾದರೂ ತಂದು ಗಂಜಿ ಮಾಡಿಕೊಂಡು ಕುಡಿಯುತ್ತಾರೆ. ಮಾನ್ಯ ಖರ್ಗೆಯವರು ಹೇಳಿರತಕ್ಕಂಥ ವಿಚಾರವನ್ನು ನಾನು ಒಪ್ಪಿಕೊಳ್ಳುತ್ತೇನೆ. ಆವತ್ತಿನ ದಿವಸ ಹಸಿವಿನಿಂದ ಸಾಯದೆ ಇರಬಹುದು, ಓವರ್ ದಿ ಟೈಮ್, ಆ ಬಡತನ ಹಸಿವು, ಸಾಲ, ಹಿಂಸೆ, ಚಿತ್ರಹಿಂಸೆ ಇದರಿಂದ ಸತ್ತಿರುತ್ತಾರೆ, ಇದಕ್ಕೆ ಕೊಡುವುದಕ್ಕೆ ತೊಂದರೆ ಏನು? ನನಗೆ

ಇದು ಗೊತ್ತಾಗಬೇಕು, ಇದು ಮೊದಲನೆಯದು. ಇನ್ನು ಎರಡನೆಯದಾಗಿ ನಾವು ಏನು ಡಿಸ್‌ಪ್ಯೂಟ್ ಮಾಡುತ್ತಿದ್ದೇವೆ, ನೀವು ಕೊಡತಕ್ಕಂಥ ಅಂಕಿ–ಅಂಶಗಳು ಸರಿಯಲ್ಲ. ಇದನ್ನು ಎನ್‌ಹೆಚ್‌ಆರ್‌ಸಿ.ಗೆ ಕೊಡಬೇಕೆಂದು ನಾವು ಬೇಡಿಕೆಯನ್ನು ಇಡುತ್ತಿದ್ದೇವೆ. ಎನ್‌ಹೆಚ್‌ಆರ್‌ಸಿ ಗೆ ಕೊಡುವುದಕ್ಕೆ ತೊಂದರೆ ಏನು? ಎಲ್ಲಾ ಕಡೆಗಳಲ್ಲೂ ನಮ್ಮ ಮಾನ್ಯ ಮುಖ್ಯ ಮಂತ್ರಿಗಳು ನಂ:1 ಮುಖ್ಯಮಂತ್ರಿಗಳು ಎಂದು ಬಿರುದು ತೆಗೆದುಕೊಳ್ಳಬೇಕಲ್ಲಾ ಇದರಲ್ಲಿ ಕೂಡ ಅವರು ನಂ:1 ಆಗುತ್ತಾರೆ. ಇವರು ಇಷ್ಟೊಂದು ನಿಷ್ಪಕ್ಷಪಾತವಾಗಿ ತನಿಖೆಗೆ ಆದೇಶವನ್ನು ಎನ್‌ಹೆಚ್‌ಆರ್‌ಸಿಗೆ ಮಾಡಿದ್ದಾರೆ ಎನ್ನುವಂಥದ್ದೂ ಸಹಿತ ಬರುತ್ತದೆ. ಇದು ಎರಡನೆಯದು ಮೂರನೆಯದಾಗಿ, ನಾನು ಕೇಳತಕ್ಕಂಥದ್ದು ಏನೆಂದರೆ, ತತ್‌ಕ್ಷಣ ಹತ್ತು ಸಾವಿರ ರೂ.ಗಳನ್ನು ಕೊಡತಕ್ಕಂಥದ್ದು ಏನಿದೆ, ಅದು ಎರಡು–ಮೂರು ವರ್ಷಗಳಿಂದ ಅಸಿಸ್ಟೆಂಟ್ ಕಮಿಷನರ್ ಆಫೀಸಿನಲ್ಲಿ ಬಾಕಿ ಇದೆ. ಬೇಕಾದರೆ ನೀವು ಶಾಸಕರುಗಳನ್ನು ಕೇಳಿ. ಮೂರು ನಾಲ್ಕು ವರ್ಷದಿಂದ ಬಾಕಿ ಇದೆ, ಇದಕ್ಕೆ ಹೊಣೆ ಯಾರು? ಬೇಜವಾಬ್ದಾರಿಯಿಂದ ನಾವು ಕೇಳುತ್ತಿದ್ದೇವೆಂದು ತಾವು ತಿಳಿದುಕೊಳ್ಳುವುದಕ್ಕೆ ಹೋಗಬೇಡಿ. ಇದಕ್ಕೆ ಸ್ಪೆಷಿಫಿಕ್ಕಾಗಿ ಹೇಳಿ, ಇದಕ್ಕೆ ಬಹಳ ಉದ್ದವಾದ ಭಾಷಣವು ಬೇಕಾಗಿಲ್ಲ. ಈ ಮೂರು ಪಾಯಿಂಟ್‌ಗೆ ನನಗೆ ಉತ್ತರ ಬೇಕು ಸ್ವಾಮಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ :– ಮಾನ್ಯ ಉಪಾಧ್ಯಕ್ಷರೆ, ನಮ್ಮ ಫುಡ್ ಮಿನಿಸ್ಟರ್ ಬಂದ ನಂತರ ಅದರ ಮಾಹಿತಿಯನ್ನು ಒದಗಿಸಿ ಕೊಡುತ್ತೇವೆ, ಎನ್‌ಹೆಚ್‌ಆರ್‌ಸಿ ಬಗ್ಗೆ ನಾನೇ ಬಹಳ ಸ್ಪಷ್ಟವಾಗಿ ಹೇಳಿರುತ್ತೇನೆ. ಯಾವುದೇ ಗ್ರೀವೆನ್ಸಸ್ ಇದ್ದರೂ ಕೂಡ ಅವರಿಗೆ ಕೊಟ್ಟು ಹೇಳಿಕೊಳ್ಳಬಹುದು. ನಾವು ಈಗಾಗಲೇ ಹೇಳಿದ್ದೇವೆ, ನಮ್ಮ ರಾಜ್ಯದಲ್ಲಿ ಅಂತಹ ಘಟನೆಗಳು ನಡೆದಿಲ್ಲ, ಅದಕ್ಕಾಗಿ ಅದರ ಅವಶ್ಯಕತೆ ಇಲ್ಲವೆನ್ನುವ ಬಗ್ಗೆ ನಮ್ಮ ನಿಲುವು ಇದೆ ಅದನ್ನು ನಾವು ಸ್ಪಷ್ಟಪಡಿಸುತ್ತೇವೆ.

ಶ್ರೀ ಪಿ.ಜಿ. ಆರ್. ಸಿಂಧ್ಯಾ :– ನೀವು ಬರೆದುಕೊಡುವುದಕ್ಕೆ ತಯಾರು ಇದ್ದೀರಾ? I am going before the NHRC. ಎನ್‌ಹೆಚ್‌ಆರ್‌ಸಿಯವರು ಏನು ಹೇಳುತ್ತಾರೆಂದರೆ, ನಾನು ಎನ್‌ಹೆಚ್‌ಆರ್‌ಸಿಯ ಮುಂದೆ ಅಪೀಲ್ ಹಾಕಿದಾಗ ನೋಡಪ್ಪಾ ಗೌರ್ನಮೆಂಟ್ last resart ಒಂದು ವೇಳೆ ಸರ್ಕಾರ ಒಪ್ಪುವುದಿಲ್ಲ ಎಂದು ಹೇಳಿದರೆ ನಾನು ಇದನ್ನು ತೆಗೆದುಕೊಳ್ಳುವುದಕ್ಕೆ ತಯಾರಿದ್ದೇನೆ ಎನ್ನುವಂತಹ ಮಾತನ್ನು ಅವರು ಹೇಳುತ್ತಾರೆ. ನೀವು ಹೋಂ ಮಿನಿಸ್ಟರ್ ಆಗಿ ಮಾತನಾಡತಕ್ಕಂತಹ ಮಾತು ಅದು ಸರ್ಕಾರದ ಮಾತಾಗಿರಬೇಕು.

ಶ್ರೀ ಮಲ್ಲಿಕಾರ್ಜುನ ಖರ್ಗೆ :– ಮಾನ್ಯ ಉಪಾಧ್ಯಕ್ಷರೆ, ನಮ್ಮ ಮಾಹಿತಿಯ ಪ್ರಕಾರ ಕರ್ನಾಟಕ ರಾಜ್ಯದಲ್ಲಿ ಹಸಿವಿನಿಂದ ಇಲ್ಲಿಯವರೆವಿಗೆ ಯಾವುದೇ ಒಬ್ಬ ರೈತ ಸತ್ತಿಲ್ಲ ಎನ್ನತಕ್ಕಂತಹ ಇನ್‌ಫರ್ಮೇಷನ್ ಇದೆ, ಅದು ತಮಗೂ ಕೂಡ ಗೊತ್ತಿದೆ. ಆದರೆ ತಾವು ಹೇಳಿದಹಾಗೆ ಹಂತಹಂತವಾಗಿ ಅಥವಾ ಕೆಲಸ ಸಿಗದೆ ಇರುವ ಮಟ್ಟಿಗೆ ಬೇರೆ ರೀತಿಯಿಂದ ರೋಗದಿಂದ ಬಳಲಿ ಸತ್ತಂತವರು ಇರಬಹುದು ಎನ್ನತಕ್ಕಂತಹ ಆತಂಕವನ್ನು ತಾವು ವ್ಯಕ್ತಪಡಿಸಿದ್ದೀರಿ. ಅದರ ಬಗ್ಗೆ ನಾನು ಈಗಾಗಲೇ ನಮ್ಮಲ್ಲಿ ಒಂದು ಕಮಿಟಿಯನ್ನು ಮಾಡಿದ್ದೇವೆ, ಅಂತಹ ಯವುದಾದರೂ ತೊಂದರೆಗಳು ಇದ್ದರೆ ಅಂತಹ ಗ್ರೀವೆನ್ಸ್ ಇದ್ದರೆ ಆ ಕಮಿಟಿಯ ಮುಂದೆ ಹೋಗಿ ಅವರು ಪ್ರೆಸೆಂಟ್ ಮಾಡಿ ಕಾಂಪನ್‌ಸೇಷನನ್ನು ಕೂಡ ತೆಗೆದುಕೊಳ್ಳಬಹುದು, ಇಲ್ಲದಿದ್ದರೆ ನಾವು ಜಿಲ್ಲೆಯಲ್ಲಿ ಇಂತಹ ಕೇಸಸ್ ಎಷ್ಟು ಇದೆ ಎನ್ನುವುದರ ಬಗ್ಗೆ ಸಂಬಂಧಪಟ್ಟ ಜಿಲ್ಲಾಧಿಕಾರಿಗಳಿಂದ ಇನ್‌ಫರ್ಮೇಷನ್ ತರಿಸಿಕೊಡುತ್ತೇವೆ ಯಾವ ಯಾವ ಜಿಲ್ಲೆಗಳಲ್ಲಿ ಹಸಿವಿನಿಂದ ಸತ್ತಿದ್ದಾರೆ ಅಥವಾ ಇಂತಹ ಕಾರಣಕ್ಕಾಗಿ

ಸತ್ತಿದ್ದಾರೆ ಎಂಬ ಮಾಹಿತಿಯನ್ನು ಬೇಕಾದರೆ ತರಿಸಿಕೊಂಡು ತಮಗೆ ಒದಗಿಸಿಕೊಡುತ್ತೇನೆ. ಆದರೆ ಇಲ್ಲಿಯವರೆಗೆ ನಾನು ಹೇಳಿದ ಹಾಗೆ ಇದೇ ಸರ್ಕಾರವೆಂದು ಹೇಳಲಿಲ್ಲ, ಕನಾಟಕ ರಾಜ್ಯದಲ್ಲಿ ಹಿಂದಿನಿಂದಲೂ ಕೂಡ ಇಲ್ಲಿಯವರೆವಿಗೆ ಹಸಿವಿನಿಂದ ಸತ್ತಿದ್ದಾರೆ ಅಥವಾ ಅನ್ನ ಇರಲಾರದಕ್ಕೆ ಸತ್ತಿದ್ದಾರೆ ಎನ್ನುವುದು ಕಡಿಮೆ ಅಂಥ ಯಾವುದೇ ಉದಾಹರಣೆಯೂ ಕೂಡ ನಮ್ಮ ಮುಂದೆ ಬಂದಿಲ್ಲ. ಸಾಯುವುದಕ್ಕೆ ಅನೇಕ ಕಾರಣಗಳಿರಬಹುದು, ನಾನು ಇಲ್ಲವೆಂದು ಹೇಳುವುದಿಲ್ಲ. ಏಕೆಂದರೆ ಇದು minister pretation ಆಗಬಾರದು varions reasons ರೋಗದಿಂದ ಬಳಲಿ ಸತ್ತಿರಬಹುದು, ಮತ್ತೆ ಯಾವುದೇ ಕಾರಣಕ್ಕಾಗಿ ಸೂಯಿಸೈಡ್ ಮಾಡಿಕೊಂಡಿರಬಹುದು, ರೈತ ಸಾಲ ಮಾಡಿಕೊಂಡು ಸತ್ತಿರಬಹುದು ಇನ್ನು ಅನೇಕ ಕಾರಣಗಳಿರಬಹುದು. ಆದರೆ ಇದಕ್ಕೇ ನೇರವಾಗಿ ಜೋಡಿಸತಕ್ಕಂತಹದ್ದು ಸರಿಯಲ್ಲ ಎನ್ನತಕ್ಕಂತಹ ಮಾತನ್ನು ನಾನು ಹೇಳಿದ್ದೇನೆ. ಅದಕ್ಕಾಗಿ ಮಾನ್ಯ ಸದಸ್ಯರು ಇದರ ಮೇಲೆ ಹೇಳತಕ್ಕಂತಹದ್ದು ಅಂದರೆ ಈ ಮಾತಿಗೆ ಇನ್‌ಸಿಸ್ಟ್ ಮಾಡತಕ್ಕಂತಹದ್ದು ಅಷ್ಟೊಂದು ಸರಿಯಲ್ಲ. ಎನ್‌ಹೆಚ್‌ಆರ್‌ಸಿ ಮುಂದೆ ಬೇರೆ ಗ್ರಿವೆನ್ಸ್ ಇದ್ದವರು ಹೋಗುವುದಕ್ಕೆ ಅವಕಾಶವಿದೆ, ಅವರು ಹೋಗಬಹುದು.

ಉಪಾಧ್ಯಕ್ಷರು :- ಮಾನ್ಯ ಸಿಂಧ್ಯಾರವರು ಅಂಕಿಗಳಲ್ಲಿ ವ್ಯತ್ಯಾಸ ಇದೆ ಎಂದು ಹೇಳಿದ್ದಾರೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ನೋ, ನೋ, ಪುನಃ ಇದರ ಬಗ್ಗೆ ಬೇಕಾದರೆ ಜಿಲ್ಲಾಧಿಕಾರಿಗಳಿಂದ ಇನ್ನೊಂದು ಮಾಹಿತಿಯನ್ನು ತರಿಸಿಕೊಡುತ್ತೇವೆ.

ಶ್ರೀ ಪಿ.ಜಿ. ಆರ್. ಸಿಂಧ್ಯಾ :- ಸ್ವಾಮಿ, ಇರೋದು ಎರಡೂವರೆ ಲಕ್ಷ ಹಳದಿ ಕಾರ್ಡ್‌ಗಳು ತಾವು ಕನ್ಸಿಡರ್ ಮಾಡಿ You are the Chairman of that committee. ಹೇಳಿ ಅದು ಎಷ್ಟಾಗುತ್ತದೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಆ ರೀತಿಯಾಗಿ ಹೇಳುವುದಕ್ಕೆ ಬರುವುದಿಲ್ಲ. ಬಟ್ ಎನಿ ವೇ ನಾವು ಫುಡ್ ಮಿನಿಸ್ಟರ್‌ರವರು ಬಂದ ಮೇಲೆ ಅದರ ಬಗ್ಗೆ ನಾನು ವಿಚಾರಿಸಿ ಅವರಿಂದ ಸ್ಟೇಟ್‌ಮೆಂಟ್‌ನ್ನು ಮಾಡಿಸುತ್ತೇನೆ. ಇನ್ನು ಎರಡನೆಯದಾಗಿ ಹೇಳುವುದಾದರೆ, ತಾವು ಬರಗಾಲದ ಬಗ್ಗೆ ಒಂದು ಸ್ಟೇಟ್‌ಮೆಂಟ್ ಮಾಡಬೇಕೆಂದು ಕೇಳಿದ್ದೀರಿ, ಅದನ್ನು ನಾನು ಸೋಮವಾರ ದಿವಸ ಮಾಡುತ್ತೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯಾ :- ನಿನ್ನೆ ಕಾವೇರಿಯಲ್ಲಿ ನೀರು ಬಿಟ್ಟಿದ್ದಾರೆ, ಜನರು ನೀರಿಲ್ಲವೆಂದು ಹೇಳುತ್ತಿದ್ದಾರೆ. ನಿನ್ನೆ ಮಾನ್ಯ ಮುಖ್ಯಮಂತ್ರಿಗಳು ನಾಳೆ ಸ್ಟೇಟ್‌ಮೆಂಟ್ ಕೊಡುತ್ತೇನೆಂದು ಹೇಳಿದರು. ಇವತ್ತು ಜಲಸಂಪನ್ಮೂಲ ಮಂತ್ರಿಗಳೇ ಈ ಸದನದಲ್ಲಿಲ್ಲ. ಅವರು ದೆಹಲಿಗೆ ಹೋದರು. ಮೆಮೋರ್‍ಯಾಂಡಮ್‌ನ್ನು ಕೊಟ್ಟರು, ಇಲ್ಲೊಂದು ಸ್ಟೇಟ್‌ಮೆಂಟ್ ಕೂಡ ಮಾಡಲಿಲ್ಲ. ನಾವು ಕಸದಕಡ್ಡಿಗಿಂತಲೂ ಕಡಿಮೆಯಾಗಿದ್ದೇವೆ. ಇಲ್ಲಿ ವಿರೋಧಪಕ್ಷಗಳು ಸತ್ತುಹೋಗಿದೆಯಲ್ಲಾ? ನಾವು ಕಸದಕಡ್ಡಿಗಿಂತಲೂ ಕಡಿಮೆಯಾಗಿದ್ದೇವೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ :- ಇಲ್ಲಾ ಸತ್ತಿಲ್ಲ, ಬಹಳ ಜೀವಂತವಾಗಿದ್ದಾರೆಂದು ಹೇಳಿ ಹೊರಗೆ ಹೋದವರನ್ನು ಒಳಗೆ ಕರೆದುಕೊಂಡು ಬಂದು ನಾವು ಮಾತನಾಡಿಸಿದ್ದೇವೆ. ಸ್ಟೇಟ್‌ಮೆಂಟ್ ಮಾಡೋಣವೆಂದರೆ ಅದರ ಕಾಪೀಸ್ ಇಲ್ಲ, ನೀವು ಹೇಳಿ ಎಂದರೆ ಹೇಳುತ್ತೇನೆ. ಪ್ರತಿಗಳನ್ನು ಆಮೇಲೆ ಸರ್ಕ್ಯುಲೇಟ್ ಮಾಡುತ್ತೇನೆ. ಅದನ್ನು ನಾವು ಹೇಳಬೇಕಾಗುತ್ತದೆ, ಏಕೆಂದರೆ ಕಾಪಿಯಿಲ್ಲವೆಂದು ತಕರಾರು ಮಾಡುವುದು ಬೇಡ.

ಉಪಾಧ್ಯಕ್ಷರು :– ತಾವು ಸ್ಟೇಟ್‌ಮೆಂಟ್ ಮಾಡಿ.

ಶ್ರೀ ಮಲ್ಲಿಕಾರ್ಜುನ ಖರ್ಗೆ :– ನಾನು ಸೋಮವಾರ ದಿವಸ ಸ್ಟೇಟ್‌ಮೆಂಟ್ ಮಾಡುತ್ತೇನೆ.

ಉಪಾಧ್ಯಕ್ಷರು :– ಈಗ ಸದನವನ್ನು ಸೋಮವಾರ ಬೆಳಿಗ್ಗೆ 11–00 ಗಂಟೆಯವರೆಗೆ ಮುಂದೂಡುತ್ತಿದ್ದೇನೆ.

(ಸದನವು ಸಂಜೆ 4 ಗಂಟೆ 4 ನಿಮಿಷಕ್ಕೆ ಮುಂದೂಡಲ್ಪಟ್ಟು ಪುನ: ದಿನಾಂಕ: 4ನೇ ಆಗಸ್ಟ್ 2003ರ ಸೋಮವಾರದಂದು ಬೆಳಿಗ್ಗೆ 11–00 ಗಂಟೆಗೆ ಸೇರಲು ನಿಶ್ಚಯಿಸಿತು.)

ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಬಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ.

9 ಅನುಬಂಧ

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೇಂದ್ರ ಸರ್ಕಾರದ ಅಂತ್ಯೋದಯ ಅನ್ನಯೋಜನೆಯ ಅನುಷ್ಠಾನ

4191 (4870) : ಶ್ರೀ ಅಂಗಾರ ಎಸ್. (ಸೂಳ್ಯ) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಭಾರತ ಸರ್ಕಾರದ ಅಂತ್ಯೋದಯ ಅನ್ನ ಯೋಜನೆಯಡಿ ಎಷ್ಟು ಅತೀ ಕಡು ಬಡ ಕುಟುಂಬಗಳನ್ನು ಗುರುತಿಸಲಾಗಿದೆ; ಈ ಕುಟುಂಬಗಳಿಗೆ ಯವ ಯಾವ ಆಹಾರ ಧಾನ್ಯಗಳನ್ನು ಎಷ್ಟು ಪ್ರಮಾಣದಲ್ಲಿ ನೀಡಲಾಗಿದೆ; ಇದರ ದರ ಎಷ್ಟು; (ಪೂರ್ಣ ಮಾಹಿತಿ ನೀಡುವುದು)

ಆ) ಕೇಂದ್ರ ಸರ್ಕಾರಿ ಅಂತ್ಯೋದಯ ಅನ್ನ ಯೋಜನೆಯಡಿ ಎಷ್ಟು ಆಹಾರ ಧಾನ್ಯ ಬಿಡುಗಡೆ ಮಾಡಿದೆ;

ಇ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಭಾರತ ಸರ್ಕಾರದ ಅಂತ್ಯೋದಯ ಅನ್ನ ಯೋಜನೆಯಡಿ ಎಷ್ಟು ಅತೀ ಕಡು ಬಡ ಕುಟುಂಬಗಳಿವೆ; ಅವರಿಗೆ ಎಷ್ಟು ಪ್ರಮಾಣದ ಪಡಿತರ ವಿತರಿಸಲಾಗಿದೆ; (ತಾಲ್ಲೂಕುವಾರು ಮಾಹಿತಿ ನೀಡುವುದು)

ಈ) ಸುಳ್ಯ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಕೇಂದ್ರ ಸರ್ಕಾರದ ಈ ಯೋಜನೆಯಡಿ ಎಷ್ಟು ಕಡು ಬಡ ಕುಟುಂಬಗಳನ್ನು ಗುರುತಿಸಲಾಗಿದೆ; (ವಿವರವನ್ನು ಗ್ರಾಮವಾರು ನೀಡುವುದು)?

ಶ್ರೀ ರಾಮಲಿಂಗಾರೆಡ್ಡಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು)

ಅ) ರಾಜ್ಯದಲ್ಲಿ ಅಂತ್ಯೋದಯ ಅನ್ನ ಯೋಜನೆಯಡಿ ಈಗಾಗಲೆ 4,79,700 ಫಲಾನುಭವಿಗಳನ್ನು ಗುರುತಿಸಲಾಗಿದೆ ಪ್ರಸ್ತುತ ರಾಜ್ಯದಲ್ಲಿ 2,40,000 ಫಲಾನುಭವಿಗಳನ್ನು ಹೆಚ್ಚುವರಿಯಾಗಿ ಗುರುತಿಸಲು ಆದೇಶಿಸಲಾಗಿದೆ. ಅಂತ್ಯೋದಯ ಅನ್ನ ಯೋಜನೆಯಡಿ ಫಲಾನುಬವಿ ಕುಟುಂಬಗಳಿಗ ಪ್ರತಿ ಮಾಹೆ ಕೆಳಕಂಡಂತೆ ಆಹಾರ ಧಾನ್ಯಗಳನ್ನು ವಿತರಿಸಲಾಗುತ್ತಿದೆ;

ಕ್ರಮ ಸಂ.	ಆಹಾರ ಧಾನ್ಯ ಗಳ ವಿವರ	ಪ್ರಮಾಣ ಪ್ರತಿ ಪಡಿತರ ಚೀಟಿಗೆ (ಮಾಹೆಯಾನ)	ದರ ಪ್ರತಿ ಕೆ.ಜಿ.ಗೆ ರೂ. ಗಳಲ್ಲಿ
1.	ಅಕ್ಕಿ	28 ಕೆ.ಜಿ.	3.00
2.	ಗೋಧಿ	7 ಕೆ.ಜಿ.	2.00